ತಿಳಿನಗೆಯ ಕಾರಂಜಿ

ಅಪರಂಜಿ



ಬೆಳ್ಳಿ ಹಬ್ಬದ ವರ್ಷ

ಮೇ - 2008



ಈ ಲ್ಯಾಪ್‌ಟಾಪ್‌ನಲ್ಲಿ ಕೆಲಸ
ಮಾಡುಕ್ಕೇ ಆಗ್ತಾ ಇಲ್ಲ ಮೇಡಂ



ಬಿಡಿ ಪ್ರತಿ: ರೂ.10.00

ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 25
ಸಂಚಿಕೆ - 8
ಮೇ - 2008

ಸಂಪಾದಕ ಮಂಡಳಿ
ಶ್ರೀ ಎಂ. ಶಿವಕುಮಾರ್
ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ
ಉಪ ಸಂಪಾದಕರು
ಶ್ರೀ ಬಾಗೂರು ಚಂದ್ರು
ಶ್ರೀ ಎಚ್.ಎಸ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ
ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್
ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.
ವ್ಯಂಗ್ಯಚಿತ್ರಕಾರರು
ಶ್ರೀ ಬಾಗೂರು ಮಾರ್ಕಂಡೇಯ
ಜನಾರ್ಧನ ಸ್ವಾಮಿ
ಸು.ವಿ. ಮೂರ್ತಿ
ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ.....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇರವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in



○ ಪ್ರಕಾಶ್

ಕಾಫಿ ಸೇವನೆಯಿಂದ ಮರೆಗುಳಿತನ ಕಡಿಮೆಯಾಗುತ್ತದೆ – ಲಂಡನ್ ಸುದ್ದಿ

● **Tata, tea!** ಅನ್ನಬಹುದು ಈಗ!!

★★★

ಪ್ರಚಾರ ಸಾಮಗ್ರಿ; ಶ್ರೀಫ್ರ ನಿರ್ಧಾರ – ಚುನಾವಣೆ ಸುದ್ದಿ

● ಸಾಮಗ್ರಿಗಳ ಮೇಲೆ ಬಾಪು ಅವರ ಫೋಟೋ ಇರದಿದ್ದರೆ ಸಾಕು!!

★★★

'2015ಕ್ಕೆ ಚಂದ್ರನಲ್ಲಿಗೆ ಮಾನವ' – ಇಸ್ರೋ ಸುದ್ದಿ

● ನೂತನ ಏರ್‌ಪೋರ್ಟ್‌ಗೆ ಸುಲಭವಾಗಿ ಹೋಗುವುದು ಇನ್ನೂ ಕಷ್ಟ !!

★★★

ಕಲಬೆರಕೆ ತುಪ್ಪ ಮಾರಾಟ; ಒಬ್ಬನ ಬಂಧನ – ಸುದ್ದಿ

● ಸುದ್ದಿ ಖಾರವಾಗಿದೆ !!

★★★

ಮಾಯಾವತಿ ವಿರುದ್ಧ ಬೂಟಾ ಟೀಕೆ – ಪತ್ರಿಕೆ

● ಇದೂ ಬೂಟಾಟಿಕೆ ಅಲ್ಲ ತಾನೆ ?!

★★★

'ಹುಯ್ಯೋ, ಹುಯ್ಯೋ ಮಳೆರಾಯ, ಭಾರತ ದೇಶದಿ ರನ್ನಿಲ್ಲ' ಅಂತಾ ಹಾಡಬಹುದು !!

★★★

ಕೊಳಚೆ ನಿರ್ಮೂಲನಾ ಮಂಡಳಿ ಆಯುಕ್ತ ಲೋಕಾಯುಕ್ತ ಬಲೆಗೆ – ಸುದ್ದಿ

● ಲಂಚ ಎಂಬ ಕೊಳಚೆಯನ್ನ ನಿರ್ಮೂಲ ಮಾಡಲೇಬೇಕು !!

★★★


ಬಿ.ಜೆ.ಪಿ. ಸಂಸದರನ್ನ ಟೀಕಿಸುವ ಹಕ್ಕು ಕುಮಾರಸ್ವಾಮಿಗೆ ಇಲ್ಲ – ಶ್ರೀ ಜೇಟ್ಲಿ

● ಹೌದು, ಅದು ಅವರ ಪಿತೃವಿನ ಕಾರ್ಯ !!

★★★

ಚುನಾವಣಾ ಆಯುಕ್ತರ ಹಣೆ ಬರಹ ಯಾವ ಪಾರ್ಟಿಗೆ ದಕ್ಕುತ್ತೋ ಕಾದು ನೋಡಬೇಕು !!

★★★



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯಸಾಹಿತ್ಯ

- ಕು.ಗೋ.

ಶ್ರೀ ಎಂ. ಎನ್. ಕಾಮತ್ (ಮುಂಡ್ಕೂರು ನರಸಿಂಹ ಕಾಮತ್ 1886-1940) ಉಡುಪಿ ಜಿಲ್ಲೆಯ ಮುಂಡ್ಕೂರಿನವರು. ಮುಂಬೈ ಮತ್ತು ಕಲ್ಕತ್ತಾಗಳಲ್ಲಿ 'ರೋಸ್ ಎಂಡ್ ಕಂಪೆನಿ' ಎಂಬ ಸಂಗೀತ ಉಪಕರಣಗಳ ಅಂಗಡಿಯಲ್ಲಿ ಕೆಲಸಕ್ಕಿದ್ದರು. ಅನಂತರ ಮೂಲ್ಕಿ, ಮಂಗಳೂರುಗಳಲ್ಲಿ ಅಧ್ಯಾಪಕರಾಗಿ ಅನೇಕ ಕಥೆಗಳನ್ನು, ನಾಟಕಗಳನ್ನು, ಕವಿತೆಗಳನ್ನು, ಲಲಿತಪ್ರಬಂಧಗಳನ್ನು ಬರೆದು ಪ್ರಸಿದ್ಧರಾದವರು. ಇವರು ಮಾಸ್ತಿಯವರ ಕಾಲದಲ್ಲೇ ಕಥೆಗಳನ್ನು ಬರೆಯುತ್ತಿದ್ದು ಕನ್ನಡದ ಆದ್ಯ ಕತೆಗಾರರಲ್ಲಿ ಒಬ್ಬರಾಗಿದ್ದರು. ಇವರ ಸಮಗ್ರ ಲೇಖನಗಳನ್ನು ಪುತ್ತೂರಿನ ಬಿ. ಲೀಲಾಭಟ್ ಅವರು ಸಂಪಾದಿಸಿ ಮೂರು ನಾಲ್ಕು ಸಂಪುಟಗಳಲ್ಲಿ ಪುತ್ತೂರಿನ ಕರ್ನಾಟಕ ಸಂಘದಿಂದ ಪ್ರಕಟಿಸಿದ್ದಾರೆ.

ಕಾಮತರ ಬರವಣಿಗೆಯ ಶೈಲಿ ಉತ್ತಮ ಗುಣಮಟ್ಟದ್ದಾಗಿದ್ದು ಸಲೀಸಾಗಿ ಓದಿಸಿಕೊಂಡು ಹೋಗುವ ವಿಶೇಷತೆಯನ್ನು ಹೊಂದಿದೆ. ಹೆಚ್ಚಾಗಿ ಖುಷಿ ಕೊಡುವ ಲಲಿತ ಪ್ರಬಂಧಗಳನ್ನೇ ಕಾಮತರು ನೀಡಿದ್ದಾರೆ. 'ಅಂದಿನ ಆವೂರು' ಅವರ ಉತ್ತಮ ಕಥೆ ಎಂದು ಪರಿಗಣಿಸಲ್ಪಟ್ಟಿದೆ. ಗಾಳಿ, ನನ್ನ ಅಥವಾ ನಿಮ್ಮ ಕೊಡೆ, ಆ ಬೆಕ್ಕಲ್ಲ ಈ ಬೆಕ್ಕು, ನನ್ನ ಅಥವಾ ನಿಮ್ಮ ಗಡಿಯಾರ, ಪೆನ್ಶನರ್, ಟಪಾಲು ಪೆಟ್ಟಿಗೆ, ಸಾಹಿತ್ಯ ರೈಲ್ವೆ ಕಂಪೆನಿ, ಮುಪ್ಪು ಮುಂತಾದ ಹದಿನೆಂಟಕ್ಕೂ ಹೆಚ್ಚು ಹರಟೆಗಳನ್ನೂ ಇವರು ಬರೆದಿದ್ದಾರೆ. ಇಲ್ಲಿ ಲೋಕಜ್ಞಾನದ ಅರಿವೂ ಉಂಟಾಗುತ್ತದೆ. ಅವರ ವಿಷಯವ್ಯಾಪ್ತಿ ಜಗದಗಲ. 'ಸಾಹಿತ್ಯ ರೈಲ್ವೆ ಕಂಪೆನಿ' ಎಂಬ ಹರಟೆಯನ್ನು ಅಪರಂಜಿಗಾಗಿ ಆರಿಸಿದ್ದೇನೆ. ಸಾಹಿತ್ಯದ ಬಗ್ಗೆ ಸಾಹಿತಿಗಳ ಬಗ್ಗೆ ತಿಳಿಹಾಸ್ಯದೊಂದಿಗೆ ಲಘು ಲೇವಡಿಯನ್ನೂ ಇಲ್ಲಿ ಕಾಣಬಹುದು. ಇದನ್ನು ಕಾಮತರು ಬರೆದದ್ದು 1916ರಲ್ಲಿ ಇಂದಿಗೂ ಇದು ಪ್ರಸ್ತುತ ಎನ್ನಬಹುದು. ಎಂ.ಎನ್. ಕಾಮತರ ಕೃತಿಗಳ ಎಲ್ಲಾ ಸಂಪುಟಗಳನ್ನು ಓದುವ ಆಸಕ್ತಿ ನಮ್ಮ ಓದುಗರು ತಾಳಬೇಕೆಂಬ ಹಂಬಲ ನನ್ನದು. ಈ ಕೃತಿಗಳು ಕರ್ನಾಟಕ ಸಂಘ ಪುತ್ತೂರು, ಇಲ್ಲಿ ಲಭ್ಯವಿದೆ.

ಸಾಹಿತ್ಯ ರೈಲ್ವೆ ಕಂಪೆನಿ

- ಎಚ್. ಗೋಪಾಲಭಟ್ಟ

ಸೀಮೆಯ ಒಂದು ಕೊನೆಯಿಂದ ಮತ್ತೊಂದು ಕೊನೆಯವರೆಗೆ ಸಾಹಿತ್ಯ ರೈಲ್ವೆ ಕಂಪೆನಿಯ ಪಟ್ಟಿಗಳ ಹಾದಿಯು ನೀಡಿಕೊಂಡಿರುವುದು. ಭಾವನೆಗಳೂ ಭಾವಿಸುವವರೂ ಇವರ ಮೇಲೆ ಪ್ರಯಾಣಿಕರು. ಯಶಸ್ಸೆಂಬುವ ಇಂಜಿನ್ (Engine) ಚಾಲಕ ಯಂತ್ರವು ಕಾಲು ಪಥದ ಮೇಲೆ ಓಡಾಡುತ್ತಿದೆ. ಕೊಟ್ಟ ಹಣಕ್ಕೆ ದೊರೆತ ಟಿಕೇಟನ್ನು ತೋರಿಸಿ, ಪ್ರಯಾಣಿಕರೆಲ್ಲ ಗಾಡಿ ಹತ್ತುವರು. ಫಸ್ಟ್ (I) ಕ್ಲಾಸಿನಲ್ಲೂ, ಹಲವರು ಸೆಕೆಂಡ್ (II) ತರಗತಿಯಲ್ಲೂ, ಅನೇಕರು ಥರ್ಡ್ (III) ವಿಭಾಗದಲ್ಲೂ ಆರೋಹಿಗಳು. ತರಗತಿಯು ಮಾತ್ರವಲ್ಲ ಪ್ರಯಾಣಿಕರ ದೂರತ್ವವೂ ಕೊಟ್ಟ ಬೆಲೆಗೆ, ಪಡೆದ ಟಿಕೇಟಿಗೆ ಸರಿಯಾಗಿಯೇ ಇರುವುದು. ವಾಲ್ಮೀಕಿಯು ಯಾವುದೋ ಒಂದು ಕಾಲದಲ್ಲಿ ಮೊದಲನೆಯ ವರ್ಗದಲ್ಲಿ ಹತ್ತಿದವನು, ಇಂದಿನವರೆಗೂ ಅವನು ಮುಟ್ಟಬೇಕಾದ 'ಸ್ಟೇಶನ್ನೇ' ಇನ್ನೂ ಸಮೀಪವಾಗಿಲ್ಲ. ಮನಕ್ಕೆ ಗೋಚರವಾಗುವಂತೆ, ಆದಷ್ಟು ತೀಕ್ಷ್ಣವಾದ ದೃಷ್ಟಿಗಾದರೂ ತೋರುವಂತಹ ಆ ದೂರದ ಕಾಲದ ಟರ್ಮಿನಸ್‌ನ್ನು (Terminus) (ಅದನ್ನು ದಾಟಿ ಮತ್ತಾಚೆ 'ಸ್ಟೇಶನ್ನು'ಗಳು ತೋರುವುದೇ ಇಲ್ಲ-ಎಲ್ಲಿ ಚಂದ್ರ ಸೂರ್ಯರುಗಳೇ ದೀಪಗಳಾಗಿ ಉರಿಯುತ್ತಿವೆಯೋ ಅಲ್ಲಿಗೆ ನಕ್ಷತ್ರಗಳು ಚಲಿಸಿ ಬಂದು ಮುಟ್ಟುವುವು.) ಮುಟ್ಟುವೆನೆಂದು ವಾಲ್ಮೀಕಿಯು ಟಿಕೇಟನ್ನು ಪಡೆದಿರುವನು.

ಈ ಹೊಗೆ ಬಂಡಿಯ 'ಗಾರ್ಡ್' (Guard) ಗಳೇ ನಮ್ಮ ವಾಠಕರು, ಸಮಾಲೋಚಕರು. ಇವರು ತಮ್ಮ ಕರ್ತವ್ಯವನ್ನು ಸರಿಯಾಗಿ ಪೂರಯಿಸುತ್ತಾರೆಯೋ ಇಲ್ಲವೋ ಎಂದು ಎಲ್ಲರಿಗೂ ತಿಳಿದೇ ಇದೆ. ಅನೇಕ ವೇಳೆ ಆರೋಹಿಗಳಿಗೆ ಅನ್ಯಾಯಮಾಡುವುದರಲ್ಲಂತೂ ಇವರು ವಿಶೇಷ ನಿಪುಣರು, ಮೂರನೆಯ ತರಗತಿಯ ಟಿಕೇಟು ಪಡೆದ ಸಾವಿರಾರು ಪ್ರಯಾಣಿಕರು ಅವರಸರದಲ್ಲಿ, ಗಲಿಬಿಲಿಯಲ್ಲಿ ಮೊದಲನೆಯ ವರ್ಗದ ಗಾಡಿಯನ್ನು ಹತ್ತುವುದಿದೆ. ಆದರೆ, ಗಾಡಿಯ ತರಗತಿಯನ್ನು ಕಂಡಮೇಲೆ, ಸಾಮಾನ್ಯರು ಮಾಡುವುದೇನು? - ನಮಸ್ಕಾರ, ಪ್ರಶಂಸೆ, ಸಲಾಮು, ಸುತ್ತಲೆಲ್ಲ ಸ್ವಾಗತ. ಒಂದೆರಡು ಸ್ಟೇಶನ್ನುಗಳನ್ನು ದಾಟುತ್ತಲೇ ಇವರಲ್ಲಿ ಕೆಲವರನ್ನು ದಸ್ತಗಿರಿ ಮಾಡುವುದಿದೆ. ಗಾರ್ಡ್ ಸಾಹೇಬರು ಓಡಿ ಬಂದು ಅವರನ್ನು ಕೈ ಹಿಡಿದೆಳೆದು, ಅವರ ಯೋಗ್ಯತೆಗೆ ತಕ್ಕದಾದ ಗಾಡಿಯಲ್ಲೇ ಅವರನ್ನು ಕೇಳುವವರೇ ಇಲ್ಲ, ಇದು ಸಮಾಲೋಚಕ ಗಾರ್ಡರ್ ಪಕ್ಷಕ್ಕೆ ಸ್ವಕರ್ತವ್ಯದ ಮರವೆ, ಇದಿರಲಿ, ಕೆಲವೇಳೆ, ಇವರೇ ಗಾರ್ಡರು ತಮ್ಮ ಗುರುತು ಪರಿಚಯವನ್ನುಳ್ಳವರನ್ನು,-ಮೂರನೆಯ ತರಗತಿಯವರಂತಿರಲಿ,-ಯಾವ ಟಿಕೇಟೂ ಇಲ್ಲದವರನ್ನು ಸಹ,-ಮೊದಲನೆಯ ತರಗತಿಯ ಗಾಡಿಯಲ್ಲಿ ಹತ್ತಿಸಿಬಿಡುವರು. ಏನನ್ಯಾಯ! ಇದೆಲ್ಲವನ್ನೂ ಎಲ್ಲೆಲ್ಲಿಯೂ ನೋಡುತ್ತೇವಾದರೂ,-ದೂರುವುದು ಯಾರೊಡನೆ? ಹೀಗೆ ಯಾರು ದೋಷಿಗಳೋ ಅವರೇ ನ್ಯಾಯಾಧೀಶರೂ ಆಗಿರುವರೆಂದ ಮೇಲೆ ದೂರುವವರು ಯಾರು? ತೀರ್ಮಾನಿಸುವವರೂ ಅವರ್‍ಯಾರು?

ಇನ್ನು ಪಾಪ! ಕೆಲವರು ಬೆದರಿ ಬೆದರಿ, ನಮ್ರತೆಯಿಂದ, ತಮ್ಮ ಯೋಗ್ಯತೆಯನ್ನು ತಿಳಿದೂ 'ಫಸ್ಟ್' (ಮೊದಲನೆ) ತರಗತಿಯ ಟಿಕೇಟನ್ನು ಪಡೆದು ಸ್ಟೇಶನ್ನಿಗೆ ಬರುತ್ತಿರುವಾಗಲೇ, ಅಲ್ಲಿಂದ ಗಾಡಿಯು ಹೊರಟೇ ಹೋಗುವುದಿದೆ. ಆ ಗಡಿಬಿಡಿಯಲ್ಲಿ ಸಿಕ್ಕಿದೆಡೆ ಮೂರನೇ ತರಗತಿಯಲ್ಲಾದರೂ ಏರಿ ಕುಳಿತವರು! ಹತ್ತೆಂಟು ಸ್ಟೇಶನ್ನುಗಳನ್ನು ದಾಟಿದ ನಂತರ, ಎಲ್ಲಿಯಾದರೂ ಗಾರ್ಡನ್ ದೃಷ್ಟಿಗೆ ಇವರು ಬಿದ್ದರೆ, ಆಗತಾನೆ ಇವರಿಗೆ ಯೋಗ್ಯವಾದ ತರಗತಿಯ ಆಸನವು ದೊರೆವುದಿದೆ. ಇಂತಹ ಅವ್ಯವಸ್ಥೆಗಳೂ ದುರವಸ್ಥೆಗಳೂ ಯಾವಾಗ ದೂರಗೊಳ್ಳುವುವೊ ತಿಳಿಯೆವು. ಅಂತಹ ಏರ್ಪಾಡಿನ ಕಾಲವಾದರೂ ಬರುವುದೋ ಇಲ್ಲವೋ?

ಹೇಗೂ ಇರಲಿ. ಪ್ರಪಂಚದಲ್ಲಿ ಕ್ರಯಕೊಟ್ಟರೂ ಸರಿಯಾದ ಬೆಲೆಯ ಸಾಮಾಗ್ರಿ ದೊರೆವುದು ಅಪರೂಪ. ಅಂಗಡಿಯವನು ನಮ್ಮನ್ನು ಠಕಾಯಿಸುವುದೂ ಇದೆ. ಇಲ್ಲವೆ ನಾವಾದರೂ ಅವನನ್ನು ಠಕಾಯಿಸದೆ ಬಿಡುವುದಿಲ್ಲ. ಜಾಗ್ರತೆ ಕಡಿಮೆಯಾದರೆ ಹೀಗೆ ಆಗುವುದು ಸಹಜವು. ಎಷ್ಟು ಕಾಲದವರೆಗೆ ರೈಲು ಗಾಡಿಗಳಿರುವುವೊ ಅಷ್ಟು ಕಾಲ 'ಥರ್ಡ್' ಕ್ಲಾಸಿನ ಪ್ರಯಾಣಿಕರು 'ಫಸ್ಟ್' ಕ್ಲಾಸಿನಲ್ಲಿ ಕುಳಿತುಕೊಳ್ಳದೆ ಇರಲಾರರೆಂದು ಖಂಡಿತವಾಗಿ ಹೇಳಬಹುದು.

ಇನ್ನೊಂದು ದುಃಖಕರವಾದ ವಿಷಯವಿದೆ:-ರೈಲ್ವೆ ಕೆಲಸಗಾರರು ಯಾವಾಗಲೂ ಯಥೇಚ್ಛವಾಗಿ ಸೆಕೆಂಡ್ ಕ್ಲಾಸಿನಲ್ಲಿ ಕುಳಿತುಕೊಳ್ಳುವರು. ಬೇರೆ ಪ್ರಯಾಣಿಕರ ಟಿಕೇಟುಗಳನ್ನು ಸಮಾಲೋಚಿಸುವುದೇ ಅವರ ಕೆಲಸ. ತಾವಾಗಿ ಒಂದೇ ಒಂದು ಟಿಕೇಟು ಬೆಲೆಗೆ ಪಡೆದುದಿಲ್ಲ, ಕ್ರಯ ಕೊಟ್ಟಿಲ್ಲ. ಆದರೆ, ಮಹಾಶಯ, ಯಾವಾಗ ಒಬ್ಬನು ಟಂಕ ಸಾಲೆಯಿಂದ ಹೊರಟ ದುಡ್ಡನ್ನು ಕೊಟ್ಟು ಟಿಕೇಟನ್ನು ಪಡೆಯಲಿಲ್ಲವೋ, ಅಂತಹವನು ಕೇವಲ 'ಥರ್ಡ್' ಎಂದೇಕೆ, 'ಫೋರ್ತ್' (ನಾಲ್ಕನೆ) ತರಗತಿಗೂ ಯೋಗ್ಯನಲ್ಲ. ಇವರಿಗೆ ಸನ್ಮಾನವೆಲ್ಲಿದೆ? ಪರಂತು, ಈ ಸಮಾಲೋಚಕ ವರ್ಗದವರು ಧರ್ಮಕ್ಕೆ 'ಸೆಕೆಂಡ್' ಕ್ಲಾಸಿನ ಗಾಡಿ ಹತ್ತಿ, ಎಷ್ಟೋ ಸನ್ಮಾನ ಪಡೆದು, ನಾಲ್ಕಾರು ಮಂದಿಗಳಿಗೆ ಸಾಕಾಗುವಷ್ಟು ಸ್ಥಳವನ್ನು ಒಬ್ಬರೇ ಆಕ್ರಮಿಸಿಕೊಂಡು, ಅಬ್ಬರದಿಂದ ಪ್ರಯಾಣ ಮಾಡುವರು.

ಇನ್ನೂ ಕೆಲವರು ಟಿಕೇಟಿನ ಗೊಡವೆಗೆ ಹೋಗದೆ, ಕಾಸನ್ನು ವ್ಯಯಿಸದೆ, ಫಸ್ಟ್ ಕ್ಲಾಸ್ ಗಾಡಿಯನ್ನೇ ಹತ್ತುವರು. ಎಲ್ಲರೂ ಎಣಿಸುವುದೇನು? - ಇವರೊಡನೆ ಆ ತರಗತಿಯ ಟಿಕೇಟು ಇರಬಹುದು. ಉದ್ದ ಬೆಳೆದ ಗಡ್ಡ, ತಿರುಪಿನ ಮೀಸೆ, ಜಗಜಗಿಸುವ ಒಂಟಿ ಉಂಗುರಗಳು, ಉಡುಪಿನ ರೇಶ್ಮೆಯ ಚಕಮಕು, ಮೂಗನ್ನೇರಿರುವ ಗಿಲಿಟಿನ ಕನ್ನಡಕ,-ಆಹ್ಹ! ಇವರಲ್ಲವೆ ಮೊದಲನೆಯ ತರಗತಿಯವರು! ಯಾವಾಗಲೂ ಅದೇ ಕ್ಲಾಸಿನಲ್ಲಿ ಇವರು ಕುಳಿತುಕೊಂಡೇ ಇದ್ದಾರೆಂದು ಗಾರ್ಡರು ತಿಳಿದಿರುವರು. ಗಾರ್ಡ್‌ರಲ್ಲಿ ಒಬ್ಬರಾದರೂ, ಇವರನ್ನು ವಿಚಾರಿಸಿದುದೂ ಇಲ್ಲ. ಅವರಲ್ಲಿ ಸಾಹಸವಿದ್ದರಲ್ಲವೆ? ಸಾಹಸವಿದ್ದರೂ ಮನಸ್ಸೇ ಬಾರದು! ಜರತಾರಿಯ ಅಂಚಿನ ದೋತ್ರವನ್ನು ಕಂಡರಲ್ಲದೆ, ಟಿಕೇಟನ್ನು ನೋಡಲು ತಪ್ಪಿದರು! ನೋಡಿದರು,-ಕೇವಲ ಆ ಉದ್ದಂಗಿಯನ್ನು; ಉಗ್ರವಾದ ಅವರ ಹೆಸರುಗಳನ್ನು ಅಂಕಿಸುವ ಪೆಟ್ಟಿಗೆ ಮೊರೆಗಳನ್ನು ಸರಿ,-ಅಷ್ಟೆ-ಅಲ್ಲಿಗೆ ಮುಗಿಸಿದರು.

ಸಾಹಿತ್ಯ-ರೈಲ್ವೆ-ಕಂಪೆನಿಯಲ್ಲಿ ಅಂತಹ ಅನೇಕ ಅನಿಯಮಗಳು ತೋರಿವೆ. ಯಾರೇ ಆಗಲಿ, ಅವರ ಟಿಕೇಟನ್ನು ನೋಡದೆ ರೈಲ್ವೆಯಿದೆಯೆಂದು ಅವರನ್ನು ಯೋಗ್ಯತೆಯಲ್ಲಿಲ್ಲದ ವರ್ಗದಲ್ಲಿ ಇರಗೊಡಿಸುವುದೆಂದರೇನು? ಅನ್ಯಾಯ! ಆದರೆ, ಇಷ್ಟು ಕಷ್ಟವನ್ನು ತಾಳುವವರೇ ಇಲ್ಲ. ಮತ್ತೊಂದು, ಒಂದೆರಡು ಮಾಡು ಹೆಚ್ಚಿಗೆಯಾಯ್ತೆಂದರೆ 'ಡಿಫೆಮೇಷನ್' ಅಂತೂ ತಪ್ಪದಲ್ಲ; ಇದೂ ಗಾರ್ಡರುಗಳನ್ನು ಬೆದರಿಸುತ್ತಿದೆ.

ಟಿಕೇಟು ಪಡೆದವರಲ್ಲಿ ಗಾಡಿ ತಪ್ಪಿ ಹೋದವರು (miss ಆದವರು) ಪಾಪ! ಅವರನ್ನು ಕಂಡರೆ ಮಮತೆ ಹುಟ್ಟುವುದು. ಸಮಯಕ್ಕೆ ಸರಿಯಾಗಿ ಬಂದರೆಂದು ಎಷ್ಟೋ ಥರ್ಡ್‌ಕ್ಲಾಸಿನವರು ಫಸ್ಟ್‌ಕ್ಲಾಸನ್ನು ಹತ್ತಿದರು. ಮತ್ತೂ ಕೆಲವರು ಯಾವ ಟಿಕೇಟೂ ಇರದೆ ಗಾಡಿಯಲ್ಲಿ ನಡೆದೇ ನಡೆದರು! ಸಮಯ ಮೀರಿತೆಂದು ಇವರು ಮಾತ್ರ ಹಿಂದೇ ಬಿದ್ದುಕೊಳ್ಳಬೇಕಾಯಿತು. ಇರಲಿ,-ಇವರಿಗೆ ಭವಿಷ್ಯತ್ಕಾಲದಲ್ಲಿ ಭರವಸೆ ಇದೆ. ಇನ್ನೊಂದು ಗಾಡಿ ಬಂದೊಡನೆ ಇವರೇ ಮುಂದಾಳುಗಳು. ಆದರೆ, ಇವರಲ್ಲಿ ಅನೇಕರು ಈ ಗಾಡಿ ತಪ್ಪಿತೆಂದು ಸಿಟ್ಟಾಗಿ, ಸ್ಟೇಶನ್ನಿನಲ್ಲಿರದೆ ತಟಕ್ಕನೆ ಮನೆಗೆ ಮರಳುವರು. ಇವರಲ್ಲಿ ಮೊದಲನೆಯ ವರ್ಗದ ಚೀಲದಲ್ಲಿ ರೊಕ್ಕ ತಾರದೆ ಟಿಕೇಟನ್ನು ಪಡೆಯಲಾರದೆ ಹೋದ ಎಷ್ಟೋ ಜನಗಳಿರುವರು! ಇವರೆಷ್ಟೆಂದು ಯಾರು ಎಣಿಸಿರುವರು? ಇಂಗ್ಲೀಷರ ಪೈಕಿ ಜೆಫ್ರಿ ಗಾರ್ಡ್‌ನಾಗಿರುವಾಗ, ಬಾಯ್ರನ (Byron)ನು ಪ್ರಯಾಣಿಕನಾಗಿರುವಾಗ ಆ ಗಾಡಿಯಲ್ಲಿ ತಾವೂ ಪ್ರಯಾಣಮಾಡಲೆಳಸಿ, ವರ್ಡ್ಸ್‌ವರ್ಥ, ಶೆಲೆ (Wordsworth, Shelly) ಮಹಾಶಯರು ಓಡುತ್ತ ಸ್ಟೇಶನ್ನಿಗೆ ಬಂದರು. ಬರುತ್ತಿದ್ದಾಗಲೇ ಗಾಡಿ ಮುನ್ನಡೆದಿತ್ತು. ಇವರು ವಿರಕ್ತರಾಗದೆ, ಅಲ್ಲೇ ಇದ್ದು ಕೆಲ ಕಾಲದ ನಂತರ ಬಂದ ಎರಡನೆಯ ಗಾಡಿಯನ್ನು ಹತ್ತಿ ತಮ್ಮ ಆಸನ ಪಡೆದರು. ನಮ್ಮ ಸಾಹಿತ್ಯದಲ್ಲಿ ಈಗ ಯಾವ ಗಾಡಿಯು ಓಡುತ್ತಿದೆಯೊ ಅದನ್ನು ಹಿಡಿಯಲಾರದೆ ಇರುವ ಸಾವಿರಾರು ದೊಡ್ಡ ಮನುಷ್ಯರಿದ್ದಾರೆ. ಅಯ್ಯಾ, ನೀವೇತಕ್ಕೆ ನಿರಾಶೆಗೊಳ್ಳುವುದು? ಹತ್ತೇ ಮಿನುಟುಗಳವರೆಗೆ ಇಲ್ಲೇ ಕಾದಿರಿ,-ಎರಡನೆಯ ಗಾಡಿ ಬರುವುದು,-ನೀವೂ ಆಗಲೆ ಹತ್ತಬಹುದು.

ಕನ್ನಡ ಸಾಹಿತ್ಯ ರೈಲ್ವೆ ಕಂಪೆನಿಯ ಗಾಡಿಗಳಲ್ಲಿ ಮೊದಲನೆಯ, ಎರಡನೆಯ ತರಗತಿಗಳಲ್ಲಿ ಪ್ರಯಾಣ ಮಾಡುವವರು ಬಹು ಕಡಿಮೆ ಸಂಖ್ಯೆಯವರಾಗಿಯೂ, ಮೂರನೆಯ ತರಗತಿಯಲ್ಲಿ ಜನಸಂದಣಿಯು ಪ್ರಬಲವಾಗಿಯೂ ತೋರುವಂತಿದೆ. ಈ ದೆಸೆಯಿಂದ ಕೆಲವೇಳೆ ಸಮಾಲೋಚಕ - ಗಾರ್ಡರುಗಳು ಒಬ್ಬಿಬ್ಬರು ಕೊನೆಯ ವರ್ಗದವರನ್ನು ಪ್ರಥಮ ವರ್ಗದಲ್ಲಿ ಕುಳ್ಳಿರಿಸುವುದಿದೆ. ಇವರು ಫಸ್ಟ್‌ಕ್ಲಾಸಿನಲ್ಲಿ ಕುಳಿತೇ ಇರುವರಾದರೂ, ಇವರು ಮೂರನೆಯ ತರಗತಿಯವರೆಂದು ಗಾರ್ಡರಿಗಂತೂ ತಿಳಿದೇ ಇದೆ. ಕನ್ನಡದಲ್ಲಿ ಮಿಲ್ಟನ್, ಕರ್ನಾಟಕದ ಬಾಯ್ರನ್, ಬಾಲವ್ಯಾಸ, ಸರಸ್ವತೀತನಯ, ಕವಿಕಂಠಹಾರ, ಕೆಲವೇಳೆ ಆಸ್ಥಾನ ಪಂಡಿತ, ಮತ್ತು ಸಾಹಿತ್ಯ ಸಮ್ಮೇಳನದಲ್ಲಿ ಇವರನ್ನು ಬಿಟ್ಟರೆ, ಅಲ್ಲಿಯ ಜನಗಳಲ್ಲಿ ಅನೇಕರು ಇವರ ವಿಶ್ವಾಸದಿಂದ ಮಡಿಯಲೂಬಹುದು: ಅಥವಾ ಇವರೂ ಅಲ್ಲಿ ಮಡಿಯಬಹುದು. ರೈಲ್ವೆಯಲ್ಲಿ, ಕಲ್ಕತ್ತೆಯ ಅಂಧಕೂಪ (Black hole of

Calcutta)ದಲ್ಲುಂಟಾದ ಪ್ರಮಾದವು ಪುನಃ ತಲೆದೋರಬಹುದು. ಗಾರ್ಡರ್ ಅನುಗ್ರಹದಿಂದ ಇವರಿಗೊಂದು ಕ್ಲಾಸಾದರೂ ದೊರೆದೀತು. 'ಫಸ್ಟ್' ಕ್ಲಾಸಿನವರು ಇವರನ್ನು ಕಂಡರೆ ನಾಚಿಕೊಳ್ಳುವರು; ಇವರಂತೂ ಗಾರ್ಡಾನುಗ್ರಹದಿಂದ ಮೆರೆದರು. ಇಂತಹ ಪ್ರಸಂಗದಲ್ಲಿ ಬೇರೇ ಒಂದು ಗಾಡಿಯನ್ನು ಓಡಿಸಿ, ಇವರನ್ನೆಲ್ಲ ಅದರೊಳಗೆ ಸೇರಿಸಿದರೆ,-ಯಾರ ಸಂಕೋಚಕ್ಕೂ ಕಾರಣವಿರದೆ, ಅನುಕೂಲವಾಗುವುದು, ಬೇಕಾದರೆ ಒಂದು 'ಸ್ಪೆಶಲ್ ಟ್ರೈಯ್ನ'ನ್ನೇ ತರಿಸಿಕೊಳ್ಳಿರಿ!!

ನಮ್ಮಲ್ಲಿ 'ಗೂಡ್ಸ್ ಟ್ರೈಯಿನು'ಗಳು ಬಲು ಚೆನ್ನಾಗಿ ಅನವರತವು ಓಡಾಡುತ್ತಿವೆ. ಕೂದಲೆಣ್ಣೆ, ಪರಿಮಳ ವಸ್ತುಗಳು, ವಾಚುಗಳು, ರಾಮಬಾಣ ಮಾತ್ರೆಗಳು, ಖಾತರಿಯಾದ ಕತ್ತರಿಗಳು, ಇತ್ಯಾದಿಗಳೇ ಇತ್ಯಾದಿಯಾಗುಳ್ಳ ಸರಕು ಬಂಡಿಗಳೆನ್ನುವ ವರ್ತಮಾನ ಪತ್ರಿಕೆಗಳು ಬಲು ಚೆನ್ನಾಗಿ ನಿತ್ಯವೂ ಓಡಾಡುತ್ತಲೇ ಇವೆ. ಪ್ರಯಾಣಿಕನ ಟಿಕೇಟಿನ ಬೆಲೆಗಿಂತ, ಸರಕಿನ ಭಾರವನ್ನು ಅನುಸರಿಸಿರುವ ಟಿಕೇಟಿನ ಬೆಲೆ ಹೆಚ್ಚು! ಆದರೆ ಭಾವನಾ-ಆರೋಹಿಗಳ ಬಗೆಯಾಗಿರುವ ಆರೋಹಿ ಶಕಟ (Passenger train)ಗಳೆನ್ನುವ ಮಾಸಿಕ ಪತ್ರಿಕೆಗಳು ಸರಿಯಾಗಿ ಚಲಿಸುತ್ತಿಲ್ಲ, ಕೆಲವೇಳೆ ಇವುಗಳಲ್ಲಿಯೂ ಸರಕುಗಳನ್ನೇ ತುಂಬಿಸಿ, ಕಟ್ಟಿಗೆಯ ಕಾಸನ್ನಾದರೂ ಗಳಿಸಬೇಕಾಗಿರುವುದು. 'ಇಂಜಿನು' ನಡೆಯೆಂದೊಡನೆ, ಕೀಲೊತ್ತಿದೊಡನೆ ನಡೆಯುವುದಿಲ್ಲ: ಹೊಗೆಯಿರದಿದ್ದರೆ ಹೊಗೆಗಾಡಿಯೆಲ್ಲಿ? ಹೊಗೆಗಾದರೂ ದೊರೆಯಲೆಂದು ಈ ವಿಜ್ಞಾಪನಾ - ಸರಕನ್ನು ಕೆಲವೇಳೆ ವೃತ್ತಪತ್ರಿಕೆಗಳೂ ಹೊರಲೂ ಹೇಸಲಾರವು. ಆದರೆ, ಅಯ್ಯಾ, ಈ ಸರಕುಗಳಲ್ಲಿ ಅನೇಕವಾದುವು ಕೊಳೆತಿವೆ: ಇವುಗಳನ್ನೊಯ್ದು ಖರ್ಚಿಗೆಂದು ಇದನ್ನು ಹಾಕುವುದಾದರೂ ಕಾಸೂ ದೊರೆವುದಿಲ್ಲ: ಅಥವಾ ಎಲಮಿಗೆ ಮೊದಲೇ ಇವನ್ನು ಹೊರಕ್ಕೆ ಬಿಸಾಡುವಷ್ಟು ಹೊಲಸಾಗಿ, ಇವು ಹುಳಿತು ನಾರುವುವು. ಕೆಲವು ಮಾತ್ರ ರತ್ನಾದಿಗಳಂತೆ ಇದ್ದಲಲ್ಲಿಟ್ಟರೂ ಮಿಂಚುತ್ತ, ತಮ್ಮ ಬೆಲೆಯನ್ನು ತಾವೇ ತೋರಿಸಿಕೊಳ್ಳುವುವು.

ಯಾವ ಗಾಡಿಯಾದರೂ, ಇಂಜಿನಿಗೆ, ಇದ್ದಲಿಲ್ಲದೆ ನಡೆಯದು. ಈಗ ಈ ಕಾಲದಲ್ಲಿ ಕಲ್ಲಿದ್ದಲಿನ ಪ್ರಯೋಜನವಿಲ್ಲ: ಬಿಳೇ ಬಣ್ಣದ ಲೋಹದ ಇದ್ದಲಾಗಬೇಕು. ಇಂತಹ ಇದ್ದಲು ಕನ್ನಡ ಸೀಮೆಯಲ್ಲಿ ತುಂಬ ಇದೆ. ಕೋಲಾರದಲ್ಲಿ ಚಿನ್ನ ಸಿಗುವುದಲ್ಲವೇ? ಆದರೆ, ಉದ್ಯಮದ ಇದ್ದಲೂ ಬೇಕು. ಈ ಇದ್ದಲಿಂದ ಚಿನ್ನವನ್ನಾದರೂ ಅಗೆದು ಎತ್ತಬಹುದು. ನಮ್ಮಲ್ಲಿ ರೂಢಿಯಾಗಿರುವ ಉದ್ಯಮ ಇದ್ದಲು ಖಾರವಿಲ್ಲದ್ದು: 'ಇಂಜಿನು' ನಾಲ್ಕು ಅಡಿ ಮುನ್ನಡೆದು ಮತ್ತೆ ನಿಂತುಹೋಗುವುದು.

ದೀರ್ಘ ಪ್ರಯಾಣಕ್ಕಾಗಿ ಟಿಕೇಟು ಪಡೆದುಕೊಂಡರೂ, ಎರಡು ಮೂರು ಮೈಲಿಗಳಿಗೊಮ್ಮೆ ವಿಶ್ರಾಂತಿಯ ಬಗ್ಗೆ ಉಳಕೊಳ್ಳಬಹುದಲ್ಲವೆ? ಹಾಗೆ ನಾವು ಈ ಲೇಖದಲ್ಲಿ ಎರಡು ಮೂರು ಪದಗಳ ಮಟ್ಟಿಗೆ ಮುಂದುವರಿಸಿರುವೆವು. ಇಲ್ಲಿ ನಮ್ಮ ಇಂಜಿನಿಗೆ ಇದ್ದಲೂ ನೀರೂ ಬೇಕಾಗಿವೆ. ಸದ್ಯಕ್ಕೆ ಇಲ್ಲಿ ವಿರಮಿಸಿಕೊಳ್ಳುತ್ತೇವೆ.

ಆಸ್ಪತ್ರೆಯಲ್ಲಿ

- ಡಾ. ಓಂ ಪ್ರಕಾಶ್

ಆಸ್ಪತ್ರೆಯ ರೆಕಾರ್ಡ್ ರೂಂನಲ್ಲಿ ಹೌಸ್ ಸರ್ಜನ್‌ಗಳೇ ಕೇಸ್ ನೋಟ್ಸ್ ಬರೆಯುತ್ತ ಕುಳಿತಿದ್ದರು. ಆರೇಳು ಜನ ಸಾಲಾಗಿ ಬೆಂಚಿನ ಹತ್ತಿರ ಕೂತು ಬರೆಯುತ್ತಿದ್ದರು. ಇದ್ದಕ್ಕಿದ್ದಂತೆ, ಒಂದು ಪುಟ್ಟ ಹುಡುಗಿ ಬಾಗಿಲು ನೂಕಿಕೊಂಡು ಬಂದಳು. ಇವರನ್ನೆಲ್ಲ ನೋಡಿ, ನಕ್ಕು, "ನೀವೆಲ್ಲ ಹೋಂವರ್ಕ್ ಮುಗಿಸಿ ಬನ್ನಿ, ಪರವಾಗಿಲ್ಲ!" ಎಂದು ಹೊರಟಳು!!

★★★

ಆಸ್ಪತ್ರೆಯ I.C.U. ನಲ್ಲಿ ರೌಂಡ್ಸ್ ನಡೆಯುತ್ತಿತ್ತು. Stroke ಆಗಿದ್ದ ರೋಗಿಯೊಬ್ಬರನ್ನು ತಜ್ಞರು ಕೇಳಿದರು. ಬ್ರೇಕ್‌ಫಾಸ್ಟ್ ಆಯಿತೆ? ರೋಗಿ 'ಆಯ್ತು ಡಾಕ್ಟ್ರೆ!' 'ಯಾರು ಮನೆಯಿಂದ ಬಂದು ಬ್ರೇಕ್‌ಫಾಸ್ಟ್ ಕೊಟ್ಟರು?' ರೋಗಿ – 'ಇಲ್ಲ ಮೇಡಂ! ನರ್ಸ್ ಕೊಟ್ಟರು!' ಅಂದು ನಕ್ಕ! ಅವನು ಹೇಳಿದ್ದು ದಿಟ! ಬೆಳಗ್ಗೆ ಟ್ಯೂಬ್ ಫೀಡಿಂಗ್ ಮಾಡೋದು ನರ್ಸ್ ತಾನೆ!!

★★★

ಔಟ್‌ಪೇಷೆಂಟ್ ವಿಭಾಗದಲ್ಲಿ ಯಾವಾಗಲೂ ಜನಜಂಗುಳಿ. ಒಂದು ದಿನ, ನಮ್ಮ ಹಿರಿಯ ವೈದ್ಯರನ್ನು ನೋಡಲು ಒಬ್ಬ ರೋಗಿಗೆ 1½ ಗಂಟೆ ಕಾಯಬೇಕಾಯ್ತು, ಪಾಪ! ಅವನ ಸರದಿ ಬಂದಾಗ, ಆತನಿಗೆ ಇದ್ದದ್ದು ಬರೀ ನೆಗಡಿ, ಕೆಮ್ಮು! ವೈದ್ಯರಿಗೆ ರೇಗಿತು! "ಅಲ್ಲರೀ, ಇಷ್ಟು ಸಣ್ಣ ತೊಂದರೆಗೆ ಆಸ್ಪತ್ರೆಗೇ ಬರಬೇಕಾಗಿಲ್ಲ! ಅದಲ್ಲದೆ ನನ್ನನ್ನೇ ನೋಡಬೇಕು ಅಂತ ಯಾಕೆ ಕಾಯ್ತಿದ್ದೀರ?" ಅಂದರು. ಆತ ನಿಧಾನವಾಗಿ ಉತ್ತರಿಸಿದ, 'ಡಾಕ್ಟ್ರೆ, ನಾನು ಹದಿನೈದು ವರ್ಷಗಳಿಂದ ಇಲ್ಲಿಗೇ ಬರೋದು! ಈ ರೂಂನಲ್ಲಿರೋ ವೈದ್ಯರನ್ನೇ ನೋಡೋದು!!" ಹೇಗಿದೆ ಸ್ಥಳ ಮಹಾತ್ಮೆ!!



"ವಿಂಡೋಸ್ ಫಾರ್ ಡಮ್ಮೀಸ್" ಅಂತ ಕೇಳಿದ್ವಿ!!!

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯ ಲೇಖನ ಸ್ಪರ್ಧೆಯಲ್ಲಿ
ತೀರ್ಪುಗಾರರ ಮೆಚ್ಚುಗೆ ಪಡೆದ ಲೇಖನ

ಧರ್ಮರಾಯನ ಅಪರಾವತಾರ

- ಲೈಲಾ

ನನಗೆ "ಧರ್ಮರಾಯ" ಎಂಬ ಬಿರುದು, ನಮ್ಮ ಅಜ್ಜಿ ಅಮ್ಮ ಹೆಂಡತಿ, ಮಕ್ಕಳು ಎಲ್ಲರಿಂದಲೂ ಬಂದಿದೆ. ನನಗೆ ಕವಡೆ ಆಟಗೊತ್ತು, ಪಗಡೆ ಆಟಗೊತ್ತಿಲ್ಲ. ಯಾವ ಆಸ್ತಿಯನ್ನೂ ಕಳೆದಿಲ್ಲ. ಇಸ್ಪೀಟು ಎಲೆಗಳನ್ನು ಗುರುತಿಸುವ ಜ್ಞಾನ ಇದೆ, ಎಂದೂ ಆಡಿಲ್ಲ. ಕುದುರೆ ಜೂಜು, ಮಟ್ಕಾ, ಲಾಟರಿ ಯಾವ ಅಭ್ಯಾಸವೂ ಇಲ್ಲ. ಆದರೂ 'ಧರ್ಮರಾಯ' ಎಂಬ ಬಿರುದು ಪಡೆಯಲು, ಪುಣ್ಯಕೋಟಿಯಂತೆ ನನ್ನ ಸತ್ಯನಿಷ್ಠೆಯೇ ಕಾರಣ. ಸತ್ಯನಡೆಯ ನನ್ನ ಬಾಲ್ಯದ ಕಥೆಗಳು ಹಲವು.

ನನಗೆ 'ಧರ್ಮರಾಯ' ಎಂಬ ಬಿರುದನ್ನು ಮೊದಲು ದಯಪಾಲಿಸಿದವರು ನಮ್ಮ ಸೆಟ್ಟಿಕೆರೆ ತಾತ. ಅವರು ನನ್ನ ತಂದೆಯ ಸಮೀಪ ಬಂಧು, ಆತ್ಮೀಯರು. ಆಗ ನನಗೆ ಆರೇಳುವರ್ಷ. ಆಸಲ ಸೆಟ್ಟಿಕೆರೆ ತಾತನ ಜೊತೆಗೆ ಸಾವಿತ್ರಮ್ಮ ಅಜ್ಜಿಯೂ ಬಂದಿದ್ದರು. ಹೆಸರು ಸಾವಿತ್ರಿ ಆಗಿದ್ದರೂ, ಅವರು ಬಾಲವಿಧವೆ, ಮಡಿಹೆಂಗಸು. ಅವರು ನಮ್ಮ ತಂದೆಯೊಡನೆ ಆಡಿದ ಮಾತುಗಳಿಂದ ಬೆಂಗಳೂರಿನಲ್ಲಿರುವ ಅವರ ಮೈದುನ ನಾಗಪ್ಪಯ್ಯನೊಂದಿಗೆ ಗಂಡನ ಆಸ್ತಿವಿಚಾರವಾಗಿ ಬಂದಿದ್ದರೆಂದು ಗೊತ್ತಾಯಿತು. ಸೆಟ್ಟಿಕೆರೆ ತಾತ ಈ ಸಂಧಾನಕ್ಕೆ ಮುಂದಾಗಿದ್ದರು. ಅವರು ನನ್ನನ್ನು ನಾಗಪ್ಪಯ್ಯನವರ ಮನೆಯನ್ನು ತೋರಿಸಲು ನನ್ನನ್ನು ಕರೆದರು. ನಾನು ಒಪ್ಪಿದೆ. ನನಗೆ ಕಿತ್ತಳೆ ತೊಳೆ ಪೆಪ್ಪರುಮೆಂಟಿನ ಲಂಚವೂ ಸಿಕ್ಕಿತು. ಸೆಟ್ಟಿಕೆರೆ ತಾತನಿಗೂ ನನಗೂ ನಾಗಪ್ಪಯ್ಯ ಆದರದ ಸುಸ್ವಾಗತ ಕೋರಿದರು. ಅಕ್ಕಿತರಿ - ಅವರೇಕಾಳು ಬಿಸಿ ಉಪ್ಪಿಟ್ಟು ಅರಳು ಸಂಡಿಗೆ, ಕೋಡುಬಳೆಯ ಉಪಹಾರಬಂತು. ಕಾಫಿಯ ಸೇವನೆ ಆದ ಮೇಲೆ ಸೆಟ್ಟಿಕೆರೆ ತಾತ, ಸಂಧಾನಕ್ಕೆ ಪೀಠಿಕೆ ಹಾಕುವಾಗ ಲೋಕಾಭಿರಾಮ ಮಾತುಗಳನ್ನಾಡುತ್ತ, ಮಳೆ-ಬೆಳೆ ವಿಚಾರ ಬಂತು. ಮಳೆ ಇಲ್ಲದೆ, ಜೀವನ ದುಸ್ತರವಾಗಿದೆ ಎಂದು ಹೇಳಿದರು. ಕೋಡುಬಳೆಯನ್ನು ಕುರುಕುತ್ತಿದ್ದ ನಾನು, "ತುಮಕೂರಿನಲ್ಲೂ ಮಳೆ ಇಲ್ಲವಂತೆ" ಎಂದೆ. ನಾಗಪ್ಪಯ್ಯನವರು ನನ್ನ ಮಾತುಕೇಳಿ

"ನಿನಗೆ ಹೇಗೆ ಗೊತ್ತು?" ಎಂದರು

"ಸಾವಿತ್ರಮ್ಮ ಅಜ್ಜಿ ಹೇಳಿದರು"

"ಯಾವ ಸಾವಿತ್ರಮ್ಮ ಅಜ್ಜಿ?"

"ತುಮಕೂರಿನಿಂದ ಬಂದಿದ್ದಾರೆ, ಸೆಟ್ಟಿಕೆರೆ ತಾತನ ಜೊತೆ."

ನನ್ನ ಮಾತು ಕೇಳಿ ನಾಗಪ್ಪಯ್ಯನವರಿಗೆ, ಸೆಟ್ಟಿಕೆರೆ ತಾತ, ತಮ್ಮ ಅತ್ತಿಗೆ ಸಾವಿತ್ರಮ್ಮನ ಪರವಾಗಿ ಸಂಧಾನಕ್ಕೆ ಬಂದಿರುವ ಸುಳಿವು ಗೊತ್ತಾಗಿ ಹೋಯಿತು. ಅವರು "ಸಾವಿತ್ರಮ್ಮ ಗಂಡನ ಮನೆಯಲ್ಲಿದ್ದರೆ, ಆಸ್ತಿಪಾಲು ಇಲ್ಲದಿದ್ದರೆ ಚಿಕ್ಕಾಸೂ ಕೊಡಲು ಸಾಧ್ಯವಿಲ್ಲ, ಆ ವಿಚಾರವಾಗಿ ನೀವು ಅವರ ಪರ ಮಾತಾಡುವ ಅಗತ್ಯವೂ ಇಲ್ಲ" ಎಂದು ನಿಷ್ಠುರವಾಗಿ ಹೇಳಿ ಎದ್ದು ಹೋಗಿಬಿಟ್ಟರು. ಸಂಧಾನ ಮುರಿದ ಕಾರಣ ಸೆಟ್ಟಿಕೆರೆ ತಾತ ನಾನು ಮನೆಗೆ ವಾಪಸ್ಸು ಬಂದೆವು.

ಅವರು ನಮ್ಮ ಅಮ್ಮನೊಂದಿಗೆ "ನಿನ್ನ ಮಗ 'ಧರ್ಮರಾಯ' ಕಣಮ್ಮ, ಅಲ್ಲಿ ಸಾವಿತ್ರಮ್ಮ ನನ್ನ ಜೊತೆ ಬಂದಿರುವುದನ್ನು ಹೇಳಿ ಬಿಟ್ಟ, ನಾಗಪ್ಪಯ್ಯ ನನಗೆ ಮಾತಾಡಲು ಅವಕಾಶವೇ ಕೊಡಲಿಲ್ಲ, ಸಾವಿತ್ರಮ್ಮನಿಗೆ, ಇಲ್ಲಿಗೆ ಬರದೇ ಇದ್ರೆ, ಆಸ್ತಿಯಲ್ಲಿ ಪಾಲು ಕೊಡಲು ಸಾಧ್ಯವೇ ಇಲ್ಲ ಎಂದು ಬಿಟ್ಟ" ಎಂದು ಹೇಳಿ ಪೇಚಾಡಿದರು.

ಅಜ್ಜಿಯ ಅನುಮೋದನೆ

ಬಾಲ್ಯದಲ್ಲಿ ನಮ್ಮ ಅಜ್ಜಿಯ ಜೊತೆ ನಾನು ಹರಿಕಥೆ, ಪುರಾಣಗಳಿಗೆ ಹೋಗುತ್ತಿದ್ದೆ. ಒಂದು ರೀತಿಯಲ್ಲಿ ನಾನು ಅವರ ಅಂಗರಕ್ಷಕನಾಗಿದ್ದೆ. ಅಲ್ಲಿ ಮಂಗಳಾರತಿ ಆದಮೇಲೆ ಕೊಡುತ್ತಿದ್ದ ಕೋಸಂಬರಿ, ಗುಗ್ಗರಿ, ಕಡಲೆಹಿಟ್ಟು ಅವಲಕ್ಕಿ, ಪಂಚಕಜ್ಜಾಯಗಳನ್ನು ಕೈತುಂಬಾ ಇಸ್ಕೊಂಡು ಮನೆಗೆ ಬರುವುದು ನನಗೆ ತುಂಬಾ ಖುಷಿ, ಸಂಭ್ರಮ ಆಗಿತ್ತು. ಒಂದು ಸಲ ನಾನು ಅಜ್ಜಿಯ ಜೊತೆ ಹರಿಕಥೆಗೆ ಹೋದಾಗ, ಯಾರೋ ದೊಡ್ಡ ಮನುಷ್ಯರ ಸೇವಾರ್ಥ ಇತ್ತು ಮಂಗಳಾರತಿ ನಂತರ ಕಲ್ಲುಸಕ್ಕರೆ, ಖರ್ಜೂರ, ದ್ರಾಕ್ಷಿ, ಗೋಡಂಬಿ, ಬಾದಾಮಿ ಬೆರೆಸಿದ ಪ್ರಸಾದ ಸಿಕ್ಕಿತ್ತು. ಅದು ನನ್ನ ಅಂಗಿಯ ಜೇಬು ತುಂಬಿತ್ತು. ಎಡಗೈಲಿ ಜೇಬನ್ನು ಮುಚ್ಚಿಕೊಂಡು, ಬಲಗೈಯನ್ನು ಅಜ್ಜಿಯ ಕೈಹಿಡಿದು ಮನೆಗೆ ವಾಪಸ್ಸು ಬರುವಾಗ, ಒಳಗೆ ನಮ್ಮ ತಾಯಿ, ತಂದೆಯವರಿಗೆ, ಅಜ್ಜಿಯ ಮೇಲೆ ಏನೋ ದೂರು ಹೇಳುತ್ತಿರುವುದು ಕೇಳಿಸಿತು. ಅಜ್ಜಿ ನನ್ನ ಷರಟು ಹಿಡಿದು ಎಳೆಯುತ್ತ "ಸ್ವಲ್ಪ ನಿಲ್ಲೋ" ಎಂದು ಹೇಳಿದರೂ, ನಾನು "ಅಮ್ಮಾ" ಎನ್ನುತ್ತಾ ಮನೆಯ ಒಳಗೆ ನುಗ್ಗಿಬಿಟ್ಟೆ, ನನ್ನ ದನಿ ಕೇಳಿ ನಮ್ಮ ಅಮ್ಮ ಮಾತು ನಿಲ್ಲಿಸಿದರು. ನಮ್ಮ ತಂದೆಯೂ ಸುಮ್ಮನೆ ರೂಮಿನೊಳಗೆ ಹೋದರು.

"ಅಜ್ಜಿ ಸಿದ್ದರಾಮ ದೊಣ್ಣೆ" ಎನ್ನುತ್ತಾ ಬಚ್ಚಲು ಮನೆಗೆ ಹೋದರು. "ಯಾಕೋ ಏನಾಯ್ತು? ಏನು ತಂಟೆ ಮಾಡಿದೆ. ಅಜ್ಜಿಗೆ ಸಿಟ್ಟು ಬಂದ ಹಾಗಿದೆ" ಎಂದರು ಅಮ್ಮ. "ನೀನು ಅಪ್ಪನ ಹತ್ತಿರ ಏನೋ ಚಾಡಿ ಹೇಳ್ತಿದ್ದೆಯಲ್ಲಾ ಅದನ್ನ ಕೇಳಿಸ್ಕೊಬೇಕೂಂತ, ನನ್ನ ಷರಟು ಹಿಡಿದು ಎಳೆದು 'ಸ್ವಲ್ಪನಿಂತುಕೊ' ಎಂದರು. ಆದ್ರೆ ನಾನು ಬಂದುಬಿಟ್ಟೆ ಅದಕ್ಕೇ" ಎಂದು ಸತ್ಯವನ್ನು ನುಡಿದೆ. ನನ್ನ ಮಾತುಕೇಳಿಸಿಕೊಂಡ ಅಜ್ಜಿ "ಧರ್ಮರಾಯ" ಎನ್ನುತ್ತ. ಆಚೆ ಕಡೆ ಜಗುಲಿ ಮೇಲೆ ಗೊಣಗುತ್ತ ಕುಳಿತರು. ಅಮ್ಮ ನಾನು ಜೇಬಿನಿಂದ ತೆಗೆದ ಪ್ರಸಾದವನ್ನು ಸ್ವಲ್ಪ ಜಾಸ್ತಿಯೇ ಕೊಟ್ಟರು.

ಮಾತಾಪಿತೃಗಳ ಸಮ್ಮತಿ - ಸಹಮತ

ಒಂದು ಭಾನುವಾರ ಮಧ್ಯಾಹ್ನ ಮೂರು ಗಂಟೆ ಸಮಯ. ನಮ್ಮ ಸೋದರ ಮಾವ, ದಾಯಾದಿ ಚಿಕ್ಕಪ್ಪನ ಜೊತೆ ಬಂದರು. ನಮ್ಮ ತಂದೆ ಮನೆಯಲ್ಲಿ ಇರಲಿಲ್ಲ. ನಮ್ಮ ಊರಿನ ಆಸ್ತಿ ವಿಚಾರದ ತಕರಾರು ಕೇಸಿನ ವಿಚಾರ ಇಂಗ್ಲೀಷಿನಲ್ಲಿ ಇದ್ದುದರಿಂದ ನಮ್ಮ ತಂದೆಯ ಸಹಾಯ ಪಡೆಯಲು ಬಂದಿದ್ದಾರೆಂದು ಗೊತ್ತಾಯ್ತು. ''ಈವತ್ತು ಭಾನುವಾರ, ಎಲ್ಲಿ ಹೋಗಿದ್ದಾನೆ. ನಿನಗೆ ಗೊತ್ತಿಲ್ಲವೇ?'' ಎಂದು ಕೇಳಿದರು. ನಮ್ಮ ತಾಯಿ, ''ನಂಗೊತ್ತಿಲ್ಲ, ನಂಗೇನೂ ಹೇಳ್ಲಿಲ್ಲ'' ಎಂದಾಗ, ನಾನು ''ನಂಗೊತ್ತು, ಅಂಗಡೀ ರಾಮಣ್ಣೋರ ಮನೇಲಿ ಇಸ್ಪೀಟು ಆಡೋಕೆ ಹೋಗಿದ್ದಾರೆ' ಎಂಬ ಸತ್ಯವನ್ನು ಹೇಳಿದೆ. ನಮ್ಮ ತಾಯಿ ನನ್ನ ತೋಳನ್ನು ಚಿವುಟಿದರು. ಮಾವ, ''ನಿಂಗೊತ್ತೇನೋ ಅವರ ಮನೆ' ಎಂದು ಕೇಳಿದಾಗ ''ಓ ಗೊತ್ತು. ಇದೇ ರಸ್ತೇಲೇ ನಾಲ್ಕನೇ ಕ್ರಾಸ್ನಲ್ಲಿ, ಆಸ್ಪತ್ರೆ ಪಕ್ಕದ ಮನೇನೇ'' ಎಂದು ಮತ್ತೊಂದು ಸತ್ಯ ತಿಳಿಸಿದೆ. ಮಾವ ''ಸರಿ ಹಾಗಾದ್ರೆ ಮನೆ ತೋರಿಸು ಬಾ ಎಂದು ನನ್ನನ್ನು ಕರೆದಾಗ ನಾನು ಅವರ ಹಿಂದೆ ಹೋಗಲು ಸಿದ್ಧನಾದೆ. ನಮ್ಮ ತಾಯಿ ನನ್ನ ತೋಳನ್ನು ಬಲವಾಗಿ ಚಿವುಟುತ್ತಾ, ''ಇಲ್ಲ, ಈವತ್ತು ಅಲ್ಲಿ ಹೋಗಿರಲ್ಲ, ಬೇರೇ ಏನೋ ಕೆಲಸ ಇದೇಂತ ಹೇಳಿದ್ರು'' ಎಂದರೂ, ಮಾವ ''ಏನಾದ್ರಾಗಲೀ, ಬಾರೋ ಅಲ್ಲಿ ಹೋಗಿ ನೋಡೋಣ, ಇದ್ರೆ ಸರಿ, ಇಲ್ದಿದ್ರೆ ವಾಪಸ್ಸು ಬಂದ್ರಾಯ್ತು'' ನನ್ನನ್ನೂ ಆಚೆಗೆ ಕರೆದುಕೊಂಡು ಹೋದರು. ದಾರೀಲಿ ಜೇಬು ತುಂಬಾ ಕಿತ್ತಳೆ ತೊಳೆ ಪೆಪ್ಪರಮೆಂಟು ಕೊಡಿಸಿದರು. ಅಂಗಡೀ ರಾಮಣ್ಣೋರ ಮನೇಲಿ ನಮ್ಮ ತಂದೆ ಇದ್ರು. ಮಾವ, ಚಿಕ್ಕಪ್ಪನೂ ಇಸ್ಪೀಟು ಆಟಕ್ಕೆ ಸೇರಿಕೊಂಡ್ರು. ನಮ್ಮ ತಂದೆ ನನ್ನನ್ನು ದುರುಗುಟ್ಟಿ ನೋಡಿದರು. ನಾನು ಅವರ ಹಿಂದೆ ಕೂತೆ. ರಾಮಣ್ಣೋರ ಮನೇಲಿ ಎಲ್ಲರೂ ಉಪ್ಪಿಟ್ಟು ಕಾಫಿ ಸರಬರಾಜು ಆಯಿತು. ಕತ್ತಲಾದ್ರೂ ಆಟ ಮುಂದುವರೆಯಿತು. ಆಟದ ಮಧ್ಯೆ ಯಾರೋ, ''ಕಳಾವರ್‌ನೈಲಾ, ಯಾರ್ಹತ್ರ ಇದೆ. ಮುಚ್ಚಿಟ್ಟುಕೊಂಡು ಸತಾಯಿಸ್ತಾ ಇದಾರೆ'' ಎಂದಾಗ ನಾನು ''ಇಲ್ಲಿದೆ'', ಎಂದು ನಮ್ಮ ತಂದೆಯವರ ಕೈತೋರಿಸಿದೆ. ಎಲ್ಲರೂ ''ಹೋ'' ಎಂದು ನಕ್ಕರು. ನಮ್ಮ ತಂದೆ ಸಿಟ್ಟಿನಿಂದ ಹೊಡೆಯೋಕೆ ಬಂದರು. ''ಹೋಗಲಿ ಬಿಡಿ ಹುಡುಗ ಗೊತ್ತಾಗ್ಲಿಲ್ಲ, ಆದ್ರೂ ಸತ್ಯವಂತ ನಿಮ್ಮ ಘುಗ ''ಧರ್ಮರಾಯ'' ಅಂದರು'' ರಾಮಣ್ಣೋರು. ಮತ್ತೆ ಹೊಸ ಆಟ ಷುರು ಆಯಿತು. ರಾತ್ರಿ ಒಂಭತ್ತು ಗಂಟೆಗೆ ಮನೆಗೆ ವಾಪಸ್ಸು ಬಂದಾಗ, ನಮ್ಮ ತಂದೆ ''ಇವರನ್ಯಾಕೆ ಅಲ್ಲಿಗೆ ಕಳಿಸಿದೆ. ನಾನು ಅಲ್ಲಿಗೆ ಹೋಗ್ತೀನೀಂತಾ ಹೇಳಿದ್ನಾ?'' ಎಂದು ನಮ್ಮ ತಾಯಿಯ ಮೇಲೆ ರೇಗಿದರು.

''ನಾನ್ಯಾಕೆ ಹೇಳಲಿ ಸದ್ಯ. ಎಲ್ಲಿ ಹೋಗಿದಾರೋ ನಂಗೊತ್ತಿಲ್ಲಾಂತ್ಲೇ ಹೇಳ್ದೆ, ನಿಮ್ಮ ಮಗ ಇದಾನಲ್ಲ 'ಧರ್ಮರಾಯ' ಸತ್ಯವಂತ, ನಂಗೊತ್ತು, ಅಂಗಡೀ ರಾಮಣ್ಣೋರ ಮನೇಲಿರ್ತಾರೆ, ಇಸ್ಪೀಟಾಡ್ತ ಅಂತ ಹೇಳ್ದೋನು ಅವನೇ'' ಎಂದರು ಅಮ್ಮ. ''ಒಳ್ಳೇ 'ಧರ್ಮರಾಯನ' ಕಥೆ ಆಯ್ತು. ಅಲ್ಲೂ ಅಷ್ಟೆ ನನ್ನ ಹಿಂದೆಕೂತ್ಕೊಂಡು, 'ಕಳಾವರ್ ನೈಲಾ' ನಮ್ಮಪ್ಪನ ಹತ್ರಿದೇಂತ ಹೇಳಿ, ಆಟ ಎಲ್ಲಾ ಕೆಡಿಸಿ ಹಾಳು ಮಾಡಿದ'' ಎಂದು ''ಧರ್ಮರಾಯ''ನೆಂಬ ಬಿರುದಿಗೆ ತಮ್ಮ ಸಹಮತವನ್ನು ಸೂಚಿಸಿದರು. ಮುಂದೆ ನನಗೆ ನಾಲ್ಕು ಜನ ತಮ್ಮಂದಿರು ಹುಟ್ಟಿದ್ದು

ಕಾಕತಾಳೀಯ ಆದರೂ, ನಮ್ಮ ತಾಯಿ ಬದುಕಿರೋವರ್ರೂ ನನ್ನನ್ನು "ಧರ್ಮರಾಯ" ಅಂತಾಲೇ ಕರೆಯುತ್ತಿದ್ದುದು ಸತ್ಯಸಂಗತಿಯೇ.

ಸತಿ, ಸಂತಾನವೂ ಸಹ

ಮದುವೆ ಆದಮೇಲೆ, ನನ್ನ ಹೆಂಡತಿ ಮತ್ತು ತಾಯಿ ನಡುವೆ ಮಾತು ಕತೆಗಳ ವಿರಸ ಬಂದಾಗ, ನಾನು ಸಂದರ್ಭಾನುಸಾರವಾಗಿ ನ್ಯಾಯದ ಪಕ್ಷವಹಿಸುತ್ತಿದ್ದುದು ನನ್ನ ಹೆಂಡತಿಯ ಆಕ್ಷೇಪಣೆಗೆ ಕಾರಣವಾಗಿತ್ತು. ಗಂಡನು ಯಾವಾಗಲೂ ಹೆಂಡತಿಯ ಪರವಾಗಿಯೇ ಇರಬೇಕೆಂಬುದು ಅವಳ ವಾದ. ಪಿತ್ರಶೇಷದ ವಿಷಯದಲ್ಲೂ ನಾನು ಮೊಸರನ್ನ ಮೂತಿಗೆ ಮೆತ್ತಿಸಿಕೊಂಡ 'ಬಕರಾ' ಎಂಬುದೇ ಅವಳ ಅಭಿಮತ. ಮಕ್ಕಳ ಮದುವೆ ವಿಚಾರದಲ್ಲಿ, ನಾನು ನನ್ನ ಮಕ್ಕಳ, ವಿದ್ಯೆ, ಸಂಪಾದನೆ, ರೂಪ, ಎತ್ತರ, ಬಣ್ಣ ಇತ್ಯಾದಿ ವಿವರಗಳನ್ನು ಸತ್ಯವಾಗಿ ಹೇಳುತ್ತಿದುದರಿಂದ ಕುದುರಬಹುದಾದ ಅನೇಕ ಒಳ್ಳೆಯ ಸಂಬಂಧಗಳು ಕೈತಪ್ಪಿತೆಂದು ತಾಯಿ ಮಕ್ಕಳ ಅನಿಸಿಕೆ. ಈ ಎಲ್ಲಾ ಕಾರಣಗಳಿಂದಲೂ ನನ್ನ ಹೆಂಡತಿ, ಮಕ್ಕಳೂ ಸಹ ನನಗೆ 'ಧರ್ಮರಾಯ'ನೆಂಬ ಬಿರುದನ್ನು ಅನುಮೋದಿಸಿದ್ದಾರೆ.

ಇದೆಲ್ಲಾ ಒಂದು ಕಥೆಯಾದರೆ ಇತ್ತೀಚೆಗೆ ಮಾರುಕಟ್ಟೆಯಲ್ಲಿ ಆದುದು ಮತ್ತೊಂದು ಸ್ವಾರಸ್ಯಕರ ಕಥೆ. ಅಂದು ಸಂಜೆ ತರಕಾರಿ ಮಾರುಕಟ್ಟೆಯಲ್ಲಿ ಕರಿಯ ಠೊಣಪನೊಬ್ಬ ಕೈಗಾಡಿಯನ್ನು ನನ್ನಕಡೆ ತಳ್ಳುತ್ತ. "ಆಪಲ್ ಚೆನ್ನಾಗಿದೆ, ಕೊಡ್ಲಾಸಾರ್" ಎಂದು ಕೇಳಿದ.

"ಹೇಗೆ?"

"ಐವತ್ತು ರೂಪಾಯಿ. ಎಷ್ಟು ಬೇಕ್ಸಾರ್?"

"ಒಂದು ಕೆ.ಜಿ." ಎನ್ನುತ್ತಾ ನೂರುರುಪಾಯಿಯನ್ನು ಜೇಬಿನಿಂದ ತೆಗೆದೆ.

"ಎರಡು ಕೆ.ಜಿ. ತೊಗೊಳ್ಳಿ, ಸಾರ್, ಚೆನ್ನಾಗಿದೆ. ಸಸ್ತಾಮಾಲ್" ಎಂದು ಸೇಬಿನ ಹಣ್ಣುಗಳನ್ನು ತಟ್ಟೆಗೆ ಹಾಕಲು ಷುರುಮಾಡಿದ.

"ಒಂದು ಕೆ.ಜಿ.ನೇ ಸಾಕು ಎನ್ನುತ್ತಾ, ನೂರುರೂಪಾಯಿ ನೋಟನ್ನೂ ಕೊಟ್ಟೆ. ನೋಟನ್ನು ಜೇಬಿಗೆ ಸೇರಿಸಿ, ಬೇಡವೆಂದರೂ ಕೇಳದೆ ಎರಡು ಕೆ.ಜಿ. ಸೇಬನ್ನು ತೂಕಮಾಡಿ ಪ್ಲಾಸ್ಟಿಕ್ ಚೀಲಕ್ಕೆ ಹಾಕಿ ಕೈಗೆ ಕೊಟ್ಟುಬಿಟ್ಟ. ಐವತ್ತು ರೂಪಾಯಿ ನೋಟು ಇಲ್ಲದೇ, ಹೀಗಾಯಿತಲ್ಲಾ ಎಂದು ಕೊಂಡು, ಚೀಲ ಕೈಗೆ ತೆಗೆದುಕೊಂಡಾಗ, ಕೆಳಗೆ ಐದು ನೂರು ನೋಟು ಬಿದ್ದದ್ದು ಕಾಣಿಸಿತು. ನಾನು ಜೇಬಿನಿಂದ ನೂರರ ನೋಟು ತೆಗೆಯುವಾಗ ಬಿದ್ದದ್ದೇ ಅದು. ಅದನ್ನು ತೆಗೆದುಕೊಂಡು ಜೇಬಿನಲ್ಲಿಟ್ಟುಕ್ಕೊಂಡು ಹೊರಟದ್ದು ಅವನೂ ನೋಡಿದ.

ನಾನೂ ಸ್ವಲ್ಪದೂರ ಹೋದ ಮೇಲೆ "ಸ್ವಾಮೀ, ಸಾರ್" ಎಂದು ಯಾರೋ ಕೂಗಿದ್ದು ಕೇಳಿಸಿ ಹಿಂತಿರುಗಿ ನೋಡಿದೆ. ಕರಿಯ ಠೊಣಪ ನನ್ನಕಡೆ ನೋಡುತ್ತಿದ್ದುದು ಕಾಣಿಸಿತು. ನನ್ನನ್ನು ಅಲ್ಲವೆಂದುಕೊಂಡು ಮುಂದೆ ಹೊರಟೆ. ಮತ್ತೆ ಚಪ್ಪಾಳೆ ಕೇಳಿಸಿತು.

"ನಿಮ್ಮನ್ನೇ ಸಾರ್ ಕೂಗಿದ್ದು" ಎಂದ. ವಾಪಸ್ಸು ನಡೆದು "ಏನು" ಎಂದೆ.

"ದುಡ್ಡು ಕೊಟ್ರಾ?"

''ನೂರು ರೂಪಾಯಿನೋಟು ಮೊದಲೇ ಕೊಡಲಿಲ್ವಾ?''

''ಸುಳ್ಳಾಕ್ಕೇ ಹೇಳ್ತೀರಿ. ಈಗ ತಾನೇ ಕೇಳಗೆ ಬಿದ್ದ ಐದುನೂರುರೂಪಾಯಿ ನೋಟು ತೊಗೊಂಡು ಜೇಬಿನಲ್ಲಿಟ್ಟುಕ್ಕೊಂಡು ಹೋಗಿದ್ದು ನೋಡ್ಲಿಲ್ವಾ?

ಇಷ್ಟು ವಯಸ್ಸಾಗಿದೆ. ಮೋಸಮಾಡೋಕೆ ನಾಚಿಕೆ ಆಗೋಲ್ವಾ?''

''ನಾನು ಏನು ಮೋಸ ಮಾಡಿಲ್ಲ, ನನ್ನ ಜೇಬಲ್ಲಿದ್ದ ನೋಟು ಬಿದ್ದಿತ್ತು ಎತ್ಕೊಂಡೆ. ನಿಂಗೆ ಮೊದ್ಲೇ ನೂರುರೂಪಾಯಿ ಕೊಟ್ಟಿದ್ನ ಜೇಬಲ್ಲಿ ಇಟ್ಟುಕೊಂಡಿದ್ದು ನೋಡಿದೀನಿ.''

''ಏ, ಮುದುಕಾ! ಗಾಂಚಾಲಿ ಮಾಡಬೇಡ. ಸುಮ್ನೆ ದುಡ್ಡು ಕೊಟ್ಟು ಹೋಗು ಇಲ್ದಿದ್ರೆ.....''

''ಮರ್ಯಾದೆ ಕೊಟ್ಟು ಮಾತಾಡು. ನಾನು ಸುಳ್ಳು ಹೇಳ್ತಿಲ್ಲ.''

ಈಗ ಕರಿ ಠೊಣಪ ಏಕವಚನದಿಂದ, ದುರ್ಭಾಷೆಗಿಳಿದ. ಬರೆಯಲಾಗದ, ಬರೆಯಬಾರದ ಮಾತುಗಳಿಂದ ನನ್ನ ವಂಶಾವಳಿಯ ಮರ್ಯಾದೆಯನ್ನೆಲ್ಲಾ ಜಾಲಾಡಿದ. ಅಜ್ಜಿಯಿಂದ ಹಿಡಿದು ಮಕ್ಕಳವರೆಗೆ ಎಲ್ಲ ಹೆಂಗಸರ ಮಾನಭಂಗವನ್ನು ಮಾತಿನಲ್ಲೇ ಮಾಡಿದ. ಅವನ ಕೂಗಾಟಕ್ಕೆ ಜನ ಸೇರಿದರು. ಪೋಲೀಸ್ ಪೇದೆಯೊಬ್ಬನೂ ಪ್ರತ್ಯಕ್ಷನಾದ. ನಾನು ನಡೆದದ್ದನ್ನು ಹೇಳಿದೆ. ಠೊಣಪ ಮಾತ್ರ ನಾನು ದುಡ್ಡು ಕೊಟ್ಟಿಲ್ಲವೆಂದೇ ಸಾಧಿಸಿ ಮತ್ತೆ ಬೈಗಳ ಮಳೆಗರೆದ. ಪೋಲೀಸು ಪೇದೆ, ''ಹೋದ್ರೆ ಹೋಗ್ಲಿ ಕೊಟ್ಟು ಬಿಡಿಸಾರ್''

ನಾನು, ''ಹಣ ಕಷ್ಟಪಟ್ಟು ಸಂಪಾದಿಸಿದ್ದು, ಬಿಟ್ಟಿ ಬಿದ್ದಿಲ್ಲ, ಹಣ ಕೊಟ್ಟಿರುವುದು ಸತ್ಯವೆಂದು ಹೇಳಿದೆ.'' ಅಷ್ಟು ಹೊತ್ತಿಗೆ ಠೊಣಪನ ಹೆಂಡತಿಯೂ ಬಂದಳು ಅವನು ಹೇಳಿದ ಮಾತು, ನನ್ನ ಮಾತು ಕೇಳಿದವಳು, ''ನೀವು ಧರ್ಮರಾಯರ ಅಪರಾವತಾರವೇ ಇರಬಹುದು ಸ್ವಾಮೀ. ಆದ್ರೆ ಕೊಟ್ಟಿದ್ರೆ ನೋಟು ಇಲ್ಲೇ ಇರಬೇಕಲ್ಲ, ಆದ್ರಿಲ್ವಲ್ಲ'' ಎಂದು ಸತೀಧರ್ಮ ತೋರಿದಳು. ಠೊಣಪ, ''ಕೊಡಾದಿದ್ರೇ, ಹಣ್ಣು ತತ್ತಾರಯ್ಯಾ ಇಲ್ಲಿ'' ಎನ್ನುತ್ತಾ, ನನ್ನ ಕೈಲಿದ್ದ ಹಣ್ಣಿನ ಚೀಲ ಕಿತ್ಕೊಂಡು ನನ್ನನ್ನು ತಳ್ಳಿದ. ಜನರೆಲ್ಲಾ ಚದುರಿದರು, ಪೇದೆಯೂ ಮಾಯವಾದ. ಹಣ, ಹಣ್ಣು, ಮಾನ ಕಳೆದುಕೊಂಡು ಮನೆಗೆ ಬಂದೆ. ನನ್ನ ಕಥೆಕೇಳಿದ ಹೆಂಡತಿ ''ಬಡ್ಕೊಂಡ್ತೀನಿ, ಸಾಮಾನು ಕೈಗೆ ತೆಗೆದುಕೊಂಡ್ಮೇಲೆ ದುಡ್ಡುಕೊಡೀ ಅಂತಾ ನೀವೆಲ್ಲಿ ಕೇಳ್ತೀರಿ'' ನನ್ನ ಮಾತು. ''ಆಗ್ಬೇಕು ನಿಮ್‌ಗೆ'' ಎಂದು ಮಂಗಳಾರತಿ ಮಾಡಿದಳು.

''ಹೌದು, ನಮ್ಗೇನೋ ನೀವು ಸುಳ್ಳು ಹೇಳಲ್ಲಾ, ಧರ್ಮರಾಯರೂ ಅಂತಗೊತ್ತು. ಆದ್ರೂ ಚೆನ್ನಾಗಿ ಜ್ಞಾಪಿಸಿಕೊಳ್ಳಿ, ನಿಮ್ಮ ಹತ್ರ ನೂರುರೂಪಾಯಿ ನೋಟು ಇತ್ತಾ, ನಿಜವಾಗ್ಲೂ ನೀವು ಅವನಿಗೆ ಕೊಟ್ರಾ?'' ಎಂದು ಉರಿಯೋಗಾಯಕ್ಕೆ ಟಿಂಚರ್ ಸುರಿದಾಗ, ನನ್ನ ಎದೆ ಒಡೆಯಲಿಲ್ಲ.

ನೀವು ನಂಬದ್ರೆ ನಂಬಿ, ಬಿಟ್ಟರೆ ಬಿಡಿ,


ನಾನು ಮಾತ್ರಾ ನಿಜಾನೇ ಹೇಳ್ತೀನಿ.

ವಿಷಕಂಠ ವಿಭೂತಿ ತಿಂದ ಕಥೆ

-ಧೃತಿ

ನಾನು ಸ್ನಾನ ಮುಗಿಸಿ ಒಗೆದ ಬಟ್ಟೆ ಧರಿಸಿದ ಕೂಡಲೆ ದೇವರಿಗೆ ದೀಪ ಹಚ್ಚುವ ಸುಳುಹು ಹಿಡಿದ ನಮ್ಮ ಮೂರು ವರ್ಷದ ಮೊಮ್ಮಗ ನಾನೂ ಪೂಡೆ ಮಾಡ್ತೀನಿ ಎಂದು ಪೂಜೆಗೆ ಸಿದ್ಧವಾಗಿ ಬಿಡುತ್ತಾನೆ. ಜಕಾರ ಹೊರಡದ ಅವನ ಬಾಯಲ್ಲಿ ಪೂಜೆ ಪೂಡೆಯಾಗಿ, ಪೂಜಾಕಾರ್ಯ ನೆರವೇರಿಸಲು ನನ್ನ ತೊಡೆಯೇರಿ ಕುಳಿತುಬಿಡುತ್ತಾನೆ. ಅವನು ಬಂದಕೂಡಲೆ ನಾನು ಮೈಯೆಲ್ಲಾ ಕಣ್ಣಾಗಿ ಅವನನ್ನು ಕಾಯಬೇಕು. ಏಕೆಂದರೆ ಅವನಿಗೆ ಪೂಜೆಯ ಆಸಕ್ತಿ ಇರುವುದು ಮೂರು ವಿಷಯಗಳಲ್ಲಿ ಮಾತ್ರ. ದೇವರ ಮುಂದಿರುವ ಗಂಟೆಯನ್ನೆತ್ತಿಕೊಂಡು ಗಣಗಣ ಬಾರಿಸುವುದು. ಅದನ್ನು ಹಾಗೆ ಬಾರಿಸಬಾರದಪ್ಪ ಎಂದು ಹೇಳುವಷ್ಟರಲ್ಲಿ ಅದನ್ನು ಕೆಳಗಿಟ್ಟು, ಬೆಂಕಿಪೆಟ್ಟಿಗೆಯಿಂದ ಬೆಂಕಿಕಡ್ಡಿ ತೆಗೆದು ಅದನ್ನು ಗೀರಲು ಪ್ರಯತ್ನಿಸುವುದು. ಈ ಕೆಲಸವನ್ನು ಮಾಡಲು ನಾನು ಅಡ್ಡಿಪಡಿಸುತ್ತೇನೆಂದು ಅವನಿಗೆ ಕೋಪ. ಹಟಹಿಡಿದು ಕೂರುತ್ತಾನೆ. ಕೊನೆಗೆ ಊದುಬತ್ತಿ ಹಚ್ಚಿ ಅವನ ಕೈಗೆ ಕೊಟ್ಟು ಸಮಾಧಾನ ಪಡಿಸಿ, ಎಲ್ಲಿ ಹೇಳಪ್ಪ 'ಅಗಜಾನನ ಪದ್ಮಾರ್ಕಂ' ಎಂದು ಸ್ತೋತ್ರ ಹೇಳಿಸಲು ಪ್ರಯತ್ನ ಪಟ್ಟರೆ ಅವನೆಲ್ಲಿ ಕೇಳುತ್ತಾನೆ! ದಿನವೂ ಅದನ್ನೇ ಮಾಡಲು ಬೇಸರವೋ ಎಂಬಂತೆ 'ಗಣೇಶ ಮಾಮಿಗೆ ಏನಾಯ್ತು ಆ ಕತೆ ಹೇಳು ಎನ್ನುತ್ತಾನೆ. ಅಥವಾ ಕೃಷ್ಣ; ಈಶ್ವರ; ಹೀಗೆ ಬೇರೆ ಬೇರೆ ದೇವರುಗಳ ವಿಗ್ರಹದತ್ತ ಕೈ ತೋರಿ ಅದರ ಕಥೆ ಹೇಳು; ಇದರ ಕಥೆ ಹೇಳು ಎಂದು, ನಾವು ಪಾಲಿಸುತ್ತೇವೆಂಬ ಭರವಸೆಯಿಂದಲೇ ಆಜ್ಞೆ ಮಾಡುತ್ತಾನೆ. ಹೀಗೆ ನಾನು ಒಂದು ದಿನ ಗಣೇಶನ ಕಥೆ ಹೇಳಬೇಕಾಗಿ ಬಂತು. ಮೂರು ವರ್ಷದ ಮಗುವಿಗೆ ಅರ್ಥವಾಗುವಂತೆ ನಾನು ಸಂಕ್ಷಿಪ್ತವಾಗಿ ಒಂದು ಕಥೆ ಹೇಳಿದೆ. ಒಂದು ದಿನ ಪಾರ್ವತಿಯಮ್ಮ ಮನೇಲಿ ಯಾರೂ ಇಲ್ದೇ ಇದ್ದಾಗ ಸ್ನಾನ ಮಾಡ್ಬೇಕಾಯ್ತಂತೆ. ಆಗ ಅವಳು ಮಣ್ಣಿನಿಂದ ಒಂದು ಬೊಂಬೆಮಾಡಿ 'ನೀನು ಹೊರಗೇ ನಿಂತಿರು. ಯಾರು ಬಂದ್ರೂ ಒಳಗೆ ಬಿಡ್ಬೇಡ' ಅಂತ ಹೇಳಿ ಸ್ನಾನ ಮಾಡೋಕೆ ಹೋದ್ಲಂತೆ. ಆ ಹೊತ್ತಿಗೆ ಈಶ್ವರಪ್ಪ ಬಂದನಂತೆ; ಆಗ ಗಣೇಶ 'ನೀನು ಅಲ್ಲೇ ಇರು; ಒಳಕ್ಕೆ ಬರ್ಬೇಡ' ಅಂತ ತಡೆದ್ನಂತೆ. ಆದರೆ ಈಶ್ವರಪ್ಪ 'ನಾನು ಒಳಗೆ ಹೋಗೇ ಹೋಗ್ತೀನಿ; ನೀನು ಜಾಗ ಬಿಡು ಅಂದನಂತೆ. ಆದರೆ ಗಣೇಶ ಬಿಡ್ಲಿಲ್ಲ. ಇಬ್ರೂ ಜಗಳ ಆಡಿದ್ರಂತೆ ಈಶ್ವರಪ್ಪಂಗೆ ಕೋಪ ಬಂದ್ಬಿಟ್ತು. ಬೊಂಬೆಗೆ ಹತ್ತ ಹತ್ತ ಅಂತ ಹೇಳಿ ಜೋರಾಗಿ ಏಟುಕೊಟ್ನಂತೆ. ಬೊಂಬೆ ತಲೆ ಮುರಿದೇ ಹೋಯ್ತಂತೆ. ಪಾರ್ವತಮ್ಮ ಸ್ನಾನ ಮುಗಿಸಿ ಬಂದು ನೋಡ್ತಾಳೆ! ಬೊಂಬೆಗೆ ತಲೇನೇ ಇಲ್ಲ! 'ನನ್ನ ಮಗೂಗೆ ತಲೇನೇ ಇಲ್ಲ' ಅಂತ ಪಾರ್ವತಮ್ಮ ಆ... ಆ... ಅಂತ ಅಳ್ತಾ ಕೂತ್ಕೊಂಡ್ಲಂತೆ. ಆಗ ಈಶ್ವರಪ್ಪ ಹೊರಗೆ ಹೋಗಿ ಒಂದು ಆನೆ ತಲೆ ತಂದು ಆ ಬೊಂಬೆ ಮೇಲೆ ಇಟ್ಬಿಟ್ನಂತೆ. ಆಗ ಬೊಂಬೆ ಸರಿಹೋಯ್ತು. ಆದರೆ ಆನೆ ಮುಖ ಬಂದ್ಬಿಟ್ತು. ದೊಡ್ಡ ಕಿವಿ; ಉದ್ದನೆ ಸೊಂಡಿಲು ಎಲ್ಲಾ ಬಂದ್ಬಿಟ್ತು. ಅವನನ್ನೇ ಗಣೇಶ ಅಂತ ನಾವು ಪೂಜೆ ಮಾಡೋದು ಎಂದೆ.

ನನ್ನ ಮೊಮ್ಮಗನಿಗೆ ಕತೆ ಸುಮಾರಾಗಿ ಅರ್ಥವಾಗಿರಬೇಕು. ತುಂಬಾ ಕುತೂಹಲದಿಂದಲೇ ಕೂಡಲೇ ಕೇಳುತ್ತಿದ್ದವನು ಇದ್ದಕ್ಕಿದ್ದಂತೆ ವಿಭೂತಿ ಡಬ್ಬಿಗೆ ಕೈಹಾಕಿ ವಿಭೂತಿ ಉಂಡೆಯೊಂದನ್ನು ಈಶ್ವರನ ವಿಗ್ರಹದ ಸಮೀಪಕ್ಕೆ ಹಿಡಿದು ತಿನ್ನು; ತಿನ್ನು; ಇದನ್ನೇ ತಿನ್ನು ಎಂದು ಈಶ್ವರನಿಗೇ ತಿನ್ನಿಸತೊಡಗಿದ. ನನಗೆ ಮಗುವಿನ ಕೋಪ ಅರ್ಥವಾಗಿ ಅಬ್ಬಾ! ನಮ್ಮನೆ ಈ ಗಣಪನಿಗೆ ಎಂಥಾ ಕೋಪ ಬಂದ್ಬಿಟ್ಟಿತಪ್ಪಾ ಎಂದು ಉದ್ಗರಿಸಿದೆ. ಮಗು ಮತ್ತೂ ಮತ್ತೂ ಈಶ್ವರನಿಗೆ ವಿಭೂತಿಪುಡಿ ತಿನ್ನಿಸತೊಡಗಿದ. ಹೋಗಲಿ ಬಿಡು ಪುಟ್ಟ; ಅವನಿಗೆ - ಪಾರ್ವತಿಯಮ್ಮನೇ ಬೊಂಬೆ ಮಾಡಿಟ್ಟಿದ್ದು ಅಂತ ಗೊತ್ತಿರಲಿಲ್ಲ; ಅದಕ್ಕೇ ಹತ್ತ ಹತ್ತ ಮಾಡ್ದ. ನೀನು ಅವನಿಗೆ ವಿಭೂತಿ ತಿನ್ನಿಸಬಾರ್ದು. ಆ ಈಶ್ವರ ಮೊದಲೇ ವಿಷಕಂಠ. ವಿಷವೆಲ್ಲಾ ಅವನ ಗಂಟಲಲ್ಲೇ ಅಮರಿಕೊಂಡಿದೆ. ಇನ್ನು ನಿನ್ನ ವಿಭೂತಿ ತಿನ್ನೋಕೆ ಅವನ ಕಂಠದಲ್ಲಿ ಜಾಗವೆಲ್ಲಿದೆ? ಎಂದೆ. ಮಗುವಿಗೆ ಅರ್ಥವಾಗದೆ ಪಿಳಿಪಿಳಿ ನನ್ನನ್ನೇ ನೋಡಿದ. ಪುಟ್ಟ; 'ಬೇಕಿದ್ರೆ ಈಶ್ವರನಿಗೆ ಈ ವಿಭೂತಿ ಹಚ್ಚು; ಹಚ್ಚಿಸ್ಕೊಳ್ತಾನೆ. ಏಕೆಂದರೆ ಅವನು 'ಭಸ್ಮ ಧೂಳಿತ ಸರ್ವಾಂಗ' ಆಗಿದ್ದಾನೆ. ಆದರೆ ಭಸ್ಮವನ್ನು ವಿಷಕಂಠನಿಗೆ ತಿನ್ನಿಸಬಾರದು ಎಂದೆ. ಅವನಿಗೆ ಎಷ್ಟು ಅರ್ಥವಾಯಿತೆಂಬುದು ನನ್ನ ಊಹೆಗೆ ನಿಲುಕದ ವಿಷಯ. ಆದರೆ ಅವನು 'ವಿಷಕಂಠ' ಕತೆ ಹೇಳು ಎಂದು ಪಿಳಿಪಿಳಿ ಕಣ್ಣುಗಳಿಂದ ನನ್ನನ್ನು ನೋಡುತ್ತಾ ದುಂಬಾಲು ಬಿದ್ದಾಗ 'ನಾಳೆ ಹೇಳ್ತೀನಿ; ಈಗ ನಡಿ' ಎಂದು ಎಬ್ಬಿಸಿ ಕಳಿಸಿದೆ. ಒಂದು ವೇಳೆ ಹೇಳದಿದ್ದರೆ ಈಶ್ವರನಿಗೆ ಮತ್ತಾವ ಕೈಂಕರ್ಯ ಒದಗುತ್ತಿತ್ತೋ ಊಹಿಸಲಾರದವಳಾಗಿದ್ದೆ.



ಆಧುನಿಕ ಪೈಲಾಕ್

ಟೈಂ ಮೆಷೀನ್......!

- ಎಚ್.ಗೋಪಾಲಕೃಷ್ಣ

ಕಳೆದ ವರ್ಷ ಹೀಗಾಯಿತು. ಮೂವತ್ತು ವರ್ಷದ ಹಿಂದೆ ನಮ್ಮ ಜತೆಯಲ್ಲಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ನಮ್ಮ ಸಹಪಾಠಿ ಗಿರಿಯಪ್ಪ ಅನ್ನುವ ಒಬ್ಬರು ತೀರಿಹೋದರಂತೆ ಅಂತ ಒಂದು ಸುದ್ದಿಯನ್ನು ಮತ್ತೊಬ್ಬ ಗೆಳೆಯರು ತಂದರು. ಸುಮಾರು ಮೂರು ನಾಲ್ಕು ವರ್ಷ ಜತೆಯಲ್ಲಿ ಓದಿದವರು, ಕೆಮಿಸ್ಟ್ರಿ ಲ್ಯಾಬೋರೇಟರಿಯಲ್ಲಿ ಫಾರ್ಮುಲಾಗಳನ್ನ ಪಕ್ಕ ಪಕ್ಕದಲ್ಲಿ ನಿಂತು ಕಾಪಿ ಮಾಡಿದವರು, ಫಿಸಿಕ್ಸ್ ಕ್ಲಾಸಿನಲ್ಲಿ ಮೇಸ್ಟ್ರನ್ನ ಲೇವಡಿ ಮಾಡಿದವರು, ಕನ್ನಡ ತರಗತಿಗಳಿಗೆ ಚಕ್ಕರ್ ಹಾಕಿ ಅವಾಗ ಬೆಳಗಿನ ಹೊತ್ತು ತೋರಿಸುತ್ತಿದ್ದ ಮಾರ್ನಿಂಗ್ ಶೋಗಳಿಗೆ ಒಟ್ಟೊಟ್ಟಿಗೆ ಹೋದವರು ನಾವು. ಒಟ್ಟಿಗೆ ಎನ್‌ಸಿಸಿ ಪೆರೇಡು ಮಾಡಿದವರು, ಜಿಟಿಎನ್ ಕ್ಲಾಸಿನಲ್ಲಿ ಕಡ್ಲೆಕಾಯಿ ತಿಂದು ಬೈಸಿಕೊಂಡವರು: ಎಂವಿಸೀ ಅವರಿಗೆ ಮೆಟ್ಟಲು ಹತ್ತಲು ಆಗದು ಎಂದು ಗೊತ್ತಾದಾಗ ಅವರ ಕ್ಲಾಸನ್ನ ಕೆಳಗಿನ ಅಂತಸ್ತಿನಲ್ಲಿಯೇ ಮಾಡಿ ಅಂತ ಒತ್ತಾಸೆ ತಂದವರು ನಾವು ಈ ಗುಂಪಿನವರೇ. ಸೆಂಟ್ರಲ್ ಕಾಲೇಜಿನ ಕ್ಯಾಂಟೀನಿನಲ್ಲಿ ಬೈಟೂ ಕಾಫಿ ಹೀರಿದವರು, ವಿಠ್ಠಲ ವಿಹಾರದಲ್ಲಿ ನಾಲ್ಕಾಣೆ ಹಾಕಿ ಜ್ಯೂಕ್ ಬಾಕ್ಸಿನಲ್ಲಿ ರಾಜ್‌ಕುಮಾರ್ ಹಾಡು ಕೇಳಿದವರು.. ಅದಕ್ಕಿಂತ ಮಿಗಿಲಾಗಿ ಕಪಾಲಿ ಥಿಯೇಟರು ಓಪನ್ ಆದಾಗ ಹಿಂದಿ ವಿರೋಧೀ ಚಳವಳಿಯಲ್ಲಿ ಭಾಗವಹಿಸಿ ಪೋಲೀಸಿನವರ ಹತ್ತಿರ ಲಾಟಿ ಏಟು ತಿಂದು ಒಂದುವಾರ ತೋಳನ್ನ ಜತನವಾಗಿ ಮನೆಯವರಿಗೆ ತೋರಿಸದೇ ಕಾಪಾಡಿಕೊಂಡಿದ್ದವರು ನಾವು-ಈ ಗಿರಿಯಪ್ಪ ನಮ್ಮೆಲ್ಲಾ ಈ ಆಟ ಪಾಟಗಳಲ್ಲಿ ಜತೆ ಜತೆಯಾಗಿದ್ದವನು. ಇಂತಹ ಗೆಳೆಯ ತೀರಿದಾನೆ ಅಂದರೆ ನಂಬುವುದು ಹೇಗೇ?

ಸತ್ಯವೇನ್ರೀ ನೀವು ಕೇಳಿದ ವಿಷಯ? ಅಂತ ಸಾವಿನ ಸಂಗತಿ ಹೇಳಿದ ಗೆಳೆಯರನ್ನ ಕೇಳಿದೆ.

ಹೌದ್ರೀ ನನಗೆ ಅವನ ಆಫೀಸಿನಲ್ಲಿ ವಿಷಯ ತಿಳೀತು ಅಂದರು.

ಸುಮಾರು ಮೂವತ್ತು ವರ್ಷ ಇದೇ ಬೆಂಗಳೂರಿನಲ್ಲಿ ಇದ್ದೆವು. ಅವನು ಕೆಲಸ ಮಾಡುವ ಆಫೀಸೇನೂ ಅಂತ ದೂರದ್ದಲ್ಲ. ಆದರೂ ಒಂದೆರೆಡು ಸಲ ಬಿಟ್ಟು ಮತ್ತ್ಯಾಕೆ ಆತನನ್ನ ಭೇಟಿ ಮಾಡಲಿಲ್ಲ ಅನ್ನುವ ಪ್ರಶ್ನೆ ಎದುರಾಯಿತು.

ಕಾಲೇಜಿನ ಓದು ಮುಗಿದ ಮೇಲೆ ನಾವು ನಾವು ಅಂಟಿಸಿಕೊಳ್ಳೊ ಕೆಲಸ ಮತ್ತು ನಮ್ಮ ಆಯ್ಕೆ ವಿಭಿನ್ನವಾಗಿರೋದರಿಂದ ಮೊದಲಿನ ಗೆಳೆಯರನ್ನ ಮೊದಲಿನಂತೆ ಸಲೀಸಾಗಿ ಭೇಟಿ ಮಾಡುತ್ತಿರಲಿಲ್ಲ ಅಂತ ಸಮಾಧಾನ ತಂದುಕೊಂಡರೂ ಮನಸ್ಸಿನ ಎಲ್ಲೋ ಒಂದು ಮೂಲೆಯಲ್ಲಿ ಛೇ ಆಗಾಗ ಭೇಟಿ ಮಾಡಿ ಸಂಪರ್ಕ ಇಟ್ಟುಕೋಬೇಕಿತ್ತು-ಹಳೇ ಗೆಳೆಯರದ್ದು ಅಂತ ಅನಿಸಿಬಿಟ್ಟಿತು.

ಗಿರಿಯಪ್ಪನ ಅಡ್ರೆಸ್ಸು ಆದರೆ ಮನೆ ಫೋನ್ ನಂಬರೂ ಹುಡುಕಿ.ಅವರ ಮನೇಗೆ ಒಂದು ಸಲ ಹೋಗಿ ಅವರ ಮನೆಯವರಿಗೆ ಸಂತಾಪ ಸೂಚಿಸಿಬರೋಣ ಅಂತ ಗೆಳೆಯನಿಗೆ ಹೇಳಿದೆ.

ಗೆಳೆಯ ಕಷ್ಟಪಟ್ಟು ಆತನ ವಿಳಾಸ ಫೋನು ನಂಬರು ಹುಡುಕಿದ. ಆತನ ಮನೇಗೆ ಹೋಗುವ ಮೊದಲು ಅದು ಅವನದ್ದೇ ಸರಿ ವಿಳಾಸ ಅಂತ ಖಚಿತ ಮಾಡಿಕೊಳ್ಳಬೇಕಿತ್ತು ಅನ್ನುವುದು ಒಂದು ಸಂಗತಿಯಾದರೆ ಆತ ತೀರಿಕೊಂಡ ನಂತರ ಮನೆಯವರು ಊರುಗೀರಿಗೆ ಮನೆಬದಲಾಯಿಸಿಬಿಟ್ಟಿದ್ದರೆ ಅಂತಲೂ ಅನಿಸಿತು. ಯೋಚಿಸಿ ಯೋಚಿಸಿ ಮನೇಗೆ ಫೋನು ಮಾಡ್ತೋದು. ದುಃಖ ಆರಿದ್ದರೆ ಅವರ ಮನೇಗೂ ಹೋಗೋದು ಅಂತ ಒಂದು ರೀತಿಯ ಅಳುಕಿನಿಂದಲೇ ಒಂದು ಸಂಜೆ ಗೆಳೆಯ ನಾನೂ ಕೂತೆವು. ಮೊದಲೇ ಹುಡುಕಿ ಲಿಸ್ಟ್ ಮಾಡಿಕೊಂಡಿದ್ದ ಗಿರಿಯಪ್ಪನ ಮನೇಗೆ ಫೋನಾಯಿಸಿದೆವು.

ಆತನ ಸಾವಿನ ಸುದ್ದಿ ಹೇಳುತ್ತಾರೆ,ಹೇಗೆ ಪ್ರತಿಕ್ರಿಯಿಸಬೇಕು,ಸಾಂತ್ವನದ ಮಾತು ಹೇಗಿರಬೇಕು,ನಮ್ಮ ಪರಿಚಯ ಯಾವ ಸಮಯದಲ್ಲಿ ಮಾಡಿಕೋಬೇಕು....ಹೀಗೆ ಮನಸ್ಸಿನಲ್ಲಿಯೇ ಒಂದೂವರೆ ಗಂಟೆ ಅರಥ್ಮೆಟಿಕ್ಕೂ ಮಾಡಿಕೊಂಡಿದ್ದೆವು. ಆ ಕಡೆಯಿಂದ ಫೋನು ರಿಂಗುಟ್ಟಿದ ಶಬ್ದ ಕೇಳಿಸಿತು. ಒಂದೆರೆಡು ಕ್ಷಣದ ನಂತರ ಯಾರೋ ಫೋನು ತೆಗೆದರು.ಆ ಕಡೆಯಿಂದ ಒಂದು ದನಿ ಬಂತು.ಯಾರೂ ?

ಸಾರ್ ಗಿರಿಯಪ್ಪನವರ ಮನೇನಾ ಇದು ?

ಹೌದು ಇವರೇ ನೀವು ಯಾರು ?

ಸಾರ್ ನೀವು ಯಾರು ?

ನೀವು ಯಾರು ಹೇಳ್ರೀ ಮೊದಲು..... !

ಸಾರ್ ನಾವು ಗಿರಿಯಪ್ಪನವರ ಫ್ರೆಂಡ್ಸೂ.... ಗಿರಿಯಪ್ಪನವರು....ತೀರಿಕೊಂಡ ಸುದ್ದಿ ಕೇಳಿದೆವು ಸಾರಿ ಹೇಳುಕ್ಕೆ ಫೋನು ಮಾಡಿದೆವು ಅಂತ ಹೇಳುವುದಕ್ಕೆ ನಮ್ಮ ರಿಹರ್ಸಲ್ ನಡೆದಿತ್ತು. ಆದರೆ ಗಿರಿಯಪ್ಪನವರು ಅಂತ ಹೇಳಿ ಮಾತು ತಡೆದೆವು.

ನಾನೇ ಗಿರಿಯಪ್ಪ ಮಾತಾಡ್ತಾ ಇದೀನ್ರೀ ನೀವು ಯಾರೂ ಗೊತ್ತಾಗಲಿಲ್ಲ....

ಈ ರೀತಿಯ ಪ್ರಸಂಗ ಯಾರ ಜೀವನದಲ್ಲಿ ಬರುತ್ತೋ ತಿಳೀದು,ಆದರೆ ನಮಗಂತೂ ಎಂತಾ ಸಂತೋಷ ಕೊಟ್ಟಿತು ಅಂದರೆ ಫೋನಿನಲ್ಲಿಯೇ ಒಂದೂವರೆ ಗಂಟೆ ಅವತ್ತು ಮಾತನಾಡಿದೆವು. ಐವತ್ತು ದಾಟಿದೀವಿ ಮುಂದೆ ನಾವು ಹೇಗಿರ್ತೀವೋ ತಿಳೀದು ಅನ್ನಿಸಿತು. ಕಾಲೇಜು ಸಮಯದಲ್ಲಿ ತೆಗೆಸಿದ್ದ ಫೋಟೋ ಇಟ್ಟುಕೊಂಡು ಒಬ್ಬೊಬ್ಬರನ್ನೇ ಗುರುತು ಹಿಡಿಯಲು ಪ್ರಯತ್ನ ಪಟ್ಟೆವು. ಎಷ್ಟು ಜನ ಆಗಿನ ಗೆಳೆಯರು ಈಗ ನಮಗೆ ಸಿಕ್ಕಬಹುದು ಅಂತ ತಲಾಷೂ ಮಾಡಿದೆವು.

ಸಿಕ್ಕ ಗೆಳೆಯರನ್ನೆಲ್ಲಾ ಸೇರಿಸಿ ಒಟ್ಟಿಗೆ ಒಂದೆಡೆ ಸೇರಿ ಊಟ ಮಾಡಿ ನಮ್ಮ ನಮ್ಮ ಬದುಕು ಹರಿದು ಬಂದ ದಾರಿಯನ್ನ ಪರಸ್ಪರ ಹಂಚಿಕೊಂಡೆವು...ಮೂವತ್ತು ವರ್ಷದ ಹಿಂದಿನ ಆ ಸ್ನೇಹ ಮತ್ತು ಆ ದಿನಗಳು ಒಮ್ಮೆಗೇ ಹಿಂದಕ್ಕೆ ಬಂದುಬಿಟ್ಟಿತ್ತು...!

ಟೈಂ ಮೆಷೀನ್ ಅಂತ ಒಂದು ಕಲ್ಪನೆ ಇದೆಯಂತೆ. ಚಕ್ರವನ್ನು ಹಿಂದಕ್ಕೆ ತಿರುಗಿಸಿದ ಹಾಗೆ ಈ ಸಮಯವನ್ನೂ ಹಿಂದಕ್ಕೆ ತಿರುಗಿಸಿ ಹಲವಾರು ವರ್ಷ ಹಿಂದಕ್ಕೆ ಹೋಗೋ ತರಹ ಇದ್ದರೆ ಅದು ಎಷ್ಟು ಚೆನ್ನ ಅಲ್ಲವೇ ? ನಾವು ಟೈಂ ಮೆಷೀನನ್ನ ಹಿಂದಕ್ಕೆ ತಿರುಗಿಸಿದ್ದೆವು !

ಕಾಫಿ ಹೌಸ್

(ಇದೊಂದು ಹೊಸ ಅಂಕಣ, ದಿನನಿತ್ಯದ ಸ್ವಾರಸ್ಯಕರ ಆಗುಹೋಗುಗಳನ್ನು ಯಾವುದಾದರೂ ದರ್ಶಿನಿಯಲ್ಲಿ ನಿಂತು ಕಾಫಿ ಸಿಪ್ ಮಾಡುವಂತೆ ಈ ತುಣುಕುಗಳನ್ನು ಸವಿಯಬಹುದು. ನಿಮ್ಮೊಂದಿಗೆ ಹಂಚಿಕೊಂಡಿರುವ ಅನುಭವ/ಅನಿಸಿಕೆಗಳನ್ನು ಓದಿದ ಮೇಲೆ ನೀವು ಅಂತಹದೇ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಇಷ್ಟಪಟ್ಟರೆ ಇಗೋ ನಿಮಗೆ ಮುಕ್ತ ಆಹ್ವಾನ.)

ಮೊನ್ನೆ ಹುಬ್ಬಳ್ಳಿಗೆ ಹೋಗಬೇಕಾಯಿತು. ಜೊತೆಯಲ್ಲಿ ಸುಬ್ರಹ್ಮಣ್ಯಂ ಇದ್ದರು. ಐಐಎಸ್‌ಸಿ ಯಲ್ಲಿ ಪ್ರೊಫೆಸರ್ ಆಗಿದ್ದ ಇವರು ಹಿಂದೊಮ್ಮೆ ಆಕ್ಸ್‌ಫರ್ಡ್‌ನಲ್ಲಿ ನೊಬೆಲ್ ವಿಜ್ಞಾನಿ ಅಬ್ದುಸ್ ಸಲಾಂ ಅವರೊಂದಿಗೆ ರಿಸರ್ಚ್ ಸಹಾಯಕರಾಗಿ ಕೆಲಸ ಮಾಡಿದ್ದರಂತೆ. ಅಬ್ದುಸ್ ಸಲಾಂಗೆ ನೊಬೆಲ್ ಪ್ರಶಸ್ತಿ ಬಂದದ್ದು ಅವರ ಯೂನಿಫೈಡ್ ಫೀಲ್ಡ್ ಥಿಯರಿ ಎಂಬ ಸಂಶೋಧನೆಗಾಗಿ. ''ಹಾಗಂದರೇನು?'' ಅಂತ ನಾನು ಪ್ರೊಫೆಸರನ್ನ ಕೇಳಿದೆ. ಭೌತ ಜಗತ್ತಿನಲ್ಲಿ ನಾಲ್ಕು ಬಗೆಯ ಶಕ್ತಿಗಳಿರುತ್ತವಂತೆ. ಗುರುತ್ವಾಕರ್ಷಣ ಶಕ್ತಿ, ವಿದ್ಯುದಯಸ್ಕಾಂತೀಯ ಶಕ್ತಿ, ವಿದ್ಯುತ್ ಕ್ಷೀಣ ಶಕ್ತಿ ಹಾಗೂ ಅಣುಗಳ ನಡುವಣ ಬಲಿಷ್ಠ ಶಕ್ತಿ. ಈ ಎಲ್ಲ ಶಕ್ತಿಗಳೂ ಒಂದೇ ಶಕ್ತಿಯ ವಿವಿಧ ರೂಪಗಳು ಎಂದು ಸಲಾಂ ಪ್ರತಿಪಾದಿಸಿದರಂತೆ. ಇರಲಿ, ಸುಬ್ರಮಣ್ಯಂ ಆಕ್ಸ್‌ಫರ್ಡ್‌ನಲ್ಲಿದ್ದಾಗ ಒಮ್ಮೆ ಸಲಾಂ ಅವರನ್ನು ತಮ್ಮ ಮನೆಗೆ ಊಟಕ್ಕೆ ಆಹ್ವಾನಿಸಿದರಂತೆ. ಆತಿಥ್ಯದ ನಡುವೆ ಸುಬ್ರಮಣ್ಯಂ ಸಲಾಂರವನ್ನು ಕುರಿತು ''ಸಾರ್, ನಿಮ್ಮ ಯೂನಿಫೈಡ್ ಫೀಲ್ಡ್ ಥಿಯರಿ ಕಬ್ಬಿಣದ ಕಡಲೆ. ಅದನ್ನ ಸುಲಭವಾಗಿ ತಿಳಿಯೋ ಹಾಗೆ ಹೇಳ್ತೀರಾ?'' ಅಂತ ಕೇಳಿದರಂತೆ. ಅದಕ್ಕೆ ಸಲಾಂ ನೀಡಿದ ಉತ್ತರ ಹೀಗಿತ್ತು. ''ಸುಬ್ಬು, ನೀನೊಬ್ಬ ಹಿಂದೂ ಅಲ್ಲವೇ. ನಿನಗೆ ಈ ಕಾನ್ಸೆಪ್ಟ್ ಕಷ್ಟಾನೇ ಆಗಬಾರದು. ನಿಮ್ಮ ನಂಬಿಕೆ ಪ್ರಕಾರ, ಈ ಇಡೀ ವಿಶ್ವದ ಸೃಷ್ಟಿಕರ್ತ ಚತುರ್ಮುಖ ಬ್ರಹ್ಮ. ಮುಖಗಳು ನಾಲ್ಕು ಆದರೂ ಕರ್ತ ಒಬ್ಬನೇ ಅಲ್ಲವೇ. ನಾನು ನನ್ನ ಥಿಯರಿಯಲ್ಲಿ ಅದನ್ನೇ ಹೇಳ್ತಿರೋದು. ಒಂದೇ ಆದಿ ಶಕ್ತಿ ತನ್ನ ನಾಲ್ಕು ಮುಖಗಳ ಮೂಲಕ ಜಗತ್ತನ್ನು ಚಾಲನೆಗೊಳಿಸುತ್ತೆ ಅಂತ.''

''ಈ ಭೇಟಿಯ ನಂತರ ನಿಮಗೇನೆನ್ನಿಸಿತು?'' ನಾನು ಸುಬ್ರಮಣ್ಯಂ ಅವರನ್ನ ಕೇಳಿದೆ. ''ನೀವು ಏನೇ ಹೇಳೀ ಪಾಕೀಸ್ತಾನಿಗಳ ತರಹ ಯಾರಿಗೂ ಬಿರಿಯಾನಿ ಮಾಡುಕ್ಕೆ ಬರಲ್ಲ, ನಿಜಕ್ಕೂ ಅಂದಿನ ಊಟ ಔಟ್ ಆಫ್ ದಿಸ್ ವರ್ಲ್ಡ್'' ಅಂದರು ನಮ್ಮ ಪ್ರೊಫೆಸರ್.

- ಶಿವು

★★★

ನಮ್ಮ ಕಲೀಗು ಒಬ್ಬ ಆನಂದ ಅಂತ. ಚಿಕ್ಕವಯಸ್ಸಿನಲ್ಲಿಯೇ ಒಂದು ರೀತಿ ಸನ್ಯಾಸಿಯ ತರಹ ಆಗಿಬಿಟ್ಟಿದ್ದ-ಅವನ ಯೋಚನಾ ಧಾಟಿಯಿಂದ. ನೆಗೆಟೀವ್ ಮಾತುಗಳು,ಜೀವನ ನಶ್ವರ ಅಂಬುವ ಯೋಚನಾರೀತಿ ನಮ್ಮನ್ನ ಅವನಿಂದ ಸುಮಾರು ದೂರವೇ ಇಟ್ಟಿತ್ತು. ಅದು ಹೇಗ್ರೀ ಟಾಲರೇಟ್ ಮಾಡ್ತೀರೀ ಅವನನ್ನ ? ಅಂತ ಅವನ ಆಪ್ತ ಗೆಳೆಯರನ್ನೂ ಕೇಳುತ್ತಿದ್ದೆ- ಒಮ್ಮೊಮ್ಮೆ. ಒಂದು ಸಲ ಹೀಗಾಯಿತು. ಫ್ಯಾಕ್ಟರಿ ಕ್ಯಾಂಟೀನ್ ಊಟ ಸರಿಯಿರುಲ್ಲ ಅಂತ ಮನೆಯಿಂದ ಆನಂದ ಕ್ಯಾರಿಯರು ತರಿಸುತ್ತಿದ್ದ, ಕ್ಯಾರಿಯರು ತರುವವನಿಗೆ ತಿಂಗಳಿಗೆ ಎಂಟು ರೂಪಾಯಿ ಸಂಬಳ ಅಂತ ನಿಶ್ಕರ್ಷೆಯಾಗಿತ್ತು. ಎರಡನೇ ತಾರೀಖು ಕ್ಯಾರಿಯರ್

ತರುವವನು ಸಂಬಳಕ್ಕೆ ಅಂತ ಬಂದ. ಆನಂದ ಪರ್ಸ್ ತೆಗೆದ.ನೋಡೋ ಈ ತಿಂಗಳು ಇಪ್ಪತ್ತಾಲ್ಕು ದಿವಸ-ಆರು ದಿವಸ ರಜಾ ಇತ್ತು ಅದು ಹೋಗ್ಲೀ ಆರು ದಿವಸ ನೀನು ಕ್ಯಾರಿಯರು ತಂದಿಲ್ಲ. ಆರುದಿವಸದ ಸಂಬಳ-ಎರಡು ರೂಪಾಯಿ ಕಟ್ ಮಾಡಿದೀನಿ; ಆರು ರೂಪಾಯಿ ಇಗೋ.. ಕ್ಯಾರಿಯರ್ ನವನು ಮುಖ ಹುಳ್ಳಗೆ ಮಾಡಿಕೊಂಡು ಆರು ರೂಪಾಯಿ ತಗೊಂಡ. ಆರು ದಿನ ಯಾಕೆ ಬರಲಿಲ್ಲ ? ಆನಂದನ ಪ್ರಶ್ನೆ. ಮನೇಲಿ ಎಂಗಸರಿಗೆ ಟೈಪಾಯ್ಡು ಬುದ್ಧೀ ನೊಡ್ಕೊಳ್ಳೋರಿಲ್ಲ ಮನೇಲಿ...ಇದು ಉತ್ತರ. ಅಯ್ಯೋ ಹೌದೇನೋ ಪಾಪ ಔಷಧೀಗೆ ಏನು ಮಾಡ್ತಿದೀಯೋ ? ಅಂತ ವಿಚಾರಿಸುತ್ತಾ ಆನಂದ ಪರ್ಸು ತೆಗೆದ. ಬಂದಿದ್ದ ಮುನ್ನೂರು ರೂಪಾಯಿ ಸಂಬಳದಲ್ಲಿ ನೂರರ ಒಂದು ನೋಟು ತೆಗೆದು ಕ್ಯಾರಿಯರ್ ನವನ ಕೈಗಿತ್ತ !

- ಎಚ್.ಗೋಪಾಲಕೃಷ್ಣ

★★★

ಇದು ಚುನಾವಣಾ ಸಮಯ. ನೀವು ಒಲ್ಲದ ಮನಸ್ಸಿನಿಂದ ನಿಮ್ಮ ಅಮೂಲ್ಯವಾದ ಮತವನ್ನು ಚಲಾಯಿಸಿರಬಹುದು ಈಗಾಗಲೇ. ಅಥವಾ ಬೆರಳಿನ ಮೇಲೆ ಅಳಿಸಲಾಗದ ಶಾಯಿ ಹಾಕಿಸಿಕೊಳ್ಳಲು ತಯಾರಿ ಮಾಡಿಕೊಳ್ಳುತ್ತಿರಬಹುದು. ಇರಲಿ. ಈಗ ಆಶ್ವಾಸನೆಗಳತ್ತ ಗಮನ ಹರಿಸೋಣ. ಒಂದು ಪಕ್ಷ ಕಲರ್ ಟೀವಿ ಕೊಡಲು ಮುಂದೆ ಬಂದಿದೆ. ಇನ್ನೊಂದು ಪಕ್ಷ ವಿದ್ಯುತ್ ನೀಡಲು ಮುಂದೆ ಬಂದಿದೆ. ಟೀವಿ ಇದೆ, ಪವರ್ ಇದೆ. ಆದರೆ ಕೇಬಲ್ ಕನೆಕ್ಷನ್? ಈ ಬಗ್ಗೆ ಯಾರೂ ವಾಗ್ದಾನ ಮಾಡಿದಂತಿಲ್ಲ. ಹೀಗಾಗಿ ಇದು ತ್ರಿಕೋಣದಲ್ಲಿ ಎರಡೇ ಬಾಹುಗಳಿದ್ದ ಹಾಗೆ ಆಯಿತು. ಆದುದರಿಂದ ಕಣದಲ್ಲಿ ಉಳಿದಿರುವ ಮೂರನೇ ಪಕ್ಷ ಕೇಬಲ್ ಕನೆಕ್ಷನ್ ಕೊಡುವ ಬಗ್ಗೆ ಆಶ್ವಾಸನೆ ನೀಡಿದರೆ ಆಗ ಈ ಮೂರೂ ಪಕ್ಷಗಳ ಸಮ್ಮಿಶ್ರ ಸರ್ಕಾರವನ್ನು ಅಧಿಕಾರದಲ್ಲಿ ಕೂರಿಸಿ, ಅವರು ಬೇಕಾದ ಹಾಗೆ ಕಚ್ಚಾಡುತ್ತಿರಲಿ, ಆಮ್ ಆದ್ಮಿ ಅಂದರೆ ನಾವು ಹಾಯಾಗಿ ಮನೆಯಲ್ಲಿ ಕಲರ್ ಟೀವಿ ನೋಡುತ್ತಾ ಕುಳಿತಿರಬಹುದು. ಏನಂತೀರಿ?

- ಆನಂದ

★★★

ಬಾಸುಂಡೆಗೂ ಬಾಸುಂದಿಗೂ ವ್ಯತ್ಯಾಸ ನನಗೆ ಗೊತ್ತಾಗಿದ್ದು ಬಹಳ ಚಿಕ್ಕಂದಿನಲ್ಲಿಯಾದರೂ ಅದನ್ನೂ ಪನ್ ಮಾಡಬಹುದು ಅಂತ ತೋರಿಸಿಕೊಟ್ಟೋರು ನನ್ನ ಪ್ರೈಮರಿ ಶಾಲೆಯ ಮೇಷ್ಟ್ರು ಕೃಷ್ಣಮೂರ್ತಿಗಳು.

ಅವಾಗೆಲ್ಲಾ ಪ್ರೈಮರಿ ಶಾಲೆಯಲ್ಲಿ ಮಣೆಮೇಲೆ ಕೂರಿಸುತ್ತಿದ್ದರು. ನಾವು ಚಡ್ಡಿ ಹಾಕಿಕೊಂಡು ಶಾಲೆಗೆ ಹೋಗುತ್ತಿದ್ದೆವು. ಸ್ಲೇಟಿನಲ್ಲಿ ಪಾಠ ಬರೆದುಕೊಂಡು ಹೋಗಬೇಕಾಗಿತ್ತು. ಇಲ್ಲದಿದ್ದರೆ ಮೇಷ್ಟ್ರು ನನ್ನ ಹತ್ತಿರ ಕೂತು ಯಾಕೆ ಬರ್‍ಕೊಂಡು ಬರಲಿಲ್ಲ ಅಂತ ತೊಡೆ ಚಿವುಟುತ್ತಿದ್ದರು. ಆಗ ಭಯಂಕರ ನೋವಾಗುತ್ತಿತ್ತು. ಅಳಬಾರದು. ಅತ್ತರೆ ಮತ್ತೆ ಚಿವುಟುತ್ತಿದ್ದರು. ನಾನು ಬೆಂಗಳೂರಿಗೆ ಬಂದು ಕೆಲಸಕ್ಕೆ ಸೇರಿದ ಮೇಲೆ ನಾನು ಬೇಲೂರಿಗೆ ಹೋಗುವುದನ್ನೇ ಅವರು ಕಾಯುತ್ತಿದ್ದರು. ಮನೆಗೆ ಬಂದು ಮಾತಾಡಿಸುತ್ತಿದ್ದರು. ನನ್ನನ್ನೂ ಅವರ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ಆಗ ನನಗೆ ಬಾಸುಂದಿ ಕೊಡುತ್ತಿದ್ದರು. ಆಗ ನಾನು ಸಾರ್ ನಾನು ಚಿಕ್ಕಂದಿನಲ್ಲಿ ಶಾಲೆಗೆ ಬರುತ್ತಿದ್ದಾಗ ನೀವು ಬಾಸುಂಡೆ ಬರುವ ಹಾಗೆ ಚಿವುಟುತ್ತಿದ್ದಿರಿ ಈಗ ಬಾಯಲ್ಲಿ ನೀರೂರುವ ಹಾಗೆ ಬಾಸುಂದಿ ಕೊಡುತ್ತಿದ್ದೀರಿ ಅಂತ ಹೇಳುತ್ತಿದ್ದೆ. ಅವರು

ಇರುವ ತನಕ ನನಗೆ ಊರಿಗೆ ಹೋದಾಗಲೆಲ್ಲಾ ಬಾಸುಂದಿ ಸಿಗುತ್ತಿತ್ತು. ಈಗಲೂ ಎಲ್ಲಿ ಬಾಸುಂದಿ ಕಂಡರೂ ನನಗೆ ನನ್ನ ಪ್ರೈಮರಿ ಶಾಲೆಯ ಮೇಷ್ಟ್ರು ನೆನಪಾಗುತ್ತಾರೆ.

- ಬೇಲೂರು ರಾಮಮೂರ್ತಿ

★★★

ನಮ್ಮ ತಂದೆ ಮಿತ್ರರೊಬ್ಬರು ಪ್ರತಿ ವರ್ಷ ನೂರಾರು ಪಂಚಾಂಗಗಳನ್ನು ಕೊಂಡು ಎಲ್ಲ ಮಿತ್ರರಿಗೆ, ಶಾಸ್ತ್ರಿಗಳಿಗೆ, ಪಂಡಿತರಿಗೆ ಉಚಿತವಾಗಿ ಹಂಚುತ್ತಿದ್ದರು. ಅದೊಂದು ಪವಿತ್ರ ಸೇವೆ ಆಗಿತ್ತು. ನಮ್ಮ ತಂದೆಯಂತೂ ಅವರ ಪಂಚಾಂಗಕ್ಕೇ ಕಾಯುತ್ತಿದ್ದರು. ಹಬ್ಬದ ದಿನವಾದರೂ ಸರಿ ಅವರು ಬಂದೇ ಬರುತ್ತಾರೆ ಪಂಚಾಂಗ ತಂದುಕೊಡುತ್ತಾರೆ ಅನ್ನುವ ನಂಬಿಕೆ ನಮ್ಮ ತಂದೆಯವರದು. ಒಂದು ವರ್ಷ ಹಬ್ಬದ ಹಿಂದಿನ ದಿನವಾದರೂ ಅವರು ಬರಲೇ ಇಲ್ಲ. ಅವರು ಹೇಗೂ ಬರುತ್ತಾರೆ ಪಂಚಾಂಗ ತಂದು ಕೊಡುತ್ತಾರೆ ಅಂದು ನಮ್ಮ ತಂದೆ ಪಂಚಾಂಗ ತಂದಿರಲಿಲ್ಲ. ನಾವು ಮಕ್ಕಳು, ನೋಡಿ ನಾವು ಪಂಚಾಂಗ ತರ್ತಿವಿ ಅಂದರೆ ನೀವು ಬಿಡಲಿಲ್ಲ ಅಂದೆವು. ಹಬ್ಬದ ಹಿಂದಿನ ರಾತ್ರಿ 2 ಗಂಟೆಗೆ ಬಾಗಿಲು ಸದ್ದಾದಾಗ ಎಲ್ಲರಿಗೂ ಗಾಭರಿ. ಹೆದರಿಕೆಯಲ್ಲಿಯೇ ಬಾಗಿಲು ತೆಗೆದಾಗ ಅವರು ಪಂಚಾಂಗ ಹಿಡಿದು ನಿಂತಿದ್ದರು. ಹೇಗೂ ಮನೆ ಹತ್ತಿರ ಇದೆಯಲ್ಲ ನಿಧಾನವಾಗಿ ಕೊಡೋಣ ಅಂತಿದ್ದೆ. ಊರಿಗೆ ಹೋಗಿದ್ದೆ ಬಸ್ ಕೆಟ್ಟು ಹೋಗಿ ಎತ್ತಿನ ಗಾಡಿಲಿ ಬಂದೆ ಅದಕ್ಕೆ ತಡವಾಯ್ತು ಅಂದರು. ನಮ್ಮ ತಂದೆ ತೀರಿಕೊಂಡಾಗ ಅವರು ತುಳಸಿಹಾರ ತಂದು ಹಾಕಿದರು ನಾನು ಅವರೇನು ಸ್ವಾಮಿಗಳಲ್ಲ ಅವರಿಗೆ ತುಳಸಿಹಾರ ಯಾಕೆ ಅಂದಿದ್ದಕ್ಕೆ ಅವರು ಏನೆಂದರು ಅಂದರೆ, ನಿಮ್ಮ ತಂದೆ ದೇವರಂಥ ಮನುಷ್ಯರು, ದೇವರಿಗೆ ತಾನೇ ತುಳಸೀ ಹಾರ ಹಾಕೋದು ಅಂತ.

- ಪ್ರೊ. ಜಿ. ಅಶ್ವಥನಾರಾಯಣ

★★★

ಸುಮಾರು 28 ವರ್ಷಗಳ ಹಿಂದಿನ್ಮಾತು. ಡಿಪ್ಲೊಮಾ ಫೈನಲ್ ಇಯರ್ ಓದ್ತಾಯಿದ್ದಮ್ಮನ್ನ ಒಂದು ಎಜುಕೇಷನ್ ಟೂರ್ಗೇಂತ ಡೆಲ್ಲೀಗ್ಕರ್ಕೊಂಡ್ಹೋಗಿದ್ರು. ಇಲ್ಲಿ ಸೂಟ್ಕೇಸುಗ್ಳು ಚೀಪಾಗಿರತ್ತಂತೆ, ತೊಗೊಳ್ಳೋಣಾಂದ ನನ್ನ್ಹೇಹಿತ. ಸರೀಂತ ಚಾಂದ್ನೀಚೌಕಕ್ಹೋದ್ವಿ. ಚೌಕಾಸಿ ಮಾಡ್ದೇಯಿದ್ರೆ ಚೆಂಬೇ ಕೈಗೆ ಅನ್ನೋ ಕಿವಿಮಾತೂ ಆ ಗೆಳೆಯ ಬೆಂಗ್ಳೂರಿಂದ್ಲೇ ಪಡ್ಕೊಂಡ್ಬಂದಿದ್ದಾದ್ರಿಂದ ಅಂಗ್ಡಿಯವ್ನ ತೋರ್ಸಿದ್ ಮಾಲು ಒಪ್ಗೇ ಅದ್ಮೇಲೆ ಬಾರ್ಗೇಯ್ನ್ ಮಾಡೋಂದ. ಆ ನೂರ್ರುಪಾಯ್ಮಾಲ್ನ ದಸ್ ರುಪ್ಯಾಕೋ ದೇತಾ ಕ್ಯಾ? ಎಂದು ಕೇಳಿದೆ. ಅರೇ ಸಾಬ್, ಏ ಮಾಲ್ ದೇಖೋ, ಬಹುತ್ ಅಚ್ಚಾ ಮಾಲ್ ಹೈ ಎಂದ ಆ ಸೇಲ್ಸ್‌ಮನ್ನು ಆ ಸೂಟ್ಕೇಸ್ ಮೇಲೆ ಕುಣಿದು, ಕುಪ್ಪಳ್ಸಿ ಅದರ ಘಟ್ಟಿತನಾನ ಸಾಬೀತ್ಪಡಿಸ್ದ. ಫಿರ್ ಭೀ, ಬೀಸ್ ಕೇ ಊಪರ್ ನಹೀ ಹೋನಾ ಎಂದೆ. ಕಡೆಗೂ ನೂರರ ಮಾಲು ಮೂವತ್ತಕ್ಕೆ ಕೈಗ್ಬಂತು. ಆ ಮಜ್ಬೂತಾಗಿ, ನೋಡಕ್ಕೂ ಚೆನ್ನಾಗಿರೋ ಸೂಟ್ಕೇಸ್‌ನಲ್ಲೇ ಗೆಳೆಯ ಖುಷಿಯಿಂದ ತನ್ನಾಮಾನೆಲ್ಲಾ ಗಿಡ್ಕಾಯಿಸ್ದ.

ಮಾರ್ನೇದಿನ ಡೆಲ್ಲಿಯಿಂದ ಆಗ್ರಾಗೆ ಬಸ್ಸಲ್ ಹೋದ್ವಿ. ಬಸ್ನ ಟಾಪ್ಮೇಲ್ ಹಾಕಿದ್ವೆಟ್ಗೆ ಹೋಲ್ಡಾಲು, ಸೂಟ್ಕೇಸು ಎಲ್ಲಾ ಒಂದೊಂದಾಗಿ ಇಳಿಸ್ಕೊಂಡ್ವಿ. ಆದ್ರೆ ನನ್ಗೆಳೆಯನ್ಸೂಟ್ಕೇಸೇ ಪತ್ತೆ ಇಲ್ಲ! ಮೇಲ್ಹತ್ನೋಡಿದ್ರೆ ನನ್ನೊಂದ್ ಕಬ್ಬಿಣದ್ಪೆಟ್ಗೆ ಕೆಳ್ಗೆ ಲಾರೀಚಕ್ರಕ್ ಸಿಕ್ಕಿದ್ ನಾಯಿ ಹಾಗೆ, ಒಳಗಿಂದೆಲ್ಲಾ ಕಾರ್ಕೊಂಡು, ತನ್ನ ಹೊರಮೈಯೆಲ್ಲಾ ಚಪ್ಪಾಚೂರಾಗಿಸ್ಕೊಂಡು ಅನಾಥಶವದ್ರೀತಿ ಬಿದ್ದಿತ್ತು ಮಜ್ಬೂತಾದ್ ಸೂಟ್ಕೇಸು!

- ಎನ್. ರಾಮನಾಥ್

ನಾನೂ ನಿವೃತ್ತನಾದೆ....

- ಕೆ.ಜಿ. ಭದ್ರಣ್ಣವರ

'ಕಛೇರಿಯಲ್ಲಿ ಸಲ್ಲದವನು ಬೇರೆಲ್ಲಿಯೂ ಸಲ್ಲನಯ್ಯಾ!' ಇದು ನನ್ನ ಸ್ವಾನುಭವದ ಮಾತು. ಹುಟ್ಟಿದವನಿಗೆ ಆಯುಷ್ಯ ಗಟ್ಟಿಯಾಗಿದ್ದರೆ, ನಿವೃತ್ತಿ ಖಚಿತವಾಗಿ ಬಂದೇ ಬರುತ್ತದೆ. ನನಗೂ ಬಂತು ಆ ದಿನ ನಿವೃತ್ತಿ. ಸೇವೆಯ ಕೊನೆಯ ದಿವಸವದು. ಸಂಜೆಯಾಗುತ್ತಿದ್ದಂತೆ, ದಿಢೀರನೆ ಹೂಡುವ ಬಡವನ ಮದುವೆಯ ಹಾಗೆ, ನನಗೆ ಬೀಳ್ಕೊಡುವ ಸಮಾರಂಭವನ್ನು ಏರ್ಪಡಿಸಿದರು. ಇದ್ದ ಕುರ್ಚಿ, ಮೇಜುಗಳನ್ನು ಒಂದೆಡೆ ಸರಿಸಿ, ಹತ್ತಿಪ್ಪತ್ತು ಕುರ್ಚಿಗಳನ್ನು ಜೋಡಿಸಿ ಕೂಡಲು ವ್ಯವಸ್ಥೆ ಮಾಡಿದರು. ಎಲ್ಲರಿಗಿಂತ ರಾಜೇಂದ್ರ ಹೆಚ್ಚು ಲವ ಲವಿಕೆಯಿಂದ ಓಡಾಡುತ್ತಿದ್ದ. ಇದಕ್ಕೆ ಕಾರಣವಿತ್ತು. ಯಾಕೆಂದರೆ ನಾಳೆಯಿಂದ ನಾನು ಕಚೇರಿಗೆ ಕಾಲಿಡುವುದಿಲ್ಲ. ಪೀಡೆ ಪರ್ಮನೆಂಟಾಗಿ ತೊಲಗಿತೆಂಬ ಸಂತೃಪ್ತಿ ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು. ಗಂಡ-ಹೆಂಡತಿಯ ಹಾಗೆ ಆಗಾಗ ನಮ್ಮಿಬ್ಬರಲ್ಲಿ ಜಗಳವಾಗುತ್ತಿತ್ತು. ಇದರಿಂದಾಗಿ ಕೆಲವು ದಿನಗಳವರೆಗೆ ಮಾತು ನಿಂತು ಬಿಡುತ್ತಿದ್ದವು. ನನ್ನನ್ನು ಕಂಡರಾಗದ ಇನ್ನೂ ಕೆಲವರಿಗೆ ಖುಷಿಯಾಗಿತ್ತು. 'ಗುಡ್ ಫಾರ್ ನಥಿಂಗ್', ಎಂದು ಕೆಲವರು, ಕಾನ್ಫಿಡೆನ್ಷಿಯಲ್ಲಾಗಿ, ನನ್ನ ಕಿವಿಗೆ ಕೇಳದ ಹಾಗೆ ಮಾತಾಡುವುದೂ ನನಗೆ ತಿಳಿಯದ ಮಾತಾಗಿರಲಿಲ್ಲ. ಕಣ್ಣಮುಂದೆ ವಂದಿಸುವವರಲ್ಲಿ ಅನೇಕರು ಬೆನ್ನ ಹಿಂದೆ ನಿಂದಿಸುತ್ತಿದ್ದರು. ಇದು ಸಹಜ. ಎಲ್ಲರಿಗೂ ಬೇಕಾದವನು ಎಲ್ಲಿಯೂ ಇಲ್ಲ. ತಮ್ಮ ಬೇಡಿಕೆಯನ್ನು ಈಡೇರಿಸದ ಭಗವಂತನನ್ನೂ ಬಯ್ಯುವವರಿದ್ದಾರೆ. ಅಂದ ಬಳಿಕ ಹುಲ್ಲು ಮಾನವನಾದ ನಾನು ಇದಕ್ಕೆ ಹೇಗೆ ಹೊರತಾದೇನು?. ತನ್ನ ಚೇಂಬರಿಗೆ ಕರೆಯಿಸಿ, ಎಲ್ಲರೆದುರಿಗೆ ಮಾನ ಹೋಗುವಂತೆ ಬಯ್ಯುತ್ತಿದ್ದ ಬಾಸ್, ಅಂದಿನ ಸಮಾರಂಭದಲ್ಲಿ ನನ್ನನ್ನು''......ಶ್ರೀಯುತರು ಬಹಳ ಪ್ರಾಮಾಣಿಕ ವ್ಯಕ್ತಿ, ಪರಿಶ್ರಮದಿಂದ ಕೆಲಸ ಮಾಡುವವ, ಹಬ್ಬ-ಹರಿದಿನ ರಜೆ ಲೆಕ್ಕಿಸದೇ, ಕಚೇರಿಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದ ಶಿಸ್ತಿನ ಸಿಪಾಯಿಯನ್ನು ಕಳೆದುಕೊಂಡು ನಮ್ಮ ಕಚೇರಿ ಬಡವಾಗುತ್ತಿದೆ. ಸೇವಾವಧಿಯಲ್ಲಂತೂ ನೆಮ್ಮದಿಯಿಂದ ಇರಲಾಗಲಿಲ್ಲ. ಭಗವಂತನು ಶ್ರೀಯುತರಿಗೆ ನಿವೃತ್ತಿಯ ಜೀವನದಲ್ಲಿಯಾದರೂ ನೆಮ್ಮದಿ, ಸುಖ, ಸಂತೋಷಗಳನ್ನಿತ್ತು ಕಾಪಾಡಲಿ'' ಎಂದು ಹಾರೈಸಿದರು. ನಿತ್ಯ ಕಿತ್ತಾಡುತ್ತಿದ್ದ ರಾಜೇಂದ್ರನೂ ಹೊಗಳಿ, ಹೊನ್ನ ಶೂಲಕ್ಕೇರಿಸಿದನು. ಬಾಸ್ ನನಗೆ ಶಾಲುಹೊದಿಸಿ ಸತ್ಕಾರ ಪ್ರದರ್ಶಿಸಿದರು. ಸಿಬ್ಬಂದಿಯ ಪರವಾಗಿ, ಸನ್ಮಾನಿಸಲು ರಾಜೇಂದ್ರ ಹೂವಿನ ಹಾರ ಹಾಕಲು ಬಂದಾಗ, ನಾನು ಕೈಯಲ್ಲಿ ಹಾರ ಸ್ವೀಕರಿಸಿದೆ. ಅವನು ನನ್ನ ಕತ್ತನ್ನು ಬಲವಾಗಿ ಬಗ್ಗಿಸಿ, ಕೊರಳಿಗೆ ಬಲಾತ್ಕಾರದಿಂದ ಹಾರ ಹಾಕಿದನು. ಅವನದು ಬಂಢತನವೆನ್ನಿಸಿತು. ಗಮನಿಸಿದವರು ಮುಸಿ ಮುಸಿ ನಕ್ಕರು. ಇವರೆಲ್ಲ ಹೀಗೆ ಮಾಡುವುದನ್ನು ನೋಡಿ, ಇದು ನನಗೆ ಸಲ್ಲಿಸುತ್ತಿರುವ ಶ್ರದ್ಧಾಂಜಲಿ ಇರಬಹುದೇ ಅನಿಸಿತು. ಸಂಜೆ ನಾನು ಮನೆಗೆ, ಕುಂಡೆ ಸುಟ್ಟುಕೊಂಡ ಬೆಕ್ಕಿನ ಹಾಗೆ ಬಂದೆ. ನನ್ನ ಮೂಡ್ ಸರಿಯಿಲ್ಲವೆಂದು ಗುರ್ತಿಸಿದ ನನ್ನವಳು, ಕಂಡರೂ ಕಾಣದ

ಹಾಗೆ ಅಡಿಗೆ ಕೋಣೆ ಸೇರಿದಳು. ಚುನಾವಣೆಯಲ್ಲಿ ಸೋತು, ಠೇವಣಿ ಕಳೆದುಕೊಂಡ ರಾಜಕಾರಣಿಯ ಸ್ಥಿತಿ ನನ್ನದಾಗಿತ್ತು. ಬದುಕಿನ ಬಗ್ಗೆಯೇ ಆಳವಾಗಿ ಚಿಂತಿಸುತ್ತಾ ಕುಳಿತೆ. ರಾತ್ರಿ ಬಹಳ ಹೊತ್ತಿನ ನಂತರ ನಿದ್ದೆ ಹತ್ತಿರಬಹುದು. ಏನೋ ಹಳವಂಡ, ಕನವರಿಕೆ, ಕನಸು. ನಡುರಾತ್ರಿಯಲ್ಲಿ ದಿಗ್ಗನೇ ಎದ್ದು ಕುಳಿತದ್ದನ್ನು ಗಮನಿಸಿದ ನನ್ನವಳು, "ಕನಸಿನಲ್ಲಿ ದೆವ್ವ-ಗಿವ್ವ ಬಂದಿತ್ತೇನು?" ಎಂದು ಕೇಳಿದಾಗ, ನೀನೇ ಒಂದು ದೊಡ್ಡ ದೆವ್ವ ಇರುವಾಗ, ಬೇರೆ ದೆವ್ವ ಹೇಗೆ ಬರಲು ಸಾಧ್ಯ? ಎಂದು ಮನಸ್ಸಿನೊಳಗೇ ಅಂದುಕೊಳ್ಳುತ್ತಾ, "ಏನಿಲ್ಲ!" ಎಂದು, ಮೆಲ್ಲನೇ ಎದ್ದು ನೀರು ಕುಡಿದು ಮಲಗಿದೆ. ದಿವಸಗಳು ಕಳೆಯುತ್ತಿದ್ದಂತೆ, ನಾನು ಸವಕಲು ನಾಣ್ಯವಾದೆ. ಹರೆಯ ಕಳೆದುಕೊಂಡ ಸೂಳೆ, ಅಧಿಕಾರ ಕಳೆದುಕೊಂಡ ಗಂಡಸು ಇಬ್ಬರ ಸ್ಥಿತಿ ಒಂದೇ ಎಂದೆನಿಸಿತು. ನನ್ನ ಬಳಿ ಕುಳಿತು ಮಾತಾಡಲು ಯಾರಿಗೂ ಪುರುಸೊತ್ತಿಲ್ಲವೋ ಅಥವಾ ಮನಸ್ಸಿಲ್ಲವೋ ಗೊತ್ತಾಗುತ್ತಿಲ್ಲ! ಮೊಮ್ಮಕ್ಕಳು ಶಾಲೆ, ಟ್ಯೂಷನ್, ಹೋಮ್‌ವರ್ಕ್‌ಗಳಲ್ಲಿ ನಿರತರಾಗಿರುತ್ತಾರೆ. ನನ್ನವಳಿಗೆ ಧಾರಾವಾಹಿಗಳ ಹುಚ್ಚು, ಸೊಸೆಗೆ ತನ್ನದೇ ಆದ ಹವ್ಯಾಸಗಳು. ಮಗ ಕೆಲಸದಲ್ಲಿ, ಮನೆಯವರೆಲ್ಲ ಕೂಡಿ ಕುಳಿತಾಗ, ಯಾವುದೋ ಒಂದು ವಿಷಯಕ್ಕೆ ಎಲ್ಲರೂ ನಕ್ಕಾಗ, "ಏನದು?" ಎಂದು ಕೇಳಿದರೆ, "ಇದು ನಿನಗೆ ಸಂಬಂಧಿಸಿದ್ದಲ್ಲ ಬಿಡು" ಎಂದು, ನನ್ನನ್ನು ದೂರ ತಳ್ಳುತ್ತಾರೆ. ಅವರ ನಗುವಿನಲ್ಲೂ ನನಗೆ ಪಾಲಿಲ್ಲ!


ಮಗಳು-ಅಳಿಯ ತಮ್ಮ ಮಕ್ಕಳೊಂದಿಗೆ ಹಬ್ಬಕ್ಕೆ ಬಂದಾಗ, "ನಿಮ್ಮ ಮಲಗುವ ಕೋಣೆ ಅವರಿಗೆ ಬಿಟ್ಟುಕೊಡಿ. ನೀವು ಹಾಲ್‌ನಲ್ಲಿ ಮಲಗಿ" ಎಂದು ನನ್ನವಳು ಆದೇಶ ಮಾಡುತ್ತಾಳೆ. ಮಗಳು "ಅಪ್ಪಾ, ನಿಮ್ಮ ಮೊಮ್ಮಗನನ್ನು ಕರಕೊಂಡು ಹೋಗಿ ಕಟಿಂಗ್ ಮಾಡಿಸಿಕೊಂಡು ಬನ್ನಿ" ಎಂದು ಸಲೂನಿಗೆ ಅಟ್ಟುತ್ತಾಳೆ. ನಾಪಿತನ ಆದೇಶದನ್ವಯ ಮೊಮ್ಮಗನ ತಲೆಯನ್ನು ಅತ್ತಿತ್ತ ತಿರುಗಿಸುತ್ತಾ, ಅತ್ತರೆ ಸಮಾಧಾನ ಪಡಿಸುತ್ತಾ ಮನೆಗೆ ಕರೆ ತರಬೇಕು. "ಅತ್ತೇ! ಗ್ಯಾಸ್ ಖಾಲಿಯಾಯ್ತು. ಮಾವನವರನ್ನು ಕಳಿಸಿ." ಸೊಸೆಯ ಕಾಟ. ಹಾಲು, ತರಕಾರಿ, ದಿನಸಿ ಏನೇ ಅರ್ಜೆಂಟ್‌ಬೇಕಾದರೂ, ಈ ದಂಡ ಪಿಂಡ ಓಡಬೇಕು. "ಅಪ್ಪಾ! ನೀವು ಹ್ಯಾಗೂ ಖಾಲಿಯಿದ್ದೀರಲ್ಲಾ, ಕರೆಂಟು ಬಿಲ್ಲು, ಫೋನ್ ಬಿಲ್ಲು ತುಂಬಿ ಬನ್ನಿ." ಮಗನ ಆದೇಶ. ಈ ಕೆಲಸಗಳಲ್ಲದೇ ಮಾಡಲು ಬೇರಾವ ಕೆಲಸಗಳುಂಟು? ಮಾಡಲಾಗುವುದಿಲ್ಲವೆಂದು ಹೇಳಲು ಬೇರೆ ಚಾನ್ಸ್ ಇಲ್ಲ. ದಾರಿಯಲ್ಲಿ ನಿವೃತ್ತ ಮಿತ್ರ ಪಾಟೀಲ ಎದುರಾದನು. "ಹನ್ನೆರಡು ಜ್ಯೋತಿರ್ಲಿಂಗಗಳ ದರ್ಶನಕ್ಕೆ ಟೂರ್ ಹೋಗ್ತೀವಿ. ನೀನೂ ಬರ್ತೀಯೇನು? ಸರ್ವೀಸಿನಾಗ ಇರೂತನಕ ಕುಂಡೆ ತುರಿಸಿಕೊಳ್ಳಾಕ ಸವುಡು ಇಲ್ಲಾ ಅಂತಿದ್ದಿ. ಈಗ ಹ್ಯಾಂಗೂ ರಿಟೈರ್ ಆಗೀಯಲ್ಲಾ! ಬರ್ತೀಯಿಲ್ಲ?" ಅವನಿಗೆ ಸಮಾಧಾನ ಹೇಳಿ, "ವಿಚಾರ ಮಾಡಿ ಹೇಳ್ತೀನಿ," ಎಂದು ನುಸುಳಿಕೊಂಡೆ. ಆರು ವರ್ಷದ ಮೊಮ್ಮಗ, ಕ್ರಿಕೆಟ್ಟಿನ ಬಗ್ಗೆ ಅಪಾರವಾಗಿ ತಿಳಿದುಕೊಂಡಿದ್ದಾನೆ. ಸಚಿನ್ನನ ಸಿಕ್ಸರ ಬಾಯ್ತುಂಬಾ ಹೊಗಳುತ್ತಾನೆ. ಬೌಂಡರಿಗೆ ಓಡಿದ ಬಾಲನ್ನು ತಡೆಯಲಾಗದ ಆಟಗಾರ ಸರಿಯಾದ ಜಾಗದಲ್ಲಿ ನಿಲ್ಲಲು ಗೊತ್ತಿಲ್ಲದ ಅವಿವೇಕಿಯೆಂದು ಜರಿಯುತ್ತಾನೆ. ಪುಟ್ಟ ಮೊಬೈಲ್‌ನಲ್ಲಿ ವಿವಿಧ ಬಟನ್ನುಗಳನ್ನೊತ್ತಿ,

ಮಾಯಾ ಪ್ರಪಂಚವನ್ನೇ ತೋರಿಸುತ್ತಾನೆ. ನನಗೇನೂ ಗೊತ್ತಿಲ್ಲವೆಂಬುದನ್ನು ತಿಳಿದ ಅವನು ತನ್ನ ತಾಯಿಯ ಬಳಿ, "ತಾತಾ ವೇಸ್ಟ್ ಬಾಡಿ" ಎಂದು ತನ್ನ ಅಭಿಪ್ರಾಯ ಮಂಡಿಸಿದನು. ನನಗೆ ಕಲಿಸಲು ಪ್ರಯತ್ನಿಸಿ ವಿಫಲನಾದ. ತೀರಾ ಹತ್ತಿರವಿರುವ ಚಿಕ್ಕ ಬಟನ್ನುಗಳನ್ನು ಒತ್ತುವುದೆಂದರೆ, ಕಿರು ಬೆರಳಿನ ನೆರಳಿನ ಮೇಲೆ ಆನೆ ತನ್ನ ಪಾದವಿಟ್ಟಂತೆ! ಈ ಪುಟ್ಟ ಬಾಲಕನ ಮುಂದೆ ನಾನೆಷ್ಟು ಬುದ್ಧಿಗೇಡಿಯೆಂದೆನಿಸುತ್ತದೆ. ಎರಡು ಸಲ ತನ್ನ ಮೊಬೈಲು ಕಳೆದುಕೊಂಡದ್ದನ್ನು ಮಗ ಹೇಳಿದಾಗ ಹಾಗೂ ನಮ್ಮಲ್ಲಿರುವ ಸ್ಥಿರ ದೂರವಾಣಿಯನ್ನು ನೆನೆದುಕೊಂಡು, ಈ ಹನಿಗವನ ಬರೆದೆ.

ಸ್ಥಿರ ದೂರವಾಣಿ
ಧರ್ಮ ಪತ್ನಿಯಿದ್ದಂತೆ.
ಕಳವಾಗುವ ಕಳವಳವಿಲ್ಲ.
ಮೊಬೈಲು ಇಟ್ಟುಕೊಂಡವಳ ಹಾಗೆ
ಕಂಡವರು ಕದ್ದೊಯ್ಯಬಹುದು!

ಹಳೆಯ ಕಾಲದ ನನಗೂ ಹಾಗೂ ನನ್ನವಳಿಗೂ ಸ್ಥಿರ ದೂರವಾಣಿಯೇ ರೂಢಿಯಾಗಿದೆ. ಇದರಲ್ಲಿ ಕಂಪನಿಯವರ ಪ್ರಚಾರದ ಕರೆಗಳ ಕಿರಿ ಕಿರಿ ಇಲ್ಲ. ಪ್ರಿಯತಮೆ ಜಂಗಮ ದೇಹಿಗೆ ನೂರೆಂಟು ಎಸ್.ಎಂ.ಎಸ್‌ಗಳು, ಅನಪೇಕ್ಷಿತ ಕರೆಗಳ ತಲೆ ನೋವು! ಮೊಬೈಲಿನೊಡನಾಟ ವೆಂದರೆ, ಎಪ್ಪತ್ತರ ಮುದುಕ, ಇಪ್ಪತ್ತರ ತರುಣಿಯ ಜೊತೆ ಸರಸವಾಡಿದ ಹಾಗೆ!! ಏಗಲಾರದವನ ಏದುಸಿರು, ಕಂಡವರ ನಗೆಪಾಟಲಿಗೆ ಗುರಿಯಾಗುವ ಹಾಗೆ! ಕಾಲ ಅತಿ ವೇಗದಲ್ಲಿ ಬದಲಾಗುತ್ತಿದೆ. ಬದಲಾವಣೆಯೊಂದಿಗೆ ಓಡುವ ಶಕ್ತಿ ನನಗಿಲ್ಲ. ಕಾಲನ ಕರೆ ಬಂದಾಗ, ಹೊರಟುಹೋಗುವದೊಂದೇ ಬಾಕಿ.

ಷೇರುಪೇಟೆ ವ್ಯವಹಾರ ಹೇಗಾಯ್ತು?



ವಿದ್ಯಮಾನಗಳು

- ಕು.ಕ

ನಮ್ಮದು ರಾಜಕೀಯ ಪಕ್ಷಗಳ ಆಧಾರದ ಜನಪ್ರಭುತ್ವ. ಪಕ್ಷಗಳು ತಮ್ಮ ಪ್ರಣಾಳಿಕೆಗಳನ್ನು ಮತದಾರರ ಮುಂದಿಡಬೇಕು. ಬಹು ಸಂಖ್ಯೆಯ ಜನರ ಬೆಂಬಲ ಪಡೆದ ಪಕ್ಷ ಅಧಿಕಾರ ಪಡೆಯುತ್ತದೆ. ಆದರೆ ನಮ್ಮ ದೇಶದಲ್ಲಿ ಈ ಪ್ರಣಾಳಿಕೆಗಳೇ ದೊಡ್ಡ ಜೋಕುಗಳಾಗುತ್ತಿವೆ. ಬಡತನದ ನಿರ್ಮೂಲನೆಗೆ ಹೊರಟ ಪಕ್ಷ ಮೊದಲ ಹಂತದಲ್ಲಿ ಎಲ್ಲರಿಗೂ ರೋಟಿ ಕಪಡಾ ಮಕಾನ್‌ಗಳನ್ನು ಕೊಡುತ್ತೇವೆ ಎಂದು ಪ್ರಾರಂಭಿಸಿ ಈಗ ಕಲರ್ ಟೀವಿ ಪುಗಸಟ್ಟೆ ಹಂಚುವ ಆಶ್ವಾಸನೆ ಕೊಡುತ್ತಿದೆ. ನಾವು ಇತರರಂತಲ್ಲ ಎಂದು ಹೇಳಿಕೊಳ್ಳುತ್ತಿದ್ದ ಪಕ್ಷ ಬೇರೆಯವರು ಕೊಡುತ್ತೇವೆ ಎಂದು ಹೇಳಿರುವುದು ಪ್ಲಸ್ ಇನ್ನಷ್ಟು ನಾವು ಕೊಡುತ್ತೇವೆ ಎಂದು ಪ್ರಮಾಣ ಮಾಡಿ ಹೇಳುತ್ತಿದೆ. ಮತ್ತೊಂದು ಪಕ್ಷ ನಮ್ಮ ಪಕ್ಷಕ್ಕೆ ಕೇವಲ 15-20 ಸೀಟುಗಳನ್ನು ಕೊಡಿಸಿ ನಮ್ಮ ಮಹಾ ನಾಯಕರು ಅವರ ಶಕ್ತಿ ಏನು ಎಂದು ತೋರಿಸುತ್ತಾರೆ ಎಂದು ಅಲವತ್ತುಕೊಂಡು ಬೇಡುತ್ತಿದೆ.

★★★

ಸ್ವಾತಂತ್ರ್ಯ ಬಂದಮೇಲೆ ಒಂದೂಕಾಲು ಡಜನ್ ಬಾರಿ ಅಸೆಂಬ್ಲಿ ಚುನಾವಣೆಗಳು ನಡೆದಿವೆ. ಈ ಎಲ್ಲಾ ಚುನಾವಣೆಗಳಲ್ಲೂ ರಾದ್ಧಾಂತವಾಗುವ ಒಂದು ಸಂಗತಿ - ಪಕ್ಷಗಳ ಟಿಕೆಟ್ಟುಗಳ ಹಂಚಿಕೆ. ಮೊದಲ ಒಂದೆರಡು ಚುನಾವಣೆಗಳಲ್ಲಿ ಸಿ ಪಕ್ಷದ ಚಿಹ್ನೆ ಸಿಕ್ಕರೆ ಒಂದು ಕತ್ತೆ ಬೇಕಾದರು ಗೆಲ್ಲುತ್ತಿತ್ತು ಎಂದು ಹೇಳುತ್ತಾರೆ. ಆ ದಿನಗಳಲ್ಲಿ ಈ ಪಕ್ಷದ ಹಿರಿಯರು ಇದೇ ಕ್ಷೇತ್ರಕ್ಕೆ ಕತ್ತೆ ಎಂದು ಹೇಗೆ ನಿರ್ಧರಿಸುತ್ತಿದ್ದರೋ ಗೊತ್ತಿಲ್ಲ. ಈಚಿನ ಚುನಾವಣೆಗಳಲ್ಲಿ ಟಿಕೆಟ್ ಹಂಚಿಕೆ ನವರಸಭರಿತ ಮಹಾ ನಾಟಕವಾಗುತ್ತಿದೆ. ಇಂದಿನ ಲೇಟೆಸ್ಟ್ ಚುನಾವಣೆಯಲ್ಲಿ ಲೆಕ್ಕದಲ್ಲಿರುವ ಪಕ್ಷಗಳು ಬಿಸಿಡಿ ಒಟ್ಟು ಮೂರು ಪಕ್ಷಗಳು. ಬಿ ಪಕ್ಷದವರೇನೋ ಅತ್ಯಂತ ಕಡಿಮೆ ಸಮಯದಲ್ಲಿ ಸ್ಥಳೀಯ ನಾಯಕರುಗಳೇ ಅಭ್ಯರ್ಥಿಗಳನ್ನು ಆರಿಸಿದ ನಾಟಕ ಮುಗಿಸಿದರು. ಇವರ ಆಯ್ಕೆಗೆ ದೆಹಲಿ ಮೊಹರು ಬೇಗಲೇ ಬಿತ್ತು. ಆದರೆ ಸಿ ಪಕ್ಷದ ಟಿಕೆಟ್ ಆಕಾಂಕ್ಷಿಗಳು ಇನ್ನೂ ಇಳಿದು ಬಾ ತಾಯಿ ಇಳಿದು ಬಾ ಎಂದು ಪ್ರಾರ್ಥನೆ ಮಾಡುತ್ತಿದ್ದಾರೆ. ಆ ಟಿಕೆಟ್ ಯಾರದೋ ಕಿವಿಯಿಂದ ಮತ್ತೊಬ್ಬರ ತೊಡೆಯಿಂದ ಇನ್ನೊಬ್ಬರ ಜಠೆಯಿಂದ ಹಾದು ಬರಬೇಕಂತೆ. ನಾಮಪತ್ರ ಸಲ್ಲಿಸಲು 2-3 ದಿನಗಳಿವೆ ಎನ್ನುವಾಗಿನಿಂದ ಟಿಕೆಟ್ಟುಗಳು ಬೆಂಗಳೂರು ನಗರದ ನಲ್ಲಿಗಳಲ್ಲಿ ನೀರು ಬರುವಂತೆ ತೊಟಕು ತೊಟಕಾಗಿ ಇಳಿದು ಬರುತ್ತಿವೆ. ಸಿ ಪಕ್ಷದ ಈ ಗೊಂದಲದಿಂದ ಡಿ ಪಕ್ಷಕ್ಕೆ ಲಾಭವಾಗಿದೆಯಂತೆ. ಈ ಪಕ್ಷದ ಮಹಾ ನಾಯಕರೇ ಅಲ್ಲಿಯೂ ಸಲ್ಲದ ಇಲ್ಲಿಯೂ ಸಲ್ಲದ ಎಲ್ಲರಿಗೂ ಇಲ್ಲಿ ಯಾವುದೇ ಪ್ರಶ್ನೆ ಕೇಳದೆ

ಟಿಕೆಟ್ಟುಗಳನ್ನು ಮುಕ್ತವಾಗಿ ಕೊಡಲಾಗುತ್ತದೆ ಎಂದು ಬೋರ್ಡ್ ಹಾಕಿಕೊಂಡು ಕುಳಿತಿದ್ದಾರಂತೆ!

★★★

ಟಿಕೆಟ್ಟುಗಳ ಹಂಚಿಕೆ, ಒಂದು ಪಕ್ಷದ ಟಿಕೆಟ್ ಸಿಗದವರು ಇನ್ನೊಂದು ಪಕ್ಷಕ್ಕೆ ವಲಸೆ ಹೋಗುವುದು ಎಲ್ಲಾ ಚುನಾವಣೆಗಳಲ್ಲೂ ಮಾಮೂಲು. ಈ ಚುನಾವಣೆಯ ಒಂದು ವಿಶೇಷ ಸ್ವಾರಸ್ಯ, ಚುನಾವಣೆಯಲ್ಲಿ ಸ್ಪರ್ಧಿಸುವವರು ಮತದಾರರಿಗೆ ಹಂಚಲು ಸಂಗ್ರಹಿಸಿಟ್ಟಿರುವ ಸಾಮಾನುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಧಿಕಾರಿಗಳು ತೋರಿಸುತ್ತಿರುವ ಅತ್ಯುತ್ಸಾಹ. ಇದರಿಂದ ಯಾರು ಯಾರಿಗೋ ಏನೇನೋ ಸಮಸ್ಯೆಗಳು ಹುಟ್ಟಿಕೊಂಡಿವೆಯಂತೆ. ನಮ್ಮ ಊರಿನ ಪುರೋಹಿತರ ಪತ್ನಿ ಅಚ್ಚಮ್ಮ ಅವರ ಹತ್ತಿರ ನಮ್ಮ ಊರಿನ ಮಹಿಳೆಯರು ಗೌರಿಹಬ್ಬ ಇತ್ಯಾದಿ ಸಂದರ್ಭಗಳಲ್ಲಿ ಎಲಡಕೆ ಜೊತೆ ಕೊಟ್ಟಿರುವ ಎಡರು ಮೂರು ಸಾವಿರ ರೌಕೆ ಕಣಗಳ ಸಂಗ್ರಹವಿದೆಯಂತೆ. ಈಗ ಅವರಿಗೆ ಈ ಜಾಕೆಟ್ ಬಟ್ಟೆಗಳನ್ನೆಲ್ಲಾ ಮತದಾರರಿಗೆ ಹಂಚಲು ಕೂಡಿಟ್ಟಿರುವುದು ಎಂದು ಈ ಕಣಗಳ ಜೊತೆಗೆ ತಮ್ಮನ್ನೂ ಅರೆಸ್ಟ್ ಮಾಡಿದರೆ ಅನ್ನುವ ಹೆದರಿಕೆ. ಅಯ್ಯೋ ಅಧಿಕಾರಿಗಳು ಅಷ್ಟು ದಡ್ಡರಲ್ಲ ಎಂದು ನಾನು ಸಮಾಧಾನ ಮಾಡಲು ಹೋದಾಗ ಜೋಯಿಸರೇ ಅಧಿಕಾರಿಗಳ ದಡ್ಡತನಕ್ಕೆ ಯಾವುದೇ ಲೋಯರ್ ಲಿಮಿಟ್ ಇಲ್ಲ ಕಣಯ್ಯ ಎಂದು ನನ್ನ ಬಾಯಿ ಮುಚ್ಚಿಸಿದರು.

★★★

ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಚಂಗನೆ ನೆಗೆಯುವ ರಾಜಕಾರಣಿಗಳು, ಸುಳ್ಳು ಆಶ್ವಾಸನೆಗಳನ್ನು ಕೊಡುವ ರಾಜಕೀಯ ಪಕ್ಷಗಳು, ಮನಿ ಪವರ್, ಮಸಲ್ ಪವರ್, ಹಣದ ಹೊಳೆ, ಹೆಂಡದ ಕೊಳೆ ಇವುಗಳೆಲ್ಲಾ ಇದ್ದರೂ ನಮ್ಮಲ್ಲಿ ಡೆಮಾಕ್ರಸಿ ಜೀವಂತವಾಗಿದೆ ಎಂದು ಹೆಮ್ಮೆಯಿಂದಲೇ ಹೇಳಿಕೊಳ್ಳಬಹುದು. ಹೆಚ್ಚಿನ ಜನ ಪ್ರಜಾಪ್ರಭುತ್ವ ತಮಗೆ ಕೊಟ್ಟಿರುವ ಮತದಾನದ ಹಕ್ಕನ್ನು ಮುಕ್ತವಾಗಿ ಬಳಸಿಕೊಳ್ಳುತ್ತಿದ್ದಾರೆ. ಜನ ಸರಿಯಾಗಿಯೇ ನಿರ್ಧರಿಸುತ್ತಾರೆ. ಆದರೆ ಎಡವಟ್ಟು ಆಗುವುದು ಕೊನೆಯ ಹಂತದಲ್ಲಿ, ಜನ ಏನು ಹೇಳಿದ್ದಾರೆ ಎಂದು ಅರ್ಥ ಮಾಡಿಕೊಳ್ಳುವುದರಲ್ಲಿ.

ಈಗ ನಡೆಯುತ್ತಿರುವ ಚುನಾವಣೆಯಲ್ಲಿ ಮೂರು ಸಾಧ್ಯತೆಗಳು ಕಾಣಿಸುತ್ತಿವೆ. ಒಂದು – ಸಿ ಪಕ್ಷಕ್ಕೆ ಸಣ್ಣ ಆದರೆ ಸ್ಪಷ್ಟ ಬಹುಮತ; ಮಹಾನಾಯಕಿ ಸೋ. ಆರಿಸಿದವರು ಕರ್ನಾಟಕದ ಮುಖ್ಯಮಂತ್ರಿ ಇತರ ಮಂತ್ರಿಗಳಾಗುತ್ತಾರೆ. ಕರ್ನಾಟಕದ ಜನ ಮತ ಕೊಟ್ಟಿದ್ದಾರೆ. ರಾಜ್ಯದ ಭವಿಷ್ಯದ ಬಗ್ಗೆ ಅಂತಿಮ ನಿರ್ಧಾರ ಬಜಪ ಹೈಕಮಾಂಡ್‌ಗೆ ಬಿಟ್ಟದ್ದು. ಜೈ ಡೆಮಾಕ್ರಸಿ!

ತುಂತುರು

- ರಾಹು-ಲ್ ಕಾಲ ಎಂಬುದೊಂದಿದೆಯೆ?
- ಕನಸನ್ನು ನನಸು ಮಾಡಲು ತೆಗೆದುಕೊಳ್ಳಬೇಕಾದ ಮೊದಲ ಹೆಜ್ಜೆ ಎಂದರೆ ಕನಸು ಕಾಣುವುದು.
- ಗಣಿತ ಶಿಕ್ಷಕರ ಕೊರತೆಯೇ ಇರುವುದಿಲ್ಲ. ಏಕೆಂದರೆ ಅವರ ಸಂಖ್ಯೆ ಮಲ್ಟಿಪ್ಲೈ ಆಗುತ್ತಲೇ ಇರುತ್ತದೆ.
- ಟೋಕನ್ ಫಾಸ್ಟ್: ಊಟ ಮಾಡಲು ಟೋಕನ್ ತೆಗೆದುಕೊಳ್ಳುವುದು ಸಹಜ. ಆದರೆ ಉಪವಾಸ ಮಾಡುವುದಕ್ಕೂ ಟೋಕನ್ನೇ?
- ಡಯಾಬಿಟಿಸ್ ಕಾನ್ಫರೆನ್ಸ್‌ನಲ್ಲಿ ಕಾಫಿ ಬ್ರೇಕ್ ಇರಲ್ಲ, ಶುಗರ್ ಲೆಸ್ ಕಾಫಿ ಬ್ರೇಕ್ ಇರುತ್ತೆ ಅಂತೀರಾ?
- Ramesh famous not by accident
- 'ಇನ್ನಷ್ಟು ಒಲವು ತೋರಿಸಬೇಕು ನೀನು' ಎಂದು ನನ್ನ ಗರ್ಲ್‌ಫ್ರೆಂಡ್ ಹೇಳಿದ್ದರಿಂದ ನಾನು ಅವಳ ಜೊತೆಗೆ ಇನ್ನೊಬ್ಬಳನ್ನೂ ಫ್ರೆಂಡ್ ಮಾಡಿಕೊಳ್ಳಬೇಕಾಯಿತು.
- ಮಹಿಳೆ ತಾನು ಸುಂದರಿಯಾಗಿಯೇ ಉಳಿಯಬೇಕಾದರೆ ಏನು ಮಾಡಬೇಕು?

  ಸುಂದರಿ ಎಂದು ಹೆಸರಿಟ್ಟುಕೊಳ್ಳಬೇಕು.
- Rahul Gandhi is being groomed for family business.
- ಅನಂತಕುಮಾರ್ ಅವರು ಯಡಿಯೂರಪ್ಪ ಅವರಿಗೆ hole-hearted support ಕೊಡ್ತಿದ್ದಾರೆ ಎಂಬುದು ಶುದ್ಧ ಕುಹಕ.
- All people smile in the same language.
- ಕಾನೂನು ಉಲ್ಲಂಘಿಸದ ಮನೆಯಿಂದ ಸಾಸುವೆ ತನ್ನಿ ನೋಡೋಣ.
- I was talking to Ratan Tata when L N Mittal tapped me on the shoulder and told me Chidambaram was looking for me ಎಂದರೆ ನೇಮ್ ಡ್ರಾಪಿಂಗ್ ಹೆಚ್ಚಾಯಿತು ಎನ್ನಬಹುದೆ?
- ಕೆಲವು ಮೇಲಧಿಕಾರಿಗಳು ಮೋಡವಿದ್ದಂತೆ. ಅವರು ಹೋದ ತಕ್ಷಣ ವಾತಾವರಣ ನಳನಳಿಸತೊಡಗುತ್ತದೆ.
- ನಾವು ಸೋಲುವವರೆಗೂ ಗೆಲ್ಲುತ್ತೇವೆ ಎಂದೇ ಅಂದುಕೊಂಡಿರಬೇಕು.
- ಪ್ರತಿ ಪುಸ್ತಕವೂ ತನ್ನ ಹಣೆಬರಹವನ್ನು ಹೊತ್ತಿಕೊಂಡೇ ಹೊರಬರುತ್ತದೆ.
- Silence is a language in itself.
- 1 ಪ್ಲಸ್ 1 ಎಂದಾಗ ಎರಡೇ ಆಗಬೇಕಿಲ್ಲ, ಸರಿಯಾಗಿ ಬರೆದರೆ ಹನ್ನೊಂದೂ ಆದೀತು.

- ದಂನಆ

ಪಿಎಸ್‌ಐ ವರ್ಸಸ್ ಐಪಿಎಸ್

- ಡಾ|| ಡಿ.ವಿ.ಗುರುಪ್ರಸಾದ್

ಆಗತಾನೇ ಐಪಿಎಸ್ ಪರೀಕ್ಷೆ ಫಲಿತಾಂಶ ಬಂದಿದ್ದು ನನ್ನ ಹೆಸರೂ ಆಯ್ಕೆ ಪಟ್ಟಿಯಲ್ಲಿತ್ತು. ನಾವು ಮನೆ ಮಂದಿಯೆಲ್ಲಾ ಸಡಗರದಿಂದ ಬೀಗುತ್ತಿದ್ದೆವು. ನನ್ನ ಸೋದರಿಯ ಗೆಳತಿ ಶೋಭಾ ಮನೆಗೆ ಬಂದಳು. ಪಿ.ಎಸ್.ಐ. ಆದದ್ದಕ್ಕೆ ಕಂಗ್ರಾಟ್ಸ್ ಎಂದು ಆಕೆ ನನ್ನ ಕೈ ಕುಲುಕಿದಳು. ನಾನು ಪಿಎಸ್‌ಐ ಆಗಲು ಹೊರಟಿಲ್ಲ ಶೋಭಾ, ಆ ಮೂರಕ್ಷರ ತಿರುಗು ಮಾಡಿದರೆ ಬರುವ ಪಿಎಸ್‌ಐಗೂ ಹೆಚ್ಚಿನ ಹುದ್ದೆ ಆದ ಐಪಿಎಸ್ ಆಗುತ್ತಿದ್ದೇನೆ ಎಂದೆ. ಓಹ್ ನೀನು ಪೊಲೀಸ್ ಠಾಣೆಗೆ ಬಾಸ್ ಆಗಿ, ಮೋಟರ್ ಬೈಕ್ ಓಡಿಸುವ ಅಧಿಕಾರಿ ಆಗೋಲ್ವಾ-ಜಂಜೀರ್‌ನಲ್ಲಿ ಅಮಿತಾಬ್ ಬಚ್ಚನ್ ಥರ ಎಂದಳು. ಇಲ್ಲ ನಾನು ಬಿಳೀ ಅಂಬಾಸಿಡರ್ ಕಾರಿನಲ್ಲಿ ಖಾಕಿ ಸೂಟ್ ಧರಿಸಿ ಓಡಾಡುವ ಪೊಲೀಸ್ ಕಮಿಷನರ್ ಇಫ್ತಿಕಾರ್ ತರಹ ಆಗ್ತಿದ್ದೀನಿ ಎಂದೆ. ಹಾಗಾದ್ರೆ ನೀನು ಹೀರೋ ಕೆಲಸಕ್ಕೆ ಹೋಗ್ತಿಲ್ಲ, ವಿಲನ್ ಆಗ್ತಿದಿಯಾ ಎಂದಳು. ನಾನು ಹುಬ್ಬೇರಿಸಿದೆ. ಅಲ್ಲವೇ ಮತ್ತೆ ಪೊಲೀಸ್ ಕಮೀಷನರ್‌ಗಳು ಸ್ಮಗ್ಲರ್‌ಗಳು, ರಾಜಕಾರಿಣಿಗಳ ಜತೆ ಸೇರಿಕೊಂಡು ನಿಷ್ಠಾವಂತ ಪಿಎಸ್‌ಐಗಳಿಗೆ ತೊಂದರೆ ಕೊಡೋ ಜನ ಅಲ್ವೇ? ಈಗ್ಲೂ ಹೇಳ್ತಿನಿ ಕೇಳು ಆ ಮೂರಕ್ಷರ ಐಪಿಎಸ್ ತಿರುಗು ಮುರುಗು ಮಾಡಿ ಪಿಎಸ್‌ಐ ಆಗಿಬಿಡು. ಯಾವುದಾದರೂ ಒಳ್ಳೆ ಕಡೆ ಹೆಣ್ಣುಗಳು ಸಿಕ್ತಾರೆ. ಹತ್ತಿಪ್ಪತ್ತು ಲಕ್ಷ ವರದಕ್ಷಿಣೆ ಬರುತ್ತೆ. ಐಪಿಎಸ್ ಅಧಿಕಾರಿಯಾದರೆ ನಿನ್ನತ್ತ ಯಾವ ಹೆಣ್ಣೂ ಸುಳಿಯುವುದಿಲ್ಲ ಎಂದು ಮೂದಲಿಸಿದಳು. ನಾನು ಮೌನ ಧರಿಸಿದೆ.

ನೋಡು ನೀನು ನನಗಿಂತಾ ಜಾಸ್ತಿ ಕಲ್ತಿದಿಯಾ ನಿಜ. ಆದರೆ ನಿನಗೆ ಇನ್ನೂ ವ್ಯವಹಾರ ಜ್ಞಾನ ಇಲ್ಲ ಅಂತ ನಿಮ್ಮ ಅಮ್ಮ ಅಪ್ಪನೇ ಒಪ್ಕೋತಾರಲ್ಲವೇ ಎಂದಳು. ನಾನು ಬಾಯಿ ಬಿಚ್ಚಲಿಲ್ಲ. ಜನರ ಕಣ್ಣಿಗೆ ಹೆಚ್ಚು ಕಾಣಿಸುವವರು ಪಿಎಸ್‌ಐಗಳೋ, ಐಪಿಎಸ್‌ಗಳೋ ಎಂದಳು. ಪಿಎಸ್‌ಐಗಳೇ. ಏಕೆಂದರೆ ಅವರ ಸಂಖ್ಯೆ ತುಂಬಾ ಜಾಸ್ತಿ. ಇಡೀ ದೇಶದಲ್ಲೇ 3000 ಐಪಿಎಸ್‌ಗಳು ಇದ್ದರೇ, ಕರ್ನಾಟಕ ರಾಜ್ಯದಲ್ಲಿಯೇ 3000 ಪಿಎಸ್‌ಐಗಳು ಇದ್ದಾರಂತೆ ಎಂದೆ. ಹಾಗಾದರೇ ಪಿಎಸ್‌ಐಗಳೇ ಜಾಸ್ತಿ ಅಲ್ಲವೇ ಎಂದಳು. ಸರಿ ನಿನ್ನ ಮುಂದಿನ ಆರ್ಗ್ಯುಮೆಂಟ್ ಏನು ಎಂದು ಕೇಳಿದೆ.

ಗರಿ ಗರಿ ಯೂನಿಫಾರಂ ಧರಿಸಿ ಕೂಲಿಂಗ್ ಗ್ಲಾಸ್ ಹಾಕಿಕೊಂಡು ಮೋಟಾರ್ ಬೈಕ್ ಮೇಲೆ ಓಡಾಡಿದರೆ ಕಾಲೇಜು ಹುಡುಗಿಯರು ನೋಡುತ್ತಾರೋ ಇಲ್ಲಾ ಕಾರು, ಜೀಪಿನಲ್ಲಿ ಓಡಾಡಿದರೆ ಗಮನಿಸುತ್ತಾರೋ ಎಂದು ಕೇಳಿದಳು. ಸಹಜವಾಗಿ ಮೋಟಾರ್ ಸೈಕಲ್ ಅಲ್ಲವೇ, ಅದೂ ಅಲ್ಲದೇ ಹುಡುಗಿಯರ ಕಾಲೇಜು ಬಳಿ ಹೋಗಿ ಹುಡುಗಿಯರನ್ನು ಛ್ಡಾಯಿಸುವ ಹುಡುಗರನ್ನು ಓಡಿಯಬೇಕಾದರೆ ಮೋಟಾರ್ ಬೈಕ್‌ನ ಪಿಎಸ್‌ಐ

ಕೈಯಿಂದ ಮಾತ್ರ ಸಾಧ್ಯ ಅಲ್ಲವೇ ಎಂದೆ. ಓಹೋ! ಪರವಾಗಿಲ್ಲ, ನೀನೂ ನಿಧಾನವಾಗಿ ನನ್ನ ದಾರಿಗೆ ಬರುತ್ತಿದ್ದೀಯ, ಚುಡಾಯಿಸುವ ಹುಡುಗರನ್ನು ಹಿಡಿದು ಎರಡೇಟು ಬಿಟ್ಟ ಪಿಎಸ್‌ಐ ಕಾಲೇಜು ವಿದ್ಯಾರ್ಥಿನಿಗಳ ಹೀರೋ ಆಗ್ತಾನಪ್ಪಾ, ಯಾವುದೋ ಏರ್‌ಕಂಡಿಷನ್ ಕಚೇರಿಯಲ್ಲಿ ಕುಳಿತುಕೊಳ್ಳುವ ಐಪಿಎಸ್ ಅಲ್ಲ ಎಂದಳು.

ಮಾತು ಮುಂದುವರಿಸಿ ನೀನು ದೀವಾರ್ ಸಿನಿಮಾ ನೋಡಿದ್ದೀಯಾ ಎಂದು ಶೋಭಾ ಕೇಳಿದಳು. ಎರಡು ಸಲ ನೋಡಿದ್ದೆ ಎಂದು ಉತ್ತರಿಸಿದೆ. ಶಶಿಕಪೂರ್‌ನ ಪಾತ್ರ ಯಾವುದು ಎಂದಳು. ಅವನು ಎಸ್‌ಐ ಎಂದೆ. ಅಮಿತಾಬ್ ಬಚ್ಚನ್‌ನ ಪಾತ್ರ ಯಾವುದು ಎಂದಳು. ಆತ ಅತಿ ಶ್ರೀಮಂತನಾಗಿರುವ ಹೆಸರಾಂತ ಸ್ಮಗ್ಲರ್ ಎಂದೆ. ಅಮಿತಾಬ್ ಬಚ್ಚನ್ ನನ್ನ ಬಳಿ ಧನ, ದೌಲತ್ತು ಎಲ್ಲಾ ಇದೆ ಎಂದು ಬಡಾಯಿ ಕೊಚ್ಚಿದಾಗ ಎಸ್‌ಐ ಶಶಿಕಪೂರ್ ಏನು ಉತ್ತರ ಕೊಟ್ಟ ತಿಳಿದಿದೆಯಾ ಎಂದಳು. ನನ್ನ ಬಳಿ ತಾಯಿ ಇದ್ದಾಳೆಎನ್ನುತ್ತಾನೆ ಅಲ್ಲವೇ ಎಂದೆ. ಒಬ್ಬ ಮಗ ಆಗರ್ಭ ಶ್ರೀಮಂತನಾಗಿದ್ದರೂ ಎಸ್‌ಐ ಆದ ಮಗನ ಜೊತೆಯೇ ಅವನ ತಾಯಿ ಉಳಿಯಲು ನಿರ್ಧರಿಸುತ್ತಾಳೆ. ಈಗ ನೀನೇ ಹೇಳು ಎಸ್‌ಐ ಹೆಚ್ಚೋ, ಐಪಿಎಸ್ ಹೆಚ್ಚೋ ಎಂದಳು. ಅಲ್ಲ ಶೋಭಾ ಈಗ ನಾವು ಹೋಲಿಸುತ್ತಿರುವುದು ಸ್ಮಗ್ಲರ್ ಹಾಗೂ ಪೊಲೀಸರನ್ನಲ್ಲ, ಐಪಿಎಸ್ ಅಧಿಕಾರಿ ಹಾಗೂ ಎಸ್‌ಐಗಳನ್ನು ಅಲ್ಲವೇ ಎಂದೆ. ನಿನ್ನನ್ನು ಟ್ಯೂಬ್‌ಲೈಟ್ ಎನ್ನುವುದು ಅದಕ್ಕೇ. ಸಿನಿಮಾಗಳಲ್ಲಿ ಐಪಿಎಸ್ ಅಧಿಕಾರಿಗಳು ಸ್ಮಗ್ಲರ್‌ಗಳ ಜೊತೆ ಸೇರಿಕೊಂಡು ಅವರೂ ಸ್ಮಗ್ಲರ್‌ಗಳೇ ಆಗುವುದರಿಂದ ನನ್ನ ಲೆಕ್ಕದಲ್ಲಿ ಅಮಿತಾಬ್‌ಬಚ್ಚನ್‌ನ ಹೋಲಿಕೆ ಸರಿಯಾಗಿಯೇ ಇದೆ ಎಂದಳು. ಈ ರೀತಿ ವಿತಂಡವಾದವಾಡಿದರೆ ನಿನ್ನ ಜೊತೆ ಮಾತನಾಡಿ ಪ್ರಯೋಜನವಿಲ್ಲ ಎಂದು ನನ್ನ ರೂಮಿನತ್ತ ಹೆಜ್ಜೆ ಹಾಕಿದೆ.

ನೋಡು ಈ ರೀತಿ ಓಡಿ ಹೋಗಬೇಡ. ನೀನು ಶೂಲ್ ಚಿತ್ರ ನೋಡಿದ್ದೀಯಾ ಎಂದು ಕೇಳಿದಳು. ಓ! ನೋಡಿದ್ದೇನೆ. ಆ ಚಿತ್ರದಲ್ಲಿ ಬರುವ ಎಸ್‌ಐ ಎಂತಹ ಅಪಾಯಗಳು ಬಂದರೂ ಬಿಡದೆ ಸತ್ಯಮೇವಜಯತೇ ಎಂದು ಸತ್ಯ ಧರ್ಮದ ಪರವೇ ಹೋರಾಡುತ್ತಾನೆ ಎಂದೆ. ಈಗ ಹೇಳು ಯಾವ ಚಿತ್ರದಲ್ಲಿ ಸತ್ಯಧರ್ಮಕ್ಕಾಗಿ ಹೋರಾಡುವ ಐಪಿಎಸ್ ಅಧಿಕಾರಿಗಳ ಬಗ್ಗೆ ನಿರೂಪಿಸಿದ್ದಾರೆ ಎಂದಳು. ನೋಡು ನಿನ್ನಷ್ಟು ಹಿಂದಿ ಚಿತ್ರಗಳನ್ನು ನಾನು ನೋಡುವುದಿಲ್ಲ, ಆಗೊಮ್ಮೆ ಈಗೊಮ್ಮೆ ಚಿತ್ರ ನೋಡಿದರೂ ಕಥೆಗಳನ್ನೇ ಮರೆತುಬಿಡುತ್ತೇನೆ. ಹಾಗಾಗಿ ನೀನೇ ನನಗೆ ದಾರಿ ತೋರಿಸಬೇಕು ಎಂದೆ.

ಕನ್ನಡ ಚಿತ್ರ ಅಂತ ನೋಡಿದ್ದೀಯಾ ಎಂದಳು. ಒಂದಾನೊಂದು ಕಾಲದಲ್ಲಿ ನೋಡಿದ್ದೆ. ಆ ಚಿತ್ರದಲ್ಲಿ ಎಸ್‌ಐ ಆದ ಅಂಬರೀಷ್ ಗೃಹ ಸಚಿವರ ಮೇಲೆಯೇ ಗುಂಡು ಹಾರಿಸಿ ಸಾಯಿಸಿಬಿಡುತ್ತಾನೆ ಎಂದು ನೆನಪು ಎಂದೆ. ಆ ಚಿತ್ರದಲ್ಲಿ ಅಂಬರೀಷ್‌ಗೆ ಹೆಚ್ಚಿನ ಶಿಳ್ಳೆ ಬಂದಿತೋ ಇಲ್ಲ ಕಮೀಷನರ್ ಪಾತ್ರ ವಹಿಸಿದ ವ್ಯಕ್ತಿಗೋ ಎಂದು ಕೇಳಿದಳು. ನನಗೆ ನೆನಪಿರುವಂತೆ ಅಂಬರೀಷ್‌ಗೇ ಜಾಸ್ತಿ ಚಪ್ಪಾಳೆ ಸಿಕ್ಕಿತು ಎಂದೆ.


ಅಲ್ಲ ಶೋಭಾ ನಿನಗೆ ಗೊತ್ತಿಲ್ಲ, ನಿಜವಾಗಿ ನೋಡಿದರೆ ಸಿನಿಮಾದ ಎಸ್‌ಐಗಳನ್ನು ಯಾರೂ ಸೀರಿಯಸ್ಸಾಗಿ ತೆಗೆದುಕೊಳ್ಳುವುದಿಲ್ಲ. ಹಿಂದಿನ ಕಾಲದ ಹಿಂದಿ ಚಿತ್ರಗಳಲ್ಲಿ ಹೀರೋಯಿನನ್ನು ಅಪಹರಿಸಿಕೊಂಡು ಹೋದ ವಿಲನ್ ಅನ್ನು ಹಾಗೂ ಅವನ ಸಹಚರರನ್ನು ಹೀರೋ ಬರೀ ಕೈಯಿಂದ ಡಿಶುಂ ಡಿಶುಂ ಎಂದು ಚಚ್ಚಿ ಹಣ್ಣುಗಾಯಿ ನೀರುಗಾಯಿ ಮಾಡಿ ನೆಲಕ್ಕೆ ಉರುಳಿಸಿದ ನಂತರವೇ ಪಿಎಸ್‌ಐ ಸ್ಥಳಕ್ಕೆ ಬಂದು ಯು ಆರ್ ಅಂಡರ್ ಅರೆಸ್ಟ್ ಎಂದು ವಿಲ್ಲನ್‌ನನ್ನು ಬಂಧಿಸುತ್ತಿದ್ದ. ಸಿನಿಮಾದ ಪ್ರೇಕ್ಷಕರೆಲ್ಲಾ ಪೊಲೀಸರನ್ನೇ ಕೆಲಸಕ್ಕೆ ಬಾರದವರು ಎಂದು ಭಾವಿಸುತ್ತಿದ್ದರು ಎಂದೆ. ಅದು ಆಗಿನ ಕಾಲದಲ್ಲಿ, ಈಗ ಅಂತಹ ಚಿತ್ರಗಳನ್ನು ಮಾಡುವುದಿಲ್ಲ ಎಂದು ಬಾಯಿ ಮುಚ್ಚಿಸಿ, ಪೊಲೀಸರೇ ಕೆಲಸಕ್ಕೆ ಬಾರದವರು ಎಂದು ಜನ ಭಾವಿಸಿದ್ದರೆ ಐಪಿಎಸ್ ಆದರೆಷ್ಟು, ಪಿಎಸ್‌ಐ ಆದರೆಷ್ಟು ಎಲ್ಲಾ ಒಂದೇ ಎಂದಳು. ಒಂದು ಅರ್ಥದಲ್ಲಿ ನಿನ್ನ ವಾದ ಒಪ್ಪತಕ್ಕದ್ದೇ. ಪೊಲೀಸೇ ಆಗಬಾರದು ಎಂದೆ.

ಅರ್ಧಸತ್ಯ ಎಂದು ಒಂದು ಸಿನಿಮಾ ಬಂದಿತ್ತು ನೋಡಿದ್ದೆಯಾ ಎಂದಳು, ನೋಡಿದ್ದೆ ಎಂದೆ. ಚಿತ್ರದಲ್ಲಿನ ಎಸ್‌ಐ ಪ್ರಾಮಾಣಿಕನೋ ಇಲ್ಲಾ ಭ್ರಷ್ಟನೋ ಎಂದಳು. ಪ್ರಾಮಾಣಿಕ ಅಂತ ಅನಿಸ್ತಿದೆ ಎಂದೆ. ಅವನ ಮೇಲಾಧಿಕಾರಿಗಳು ಪ್ರಾಮಾಣಿಕರಾಗಿದ್ದರೋ ಇಲ್ಲವೋ ಎಂದಳು. ವ್ಯವಸ್ಥೆ ಪ್ರಾಮಾಣಿಕವಾಗಿರಲಿಲ್ಲ ಎಂದು ನಿರೂಪಣೆ ಆಗಿತ್ತು ಎನ್ನುವುದು ನನ್ನ ಭಾವನೆ ಎಂದೆ. ಎಸ್‌ಐಗಳೇ ಪ್ರಾಮಾಣಿಕವಾಗಿರುವಾಗ ನೀನು ಏಕೆ ಆ ಕೆಲಸಕ್ಕೆ ಹೋಗದೇ ಅಪ್ರಾಮಾಣಿಕ ಎಂದು ಜನ ಯೋಚಿಸುವ ಹಿರಿಯ ಅಧಿಕಾರಿಯಾಗುವೆ ಎಂದಳು.

ಹೋಗಲೀ ಸಿನಿಮಾ ವಿಷಯ ಬಿಟ್ಟು ಬಿಡೋಣ, ನಿಜ ಜೀವನಕ್ಕೆ ಬರೋಣ. ನಿಮ್ಮ ಮನೆಯಲ್ಲಿ ಕಳ್ಳತನವಾದರೆ, ನೀನು ಎಲ್ಲಿ ಹೋಗುತ್ತೀ? ನಿಮ್ಮ ಜಿಲ್ಲೆಯ ಎಸ್‌ಪಿ ಕಚೇರಿಗೋ ಅಥವಾ ಟೌನ್ ಪೊಲೀಸ್‌ಸ್ಟೇಷನ್‌ಗೋ ಎಂದಳು. ಇದೇನು ಇಂತಹ ಪ್ರಶ್ನೆ ಕೇಳುವೆ? ಟೌನ್ ಪೊಲೀಸ್ ಠಾಣೆಗೇ ಅಲ್ಲವೇ ಎಂದೆ. ನಿನ್ನ ಕಳ್ಳತನದ ಕೇಸು ಪತ್ತೆ ಮಾಡುವವರು ಎಸ್‌ಐನೋ ಅಥವಾ ಎಸ್‌ಪಿನೋ ಎಂದಳು. ನೋಡಮ್ಮಾ ಎಸ್‌ಪಿ ಸಾಹೇಬರ ಕರ್ತವ್ಯ ಎಸ್‌ಐಗಳ ಕೆಲಸದ ಮೇಲ್ವಿಚಾರಣೆ ಮಾಡುವುದು. ಅವರು ಪ್ರಕರಣಗಳ ತನಿಖೆ ಮಾಡುವುದಿಲ್ಲ ಎಂದೆ. ಕಮ್ ಟು ದ ಪಾಯಿಂಟ್ ಮಿಸ್ಟರ್. ಕಳುವು ಕೇಸಿನ ತನಿಖೆ ಯಾರು ಮಾಡುತ್ತಾರೆ ಎಂದಳು. ಎಸ್‌ಐ ಎಂದೆ. ಕಳ್ಳರನ್ನು ಯಾರು ಹಿಡಿಯುತ್ತಾರೆ ಎಂದಳು. ಎಸ್‌ಐ ಎಂದೆ. ಕಳ್ಳರನ್ನು ಯಾರು ನ್ಯಾಯಾಲಯಕ್ಕೆ ಹಾಜರು ಮಾಡುತ್ತಾರೆ ಎಂದಳು. ಎಸ್‌ಐ ಎಂದೆ. ನಮ್ಮ ಕಾಲೇಜಿನಲ್ಲಿ ಗಲಾಟೆಯಾದರೆ ಯಾರು ಮೊದಲು ಬರುತ್ತಾರೆ ಎಂದಳು. ಎಸ್‌ಐ ಎಂದೆ. ಹಾಗಾದರೆ ನೋಡು ಪೊಲೀಸ್ ಇಲಾಖೆಯ ಹೃದಯ ಭಾಗವಲ್ಲಿ ಇರುವವರೇ ಎಸ್‌ಐ. ನೀನು ಆ ಕೆಲಸ ಬಿಟ್ಟು ಐಪಿಎಸ್‌ಗೆ ಸೇರುತ್ತೀನಿ ಅಂತಿಯಲ್ಲ ಎಂದು ಮೂದಲಿಸಿದಳು.

ಇಷ್ಟು ಹೊತ್ತು ಶೋಭಾಳ ವಾದ ಸಹಿಸಿಕೊಂಡಿದ್ದ ನನಗೆ ಇನ್ನೂ ತಡೆಯಲಾಗಲಿಲ್ಲ.

ಶೋಭಾ ನೀನು ಸರ್ಫರೋಷ್ ಸಿನಿಮಾ ನೋಡಿದ್ದೀಯಾ ಎಂದು ಕೇಳಿದೆ. ಎಸ್ ಎಂದಳು. ಹೀರೋ ಯಾರು ಎಂದೆ. ಅಮೀರ್‌ಖಾನ್ ಎಂದಳು. ಅವನದು ಯಾವ ಪಾತ್ರ ಎಂದೆ. ಐಪಿಎಸ್ ಅಧಿಕಾರಿ – ಎಸಿಪಿ ಎನ್ನುವ ಹಾಗೆ ಕಾಣುತ್ತದೆ ಅಂದಳು. ಅಮೀರ್‌ಖಾನ್ ಏನು ಮಾಡಿದ ಎಂದೆ. ಸಿನಿಮಾದಲ್ಲಿ ಅವನು ಆತಂಕ ವಾದವನ್ನು ಬಗ್ಗು ಬಡಿದ ಎಂದಳು. ಕಂಪನಿ ಸಿನಿಮಾ ನೋಡಿದೆಯಾ ಎಂದು ಕೇಳಿದೆ. ಹೌದು ಎಂದಳು ಚಿತ್ರದ ಪೊಲೀಸ್ ಅಧಿಕಾರಿ ಯಾರು ಎಂದೆ. ಮೋಹನ್‌ಲಾಲ್ ಎಂದಳು. ಅವನ ಪಾತ್ರ ಯಾವುದು ಎಂದೆ. ಮುಂಬೈನ ಜಾಯಿಂಟ್ ಕಮೀಷನರ್ ಎಂದಳು. ಚಿತ್ರದಲ್ಲಿ ಅವನು ಏನು ಮಾಡಿದ ಎಂದೆ. ಮುಂಬೈನ ಭೂಗತ ಜಗತ್ತನ್ನು ಹೊಸಕಿ ಹಾಕಿದ ಎಂದಳು. ಈಗ ನೀನೇ ಹೇಳು ನಾನು ಪಿಎಸ್‌ಐ ಆಗಲೋ ಐಪಿಎಸ್ ಆಗಲೋ ಎಂದು ಕೇಳಿದೆ. ನೀನು ಏನು ಬೇಕಾದರೂ ಆಗು, ಮೊದಲು ಮಾನವನಾಗು, ಟಾಟಾ ಬೈ ಬೈ ಎನ್ನುತ್ತಾ ಹೊರಟು ಹೋದಳು. ನಾನು ನಾನೇ ಆದೆ. ಆಗಿದ್ದೇನೆ.



ನನ್ನ ಮಧುಮೇಹದ ರಜತ ಮಹೋತ್ಸವ

- ಡಾ|| ವಸಂತ ಅ. ಕುಲಕರ್ಣಿ

ಬರುವ ದೀಪಾವಳಿ ಅಮಾವಾಸ್ಯೆ ದಿನ ನನ್ನ ಮಧುಮೇಹಕ್ಕೆ ಇಪ್ಪತ್ತೈದುವರ್ಷ ತುಂಬುತ್ತದೆ. ಇಪ್ಪತ್ತಾರನೆಯ ವರ್ಷದಲ್ಲಿ ಮಧುಮೇಹ ಕಾಲಿರಿಸುತ್ತದೆ. ಇದು ನನ್ನನ್ನು ಸಕ್ಕರೆ ದ್ವೇಷಿಯನ್ನಾಗಿ ಮಾಡಿ 25 ವರ್ಷಗಳು ಕಳೆದಂತಾಯಿತು.

ದೀಪಾವಳಿ ಸಡಗರ ಸಂಭ್ರಮದಲ್ಲಿಯೇ - ಸಿಹಿ ಭಕ್ಷ್ಯಗಳ ಆಗರವೇ ಇರುವಾಗ ಮಧುಮೇಹ ನನ್ನಿಂದ ಸಿಹಿರುಚಿ ಸವಿಯುವ ಭಾಗ್ಯವನ್ನು ಕಸಿದು ಕೊಂಡಿದೆ. ಅದಕ್ಕಾಗಿ ವಿಶೇಷ ಧನ್ಯವಾದಗಳು.

ಆದರೆ ನಾನು ಪರಿತಪಿಸುವುದಿಲ್ಲ, ಮಧುಮೇಹ ನನ್ನೊಡನೆ ಸಿಹಿ ಬಾಳ್ವೆ ಮಾಡುತ್ತಿದೆ. ಒಮ್ಮೊಮ್ಮೆ ಅದು ನಾನು ಹೇಳಿದಂತೆ ಕೇಳುವುದು. ಇನ್ನೊಮ್ಮೆ ಅದು ಹೇಳಿದಂತೆ ನಾನೂ ಕೂಡಾ ಪರಿಪಾಲಿಸುವೆ. ಹೀಗಾಗಿ ಸಹಕಾರ ತತ್ತ್ವದ ಮೇಲೆ ಸಾಗಿರುವ ನಾವು - ಅನ್ಯೋನ್ಯರಾಗಿದ್ದೇವೆ. ಮಧುಮೇಹ ಸಕ್ಕರೆ ರೋಗ ವೆಂದು ತಿಳಿದಿರುವ ನಾವು ಅದು ಭೀಕರ ವ್ಯಾಧಿ- ಎಂದೂ ಭಯ ಭೀತರಾಗುವ ಪ್ರಮೇಯವೇ ಇಲ್ಲ, ನನಗೆ ಅದರ ಅಂಜಿಕೆಯೂ ಇಲ್ಲ, ಗೆಳೆಯರು ನಾನು ಹೇಗಿದ್ದೇನೆ ಎಂಬ ಕ್ಷೇಮ ಸಮಾಚಾರ ವಿಚಾರಿಸುವ ಬದಲು ನಿಮ್ಮ ಮಧುಮೇಹ - ಅರ್ಥಾತ್ ಡೈಯಾಬಿಟೀಸ್ ಹೇಗಿದೆ ಎಂದು ಮಾತಿಗೆ ಪೀಠಿಕೆ ಹಾಕುತ್ತಾರೆ. ಹೀಗಾಗಿ ಮಧುಮೇಹ ನನ್ನ ಆಪ್ತಮಿತ್ರನಾಗಿದ್ದಾನೆ. ನನ್ನವಳು ಚೇಷ್ಟೆಯಿಂದ ಅದು 'ನನ್ನ ಎರಡನೆಯ ಹೆಂಡತಿ' ಎಂದೂ ಮೂದಲಿಸುತ್ತಾಳೆ. ಆದರೆ ಅವಳೂ ಕೂಡಾ ಮಧುಮೇಹಿಯಾಗಿರುವುದರಿಂದ ಸಾಕಷ್ಟು ಮುತವರ್ಜಿವಹಿಸುತ್ತಾಳೆ. 'ಗಂಡ-ಹೆಂಡತಿ' ಇಬ್ಬರು "ಸತಿಪತಿ ಒಂದಾದೊಡೆ ಶಿವನು ಮೆಚ್ಚುವನು" ಅಂದ ಮೇಲೆ ನಮ್ಮ ದಾಂಪತ್ಯ ರಥ ಸರಾಗವಾಗಿ ಸಾಗಿದೆ. ಆದರೆ 'ಸಕ್ಕರೆ' ನಮ್ಮ ಅಡುಗೆ ಮನೆಯಿಂದ ಪಲಾಯನಗೊಂಡಿದೆ. ಅದರ ಸ್ಥಾನವನ್ನು "ಸಿಹಿ ಸ್ವಾದ ಉಂಟು ಮಾಡುವ ಗುಳಿಗೆಗಳು ಆಕ್ರಮಿಸಿವೆ. ಮಧುಮೇಹ ಎರಡನೆಯ ಹೆಂಡತಿ ಎಂದು ಹೇಳಿದೆಯಲ್ಲಾ! ಒಮ್ಮೊಮ್ಮೆ ನನಗೆ ಮಾರಿಯಾದ ಪ್ರಸಂಗಗಳು ನಡೆದಿವೆ. ಎಡವಿದಾಗ ಎಚ್ಚರಿಸಿ ಸರಿಪಡಿಸುತ್ತಾಳೆ! ನನ್ನ ನಾಲಿಗೆಯ ರುಚಿಯನ್ನು ಸಂಪೂರ್ಣ ಬದಲಾಯಿಸಿದೆ. ಸಕ್ಕರೆ ತಿಂದರೂ ಈಗ ಅದು ಕಹಿ ಹತ್ತುತ್ತದೆ. ಕಹಿ ವಸ್ತುವನ್ನು ಸಿಹಿ ಮನೋಭಾವದಿಂದ ಸ್ವೀಕರಿಸುವ ಮನೋಭಾವನೆ ಬೆಳಸಿದೆ. ನನ್ನ ಕಣ್ಣು ಕಿವಿ, ಕಾಲು ಎಲ್ಲ ಅಂಗಗಳೂ ಸದೃಢವಾಗಿವೆ. ಅಂದಮೇಲೆ ಮಧುಮೇಹಕ್ಕೆ ಕೃತಜ್ಞತೆ ಅರ್ಪಿಸುವ ಒಂದು ಸಮಾರಂಭ ಬೇಡವೇ? ನನ್ನನ್ನು 25 ವರ್ಷ ಬದುಕಿಸಿ ಬಾಳಿನಲ್ಲಿ ಹೊಂದಾಣಿಕೆ ಮಾಡುವ ಕಲೆಯನ್ನು ಕಲಿಸಿದ 'ಮಧುಮೇಹ'ವನ್ನು ಮನತುಂಬಿ ನೆನೆಯಲೇ ಬೇಕು. ಇದೆಂಥ ಸಡಗರ ಎಂದು ನೀವು ಹುಬ್ಬೇರಿಸಬಹುದು, ಇದು ಸಡಗರವೂ ಹೌದು - ಸಂಭ್ರಮವೂ ಹೌದು. ಅದಕ್ಕಾಗಿ ಮಧುಮೇಹಕ್ಕೆ 25 ತುಂಬಿದ ಸಂದರ್ಭದಲ್ಲಿ ರಜತ ಮಹೋತ್ಸವ ಏರ್ಪಡಿಸಿದ್ದೇನೆ. ಸುಮಾರು ಮೂರು ದಶಕಗಳ ಹಿಂದೆ ನನ್ನ ಹೆಣ್ಣು ಮಗು

ಮುಂಬಯಿಯ ಕೆ ಇ ಎಂ ಆಸ್ಪತ್ರೆಗೆ ಸೇರಿಸಿದಾಗ ಅಲ್ಲಿದ್ದ ಡಾಕ್ಟರರು ನನ್ನನ್ನೂ ನನ್ನ ಶ್ರೀಮತಿಯನ್ನೂ ಪರೀಕ್ಷಿಸಿ ಮಧುಮೇಹ ಬರಬಹುದೆಂದು ಎಚ್ಚರಿಸಿದ್ದರು. ಬಹುಶಃ ನಮ್ಮಿಬ್ಬರ 'ಜಾತಕ'ವನ್ನು ಆದರ ತನಿಖೆಯಲ್ಲಿ ಕಂಡಿರಬೇಕು.

ನನ್ನ ಸ್ಥೂಲಕಾಯ ಕಾರಣವಾಗಬಹುದೆಂದು ಅನುಮಾನಿಸಲಾಗಿತ್ತು. ಸಕ್ಕರೆ ಬೆಲೆ ಗಗನಕ್ಕೇರಿರುವುದರಿಂದ ಮಧುಮೇಹ ಬಂದರೂ ಒಳಿತು - ಎಂದು ನಗೆಯಾಡಿದ್ದೆ. ನಮ್ಮ ಮೈಯಲ್ಲಿ ಒಂದು ಚಿಕ್ಕ ಕಾರ್ಖಾನೆ ಸಿದ್ಧವಾಗುತ್ತಿದ್ದು ಅದು ಸಕ್ಕರೆ ತಯಾರಿಸುತ್ತದೆ. ನಾನು ಫ್ಯಾಕ್ಟರಿಯ ಮಾಲಿಕ - ಶ್ರೀಮಂತ ಮಾಲಿಕನಾಗುವನೆಂದು ಚೇಷ್ಟೆಮಾಡುತ್ತಿದ್ದೆ. ನನ್ನ ತಾಯಿ ನನ್ನ ಸೋದರ ಅಕ್ಕ - ತಂಗಿ ಎಲ್ಲರೂ ಮಧು-ಮೇಹಿಗಳಾಗಿರುವಾಗ ಈ ಅನುವಂಶಿಕ ಬಳುವಳಿ ನನ್ನನ್ನು ಬಿಟ್ಟೀತೇ? ಆಗಾಗ ನೀರಡಿಕೆ - ಸುಸ್ತು - ಅತೀಹಸಿವೆ - ಹಾಗೂ ಮೇಲಿಂದ ಮೇಲೆ ಮೂತ್ರ ವಿಸರ್ಜನೆ ಲಕ್ಷಣಗಳ ಅಸ್ತಿತ್ವ ಕಂಡಾಗ ಗೆಳೆಯ ಡಾ॥ಪಾಂಡುನ ಬಳಿ ಹೋದೆ, ಹಲವಾರು ವರ್ಷಗಳಿಂದ ನೂರಾರು ವೈದ್ಯ ವಿದ್ಯಾರ್ಥಿಗಳಿಗೆ ಪಾಠ ಮಾಡಿದ ಪ್ರಾಧ್ಯಾಪಕನ ಪರಿಸ್ಥಿತಿಯೇ ಈ ರೀತಿಯಾದಾಗ ಉಳಿದವರ ಪಾಡೇನು? ಅಂದು ಸಂಪೂರ್ಣ ತನೀಖಾ ಪರೀಕ್ಷೆಯಲ್ಲಿ ಮಧುಮೇಹದ ಪ್ರಥಮ ಪರಿಚಯವಾಯಿತು.

'ಡಾಕ್ಟರರೇ ನಿಮಗೇಕೆ ಮಧುಮೇಹ' ಎಂದು ಕೇಳಿದ ಭೂಪರಿಗೆ ನೇರವಾಗಿ ಉತ್ತರಿಸುವೆ 'ಯಾಕ್ರಿ ಸಾಹೇಬ್ರ ಡಾಕ್ಟರರನ್ನು ಮನುಷ್ಯರೊಳಗೆ ಜಮಾ ಹಿಡಿದಿಲ್ಲೇನು?' ಎಂಬ ಮಾತಿಗೆ ಕೇಳಿದವ ತಣ್ಣನಾಗುತ್ತಾನೆ.

ಅದೇ ನನ್ನ ಸಂಗಾತಿಯಾದ ಮಧುಮೇಹಕ್ಕೆ 25 ವರ್ಷ. ನನ್ನ ಯಶಸ್ವಿ ಬಾಳಿನ ನೆನಪಿಗಾಗಿ ರಜತ ಮಹೋತ್ಸವ ಸಮಾರಂಭವನ್ನು ಏರ್ಪಡಿಸಬೇಕೆಂದಿದ್ದೇನೆ. ಭರ್ಜರಿ ಔತಣಕೂಟ ಏರ್ಪಡಿಸುವೆ. ಕಾರಣವಿಷ್ಟೆ ಹಿತಮಿತ ಕಡಿವಾಣವಿಟ್ಟುಕೊಂಡ ಜೀವನದೊಡನೆ "ಮಧುಮೇಹ" ಇಪ್ಪತ್ತೈದು ವರ್ಷ ಬಾಳ್ವೆ ಮಾಡಿದೆ ಎಂಬುದನ್ನು ಈ ಸಮಾರಂಭದ ಮೂಲಕ ಸಾಬೀತು ಪಡಿಸಬೇಕಾಗಿದೆ. ನನಗೆ ಸೂಕ್ತ ಸಲಹೆ ಪುಕ್ಕಟೆ ಉಪಚಾರ ನೀಡಿದ ನನ್ನ ಗೆಳೆಯ ಡಾಕ್ಟರ್ ಮಂಡಳಿಯನ್ನು ಆಮಂತ್ರಿಸುವೆ, ಇನ್ನೂ ಬದುಕಿದಿಯಾ ವೈದ್ಯ ಜೀವಿ ಎನ್ನುವ ಉಭಯಕುಶಲೋಪರಿ ಮಾತುಗಳನ್ನಾಡುವ ದೇಶಾವರಿ ಮಿತ್ರರರನ್ನು ಮಧುಮೇಹ ಸಾಹಿತ್ಯ ಓದಲು ನೀಡಿದ ನನ್ನ ಲೇಖಕ ಬಳಗವನ್ನು ಆಹ್ವಾನಿಸಿ ಸಮೀಚಿನ ಸಿಹಿ ಭಕ್ಷ್ಯಗಳನ್ನು ಉಣಬಡಿಸಬೇಕೆಂದಿದ್ದೇನೆ. ನನಗೆ ಇಲ್ಲದ ಸಿಹಿ ಭೋಜನದ ಭಾಗ್ಯ ಇನ್ನಿತರರಿಗೆ ಕಹಿಯಾಗದಿರಲಿ ಎಂದೂ ಹಾರೈಸಿ ಭರ್ಜರಿ ಪಾರ್ಟಿ ಆರಂಭವಾಗುವ ಮುನ್ನ ಒಂದು ಸುದೀರ್ಘ ಉಪನ್ಯಾಸದಲ್ಲಿ ನನ್ನ ಅನುಭವದ ಮೂಟೆ ಬಿಚ್ಚುವೆ.

ಡಾ॥ ಪಾಟೀಲ ಪುಟ್ಟಪ್ಪನವರು ತಮ್ಮ 'ಪ್ರಪಂಚ' ವಾರ ಪತ್ರಿಕೆಯಲ್ಲಿ ಬರೆಯುತ್ತಾರೆ 'ಜನರು ಉಪದೇಶವನ್ನು ಧಾರಾಳವಾಗಿ ಕೊಡುವಂತೆ ಬೇರೆ ಏನನ್ನೂ ಕೊಡುವುದಿಲ್ಲ.' ಈ ಮಾತು ನನ್ನ ಮಧುಮೇಹದ ಬಗ್ಗೆ ದಿಟವಾಗಿದೆ.

ಮಧುಮೇಹಕ್ಕೆ ಕಡಿವಾಣ ಹಾಕಲು ವ್ಯಾಯಾಮ ಇಲ್ಲವೇ ವಾಯು ವಿಹಾರ ಸೂಕ್ತ

ಎಂದು ನನ್ನ ಆಪ್ತ ಮಿತ್ರನೊಬ್ಬ ಪದೇ ಪದೇ ಹೇಳಿ ಅದನ್ನು ಪಾಲಿಸದೇ ಹೋದ. --ಯೋಗ ಇದಕ್ಕೇ ತಕ್ಕ ಮದ್ದು ಎಂದು ಯೋಗ ಶಾಸ್ತ್ರದ ಕೇವಲ ಪುಸ್ತಕ ಓದಿ ನನ್ನ ತಲೆ ಕೊರೆಯುವ ಮಿತ್ರನಿದ್ದ. --ಆಹಾರದ-ಪಥ್ಯದ ಬಗ್ಗೆ ನನ್ನ ಹಲವಾರು ಡಾಕ್ಟರರು ಪುಸ್ತಕಗಳನ್ನು ಪುಕ್ಕಟೆ ನೀಡಿ ಆಗಾಗ ಫೋನಿನಲ್ಲಿ ಗಂಟೆ ಗಟ್ಟಲೆ ಓದಿದ್ದನ್ನೆಲ್ಲ ಹೇಳುತ್ತಾರೆ------ ಆದರೆ ಈಗ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆಯೆಂದರೆ ಎದುರಿಗೆ ಬರುವ ಪರಿಚಯದವ ಮಧುಮೇಹದ ಬಗ್ಗೆ ಏನು ವಿಚಾರಿಸುತ್ತಾನೋ ಎಂಬ ಭಯ-ದುಗುಡ ಆವರಿಸುತ್ತದೆ.

ಮಧುಮೇಹದ ಯಶಸ್ವಿ ಜೀವನದ ಸಿಂಹಪಾಲು ನನ್ನ ಅರ್ಧಾಂಗಿಯದು. ಅವಳ ಕಟ್ಟು ನಿಟ್ಟಿನ ಉಸ್ತುವಾರಿಯಿಂದ ಅಡುಗೆ ಮನೆಯಲ್ಲಿ ಸಕ್ಕರೆ ಮೂಲೆ ಗುಂಪಾಗಿದೆ. ಮಧುಮೇಹ ಆಹಾರ ಪಥ್ಯದ ಬಗ್ಗೆ ನನಗಿಂತಲೂ ಹೆಚ್ಚಾಗಿ ಅಭ್ಯಸಿಸಿದವಳು ನನ್ನವಳು.

ನನ್ನ ಮಧುಮೇಹದ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಮನೆಯ ಅಧಿ ದೇವತೆ ಹಾಗೂ ಸಂಕಟ ಪರಿಹಾರಕ ಶ್ರೀ ಸತ್ಯನಾರಾಯಣ ದೇವರ ಪೂಜೆ ಇಲ್ಲದೆ ನಡೆಯಲು ಸಾಧ್ಯವೇ? ಸಕ್ಕರೆ ರಹಿತ ಪ್ರಸಾದ ನೈವೇದ್ಯ ಮಾಡಬೇಕೆಂದು ಸಂಕಲ್ಪಿಸಿದ್ದೇನೆ ಕಾರಣ ನಮಗಿರದ 'ಸಿಹಿಭಾಗ್ಯ' ನಮ್ಮ ಅಧಿದೇವರಿಗೇಕೆ? ಈ ವಿಚಾರ ನನ್ನವಳ ಮುಂದೆ ಪ್ರಸ್ತಾಪಿಸಿದಾಗ ಅಸಮ್ಮತಿ ಸೂಚಿಸುತ್ತಾ ನಮ್ಮ ಕೋಪ ತಾಪ ದೇವರ ಮೇಲೇಕೆ ಎಂದು ನುಡಿದಳು. ಮುಖ್ಯವಾಗಿ ಪೂಜೆಗೆ ಬರುವ ಪುರೋಹಿತರು ಕೂಡಾ ದೀರ್ಘ ಮಧುಮೇಹಿ. ಅದಕ್ಕೆ ಅವರು ದೀರ್ಘಾಯುಷಿ ಭವ ಎಂದು ಎಲ್ಲರನ್ನು ಆಶೀರ್ವದಿಸುತ್ತಾರೆ.

ಈ ರಜತ ಮಹೋತ್ಸವ ಶಾಮಿಯಾನ ಹಾಕಿ ಮಾಡುವ ಸಮಾರಂಭವಲ್ಲ, ಒಂದು ಆಸ್ಪತ್ರೆಯ ವಾರ್ಡ್‌ನಲ್ಲಿಯೇ ಏರ್ಪಡಿಸುವೆ. ಮುಖ್ಯ ಅತಿಥಿಗಳು ನನ್ನ ಮಧುಮೇಹದ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಅದರ ಹತ್ತು ಹಲವು ಸಮಸ್ಯೆಗಳ ಬಗ್ಗೆ ನನ್ನ ತಲೆ ಕೊರೆಯುತ್ತಾ ಬಂದಿರುವ ಶಿಕ್ಷಕ ಮಹಾಶಯರು. ಅವರು ಶಿಕ್ಷಕ ವೃತ್ತಿಯೊಡನೆ ವಿವಿಧ ವೈದ್ಯ ಪದ್ಧತಿ ಹಾಗೂ ಔಷದೋಪಚಾರಗಳ ಬಗ್ಗೆ ಕೇವಲ ಪುಸ್ತಕಗಳ ಹುಳ ಅವರ ಅರೆ ಬೆಂದ ವಿಚಾರಗಳನ್ನು ಹೇಳುವ ಚಟ ಹೇಳತೀರದು. ಯಾರಾದರೂ ಭೇಟಿಯಾದರೂ ಸಾಕು ರಾಜಕಾರಣದಿಂದ ಹಿಡಿದು ತರಕಾರಿಯ ಬಗ್ಗೆ ಯಾವುದೇ ವಿಷಯವೆತ್ತಿದರೂ ಸಾಕು ಅದನ್ನು ಮಧುಮೇಹಕ್ಕೆ ತಂದು ಮಂಗಳ ಹಾಡುತ್ತಾರೆ. ಆದರೆ ಕೇಳಲು ತಾಳ್ಮೆ ಬೇಕು. ಇವರದೋ ಅಲೋಪಥಿಯೇ, ಹೋಮಿಯೋಪಥಿಯೇ, ಎಂದು ಕೇಳಿದರೆ ಇವರದು ತನ್ನದೇ ಆದ 'ಪಥಿ'. ಇವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಬೇಕೆಂದಿದ್ದೇನೆ. ನಾನು ವೈದ್ಯ ಕಾಲೇಜಿನಲ್ಲಿ ಓದುತ್ತಿದ್ದಾಗ ಮಧುಮೇಹ ಕುರಿತು ಅನೇಕ ಪೇಶೆಂಟುಗಳು ಒದ್ದಾಡುವ ಸ್ಥಿತಿಯನ್ನು ಕಂಡಾಗ 'ಮಧುಮೇಹ' ಕುರಿತು ಗಂಭೀರವಾಗಿ ಆಲೋಚಿಸುತ್ತಿದ್ದೆ, ಆದರೆ ಈಗ ನನಗೆ ಆ ಮಧುಮೇಹ ಪ್ರೀತಿ ಆವರಿಸಿದಾಗ ಅದರ ಬಗ್ಗೆ ಮೃದುಭಾವನೆ ಮೂಡಿದೆ. ಒಮ್ಮೊಮ್ಮೆಯಂತು ನಮ್ಮನ್ನು ಆತಂಕಕ್ಕೆ ದೂಡುವ ಸಲ್ಲದ ವಿಚಾರಗಳು-ಅನವಶ್ಯಕ ಚಿಂತೆಗಳು-ವಿಪರೀತ ಕಲ್ಪನೆಗಳು-ಭ್ರಮೆಗಳು-ಸಕ್ಕರೆ ಪ್ರಮಾಣವನ್ನು ರಕ್ತದಲ್ಲಿ ಗಗನಕ್ಕೇರಿಸುತ್ತವೆ. ಯೋಗದಂಥ ವರದಾನವಿದ್ದು ಅದರ ಅನುಷ್ಠಾನವು

ಮನೋಶಾಂತಿಯನ್ನು ನೀಡುವುದರ ಜೊತೆಗೆ ಸಕ್ಕರೆಯನ್ನು ಹಪೋಟಿಯಲ್ಲಿಟ್ಟು 'ಮಧುಮೇಹಕ್ಕೆ' ತಾಕೀತು ಮಾಡುತ್ತದೆ. ನಾನು ಮತ್ತು ನನ್ನ ಶ್ರೀಮತಿ ಕಂಡು ಕೊಂಡ ಈ ಲಾಭದ ವಿಚಾರವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ 'ಮಧುಮೇಹದ ಸಾರಾಸಾರ ವಿಚಾರ' ಎಲ್ಲರಿಗೂ ಹೇಳಿ ರಜತ ಮಹೋತ್ಸವದ ಗುಟ್ಟನ್ನು ಹಂಚಿಕೊಳ್ಳಬೇಕೆಂದಿದ್ದೇವೆ.

ಎಲ್ಲ ಮಧುಮೇಹಿಗಳಿಗೆ ಸಮಾರಂಭದಲ್ಲಿ ಅಗ್ರಸ್ಥಾನ. ಅದು ಅಲ್ಲದೆ ಒಂದು ಸಂಸ್ಮರಣ ಸಂಪುಟ ಹೊರ ತರದಿದ್ದರೆ ಕಾರ್ಯಕ್ರಮ ಅಪೂರ್ಣ. ಮಧುಮೇಹಿ ಔಷಧ ಕಂಪನಿಗಳಿಂದ ಮುಕ್ಕಾಲು ಪಾಲು ಜಾಹೀರಾತು ಹಾಕಿ-ಒಕ್ಕಾಲು ಪಾಲು ನನ್ನ ಅನುಭವದ ಸಮಗ್ರ ಸಂಗತಿಗಳನ್ನು ಬರೆದು- 'ಶತಾಯುಷಿ-ಮಧುಮೇಹಿ-ಚಿರಾಯು' ಎಂಬ ನೆನಪಿನ ಹೊತ್ತಿಗೆ ಹೊರತರಲಿರುವೆ. ಮಧುಮೇಹದ ಬಗ್ಗೆ ಅಲಕ್ಷ್ಯ ಮಾಡಿ ಕಾಲು ಕಳೆದು ಕೊಂಡ ಮಿತ್ರನಿಗೆ-- ಮಧುಮೇಹವಿದ್ದಾಗ ಸಕ್ಕರೆಯನ್ನೇ ಆಹಾರವಾಗಿಟ್ಟು ಕೊಂಡು ಪರಂಧಾಮಗೈದ ಸ್ನೇಹಿತನಿಗೆ ಸಕ್ಕರೆ ತಿನ್ನು ಅದಕ್ಕೇನಾಗತದs ಎಂದು ಉಪದೇಶಿಸಿ ಅದೇ ಉಪದೇಶದಿಂದಲೇ ಕಣ್ಣು ಮುಚ್ಚಿದ ಗುರುಗಳಿಗೆ- ಸಿಹಿ ಚಟ ಬಿಡದ ಮಧ್ಯಪಾನದಲ್ಲಿಯೇ ಸ್ವರ್ಗಕಂಡ'' ಮಹಾನುಭಾವರಿಗೆ-- ಈ ಸಂಪುಟ ಅರ್ಪಿಸಿ ಗೌರವಾಂಜಲಿ ಸಲ್ಲಿಸುವೆ.

ಉಪದೇಶ ಪರ ಮಾತುಗಳನ್ನು ಪುಕ್ಕಟೆಯಾಗಿ ನೀಡಿದ ಜನರನ್ನು ಈ ಸಂದರ್ಭದಲ್ಲಿ ಮರೆಯಲು ಸಾಧ್ಯವೇ? ಅವರ ಮುಂದೆ ನನಗೆ ನಾನೇ ಗುರು ಎಂದು ಸಾರಿ ಸಾರಿ ಹೇಳುವವನಿದ್ದೇನೆ.

ದೇಹದಲ್ಲಿ ಅವಿತುಕೊಂಡಿರುವ ಗುಪ್ತ ರಾಕ್ಷಸ ಎಂಬ ಮಾತಿಗೆ ಹಲವಾರು ರೋಗಿಗಳೇ....ಸಾಕ್ಷ್ಯಗಳಾಗಿರುವಾಗ ಈ ಮಾತು ಮತ್ತಷ್ಟು ನಿಜವೆನಿಸುತ್ತಿತ್ತು. ಮೂತ್ರಪಿಂಡ, ಅಕ್ಷಿಪಟಲ, ಹಾಗೂ ನರಜಾಲವನ್ನು ಗೊತ್ತಿಲ್ಲದಂತೆ ಕಬಳಿಸುವುದು. ಕೆಲ ಮಧುಮೇಹಿಗಳು ದೃಷ್ಟಿ ಕಳೆದುಕೊಂಡು ಕತ್ತಲೆಯ ಕೂಪದಲ್ಲಿದ್ದಾರೆ. ಮೂತ್ರಪಿಂಡದ ಸೋಂಕನ್ನು ಅನುಭವಿಸಿ ಯಮಸದನಕ್ಕೆ ಕೆಲವರನ್ನು ಅಟ್ಟಿಯಾಗಿದೆ. ನರಗಳ ವಿಕಾರಗಳಂತೂ ವಿರೂಪ ತಂದಿವೆ. ಈ ದೃಷ್ಟಾಂತಗಳು ನನಗೆ ಭಯತಂದು ಮಧುಮೇಹದ ಬಗ್ಗೆ ಆತ್ಮೀಯ ಭಕ್ತಿ ಹುಟ್ಟಿಸಿ ಸ್ನೇಹಿತನನ್ನಾಗಿ ಮಾಡಿದೆ. ಅತಿಯಾದ ಬಾಯಾರಿಕೆ, ಅತೀ ಹಸಿವೆ ಮತ್ತು ಸುಸ್ತು ಈಗ ನನ್ನಿಂದ ಬಲು ದೂರ. ಮುಖ್ಯವಾಗಿ ನನಗಿರುವ ತಾಳ್ಮೆಯಿಂದ ಈ ಲಕ್ಷಣಗಳಂತೂ ಎಂದೋ ಮಾಯವಾಗಿವೆ.

ಕಟ್ಟುನಿಟ್ಟಾದ ವೈದ್ಯರು ಬೋಧಿಸಿದ ಆಹಾರ ಅನುಕ್ರಮವೇ ಸೂಕ್ತ. ಅವರ ಔಷಧ ವಿಧಿ ಸಿದರ ಬಗ್ಗೆ ಆಗಾಗ ಸಮಾಲೋಚನೆ ಅಗತ್ಯ. ಮೇಲಿಂದ ರಕ್ತದಲ್ಲಿರುವ ಸಕ್ಕರೆ ಮಟ್ಟದ ಪರೀಕ್ಷೆ - ಕಾರಣ ಸಕ್ಕರೆಯ ಮಟ್ಟ ಏರಿದರೂ ಸಮಸ್ಯೆ ಇಳಿದರೂ ಸಮಸ್ಯೆ. ಆದೊಂದು ಸೆಡವುಗೊಂಡ ಅಳಿಯನ ತರಹ ಎಂದೂ ಹೇಳುತ್ತಾರೆ. ಏನೇ ಮಾತನಾಡಿದರೂ ಅಳಿಯನು ಹತ್ತನೆಯ ಗ್ರಹವಲ್ಲವೆ? ಹಾಗೇ ಇದು ಕೂಡಾ ಗ್ರಹ ಆದರೆ ನಾವು ಹೇಳುವಂಥ 'ಮಧುಗ್ರಹ'ವಲ್ಲವೇ ಇದು.

ಮುಖ್ಯವಾಗಿ ಮಧುಮೇಹದ 'ರಾಮಬಾಣ' ಅಂದರೆ ಹತೋಟಿಯಲ್ಲಿಡುವುದು. ಸಕ್ಕರೆಯ ದ್ವೇಷಿ – ಇನ್ಸುಲಿನ್ ಎಂಬ ದಿವ್ಯೌಷಧಿಯನ್ನು ಕಂಡು ಹಿಡಿದ – ಮಹಾನ್ ವಿಜ್ಞಾನಿಗಳಾದ 'ಬ್ಯಾಟಿಂಗ್'(ಗುರು) ಮತ್ತು 'ಬೆಸ್ಟ' (ಶಿಷ್ಯ) ಅವರ ಭಾವ ಚಿತ್ರಗಳನ್ನು ವೇದಿಕೆಯ ಮೇಲೆ ತೂಗು ಹಾಕಿ ಗೌರವ ಅರ್ಪಿಸುವೆ.

ಅವರು ಕಂಡು ಹಿಡಿದ 'ಇನ್ಸುಲಿನ್' ಕೂಡಾ ಕೇವಲ ಸೂಜಿ ಮದ್ದಿನ ಮಾರ್ಗದಲ್ಲಿ ದೇಹ ಸೇರುವ ಔಷಧ ಅದರ ಮಾತ್ರೆಗಳು ಇನ್ನೂ ಲಭ್ಯವಿಲ್ಲ.

ಬ್ಯಾಟಿಂಗ್ ಗುರು ಅವನ ಮಾರ್ಗದರ್ಶನದಲ್ಲಿ ಶಿಷ್ಯ 'ಬೆಸ್ಟ್' ಸಂಶೋಧನೆ ಮಾಡಿದ. 'ಇನ್ಸುಲಿನ್' ಎಂಬ ಜೀವ ಉಳಿಸುವ ಔಷಧ ಕಂಡು ಹಿಡಿದು ಜಗತ್ತಿಗೆ ಮಹದುಪಕಾರ ಮಾಡಿದರು. ಆದರೆ ನೊಬೆಲ್ ಪಾರಿತೋಷಕ ಬ್ಯಾಂಟಿಂಗ್ ಗುರುವಿಗೆ ಬಂದ ವಿಚಾರವನ್ನು ವಿವರಿಸಲಿರುವೆ.

ಆ ಮಹಾನ್ ವಿಜ್ಞಾನಿಗಳು ಇನ್ಸುಲಿನ್ ಕಂಡು ಹಿಡಿದು ಇಂದಿಗೆ 90 ವರ್ಷಗಳಾಗುತ್ತ ಬಂದಿದೆ. ಮಧುಮೇಹಿ ರೋಗಿಗಳಿಗೆ ಅದು ಸಂಜೀವಿನಿಯಾಗಿದೆ. ಇದೇ ಸಂದರ್ಭದಲ್ಲಿ ನನ್ನ ಮಧುಮೇಹಕ್ಕೂ ರಜತ ಮಹೋತ್ಸವ ಭಾಗ್ಯ ಒದಗಿ ಬಂದಿದೆ. ಈಗ 64ರಲ್ಲೂ ನಾನು ನಿತ್ಯ ಚೈತನ್ಯಯುಕ್ತವಾಗಿದ್ದು ವೈದ್ಯ ಕಾಲೇಜಿನ ಉನ್ನತ ಹುದ್ದೆಯಲ್ಲಿದ್ದು ಮಕ್ಕಳಿಗೆ ಪಾಠ ಮಾಡುವೆ. ಅದಕ್ಕಾಗಿ ನನ್ನ ಸಹಧರ್ಮಿಣಿಗೂ ನನ್ನ ಮಧುಮೇಹಕ್ಕೂ ಕೃತಜ್ಞನಾಗಿರುವೆ.

ಬನ್ನಿ ತಾವೆಲ್ಲರೂ ಭರ್ಜರಿ ಭೋಜನ ಕೂಟದಲ್ಲಿ ಪಾಲ್ಗೊಂಡು ನನ್ನ ಮಧುಮೇಹವನ್ನು ಅಭಿನಂದಿಸಿ ಹಾರೈಸಿ ನೀವೂ ಮಧುಮೇಹಿಗಳಾಗಿದ್ದರೆ ನಿಮಗೊಂದು ಪ್ರತ್ಯೇಕ ವಿಜಾಪುರದ ಗಂಡು ಶೈಲಿಯ ಊಟ ಪಥ್ಯದ ಬಿಳಿ ಜೋಳದ ರೊಟ್ಟಿ ರುಚಿಯಾದ ಮೊಸರು ಶೆಂಗಾ ಚಟ್ನಿ ಬದನೆಕಾಯಿ ಪಲ್ಯ ಈಗ ನಿಮ್ಮ ಬಾಯಲ್ಲಿ ನೀರೂರಿರಬಹುದು ಆದರೆ ಆಗ ದೀಪಾವಳಿಯ ಸಡಗರ ಎಲ್ಲೆಡೆಗೆ ಆದರೆ ಒಂದು ಮಾತು ಮಧುಮೇಹಿಗೆ ತನ್ನ ಅನುಭವ ಆಚಾರ ವಿಚಾರಗಳೇ ಗುರು ಹಾಗೂ ಡಾಕ್ಟರೇ ಕಾರಣ. ಪ್ರತಿಯೊಂದು ವ್ಯಕ್ತಿಗೂ 'ಮಧುಮೇಹ' ತನ್ನಂತರಂಗವನ್ನು ಬದಲಾಯಿಸುತ್ತದೆ. ಕಾರಣ ಇದು 'ವ್ಯಕ್ತಿನಿಷ್ಠ'ವಾದ ರೋಗವಲ್ಲವೇ? ಕ್ಷಮಿಸಿ ಇದು ರೋಗವೇ ಅಲ್ಲ. ಇದೊಂದು ರಸದೂತ ಕೊರತೆಯೇ ಕಾರಣ. ಇದನ್ನೆಲ್ಲ ನನ್ನ ಮಧುಮೇಹದ ರಜತ ಮಹೋತ್ಸವದಲ್ಲಿ ಬಿಂಬಿಸಬೇಕಾಗಿದೆ. ದೀಪಾವಳಿ ಅಮಾವಾಸ್ಯೆ ದಿನದಂದು ಈ ರಜತ ಮಹೋತ್ಸವಕ್ಕೆ ಖಂಡಿತ ಬನ್ನಿ. ಆಮಂತ್ರಣ ಕಳಿಸುವೆ. ಖಂಡಿತ ಕಾಣಿಕೆಗಳು ನಿಷಿದ್ಧ ಆದರೆ ಸಕ್ಕರೆ ನಿಯಂತ್ರಕ ಮಾತ್ರೆ–ಇನ್ಸುಲಿನ್–ಪಥ್ಯ ಆಹಾರ–ಪ್ಯಾಕೇಟ್ ನೀಡಿದರೆ ಅಡ್ಡಿಯಿಲ್ಲ. ಅದು ತಮಗೆ ಬಿಟ್ಟ ವಿಚಾರ---


ನಾನು ಇಪ್ಪತ್ತೈದು ವರ್ಷಗಳಿಂದ ಒಂದಿಲ್ಲೊಂದು ಡಯಾಬಿಟೀಸ್ ಉಪಚರಿಸಲು ಹಲವಾರು ವಿಧಾನಗಳನ್ನು ಕಂಡು ಕೊಂಡಿದ್ದೇನೆ. ಮಧುಮೇಹ ಸಾಹಿತ್ಯವನ್ನು ಆಳವಾಗಿ ಓದಿದ್ದೇನೆ. -----ಹಲವಾರು ಇನ್ಸುಲಿನ್ ಇಂಜೆಕ್ಷನ್‌ಗಳು ಅನೇಕ ಗುಳಿಗೆಗಳು, ಕಷಾಯಗಳು, ಗಿಡ ಮೂಲಿಕೆಗಳ ಪುಡಿಗಳು, ಆಹಾರ ಪಥ್ಯದ ಸಾಹಿತ್ಯ---ಹೀಗೆ

ನೂರಾರು ಪ್ರಯೋಗಗಳ ವಿಚಾರಕ್ಕೆ ಶರಣಾಗಿದ್ದೇನೆ. ಆದರೂ ನಾನು 63ರ ತರುಣ. ಸಮಾರಂಭದಲ್ಲಿ ಈ ಎಲ್ಲ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸುವೆ. ಖಂಡಿತ ಭೇಟಿ ಕೊಡಿ, ನಿಮಗೆ ಗೊತ್ತಾಗುವುದು ಡಯಾಬಿಟೀಸಸ ಪ್ರಲಾಪ. ನಾನು ನಿತ್ಯ ಸುಖಿ. ನಿತ್ಯ ಕ್ರಿಯಾಶೀಲ. ಒಮ್ಮೊಮ್ಮೆಯಂತು ನನ್ನಲ್ಲಿ ಮಧುಮೇಹ ಇದೆಯೆಂಬುದನ್ನು ಮರೆತಿರುವೆ.

ದಯವಿಟ್ಟು ಬರಬೇಕು ನನ್ನಪ್ರಥಮ ಅನುಭವದ ಕವನ 'ಮಧುಮೇಹದೊಡನೆ ಮಧುಚಂದ್ರ' ಓದಿ ತಮಗೆ ದೀಪಾವಳಿಯ ಶುಭಾಶಯ ಕೋರುವೆ.

ಸಿಂಗಲ್ ಸೆಲ್ ಫೋನ್

ಸರಿಯಾಗಿ ಕೇಳಿಸ್ತಾ ಇಲ್ಲ
ವಿಭಜನೆ ಆಗ್ತಾ ಇದ್ದೀಯಾ?



ಕಾಲರ್ - ಆಯ ತಸ್ಮೈ ನಮಃ

- ಶ್ಯಾಮಲ ರವಿಶಂಕರ್

ಒಂದಾನೊಂದು ದಿನ ಬೆಳಿಗ್ಗೆ ಏಳುತ್ತಿದ್ದಂತೆ ನನ್ನ ಸುತ್ತಲಿರುವ ಗೋಡೆ, ಗೂಡು, ಗಡಿಯಾರ ಇತ್ಯಾದಿಗಳು, ಗ್ರಹಗಳು ಸೂರ್ಯನ ಸುತ್ತ ತಿರುಗುವಂತೆ ನನ್ನ ಸುತ್ತ ತಿರುಗುತ್ತಿದ್ದವು. ಯಾಕೋ ಏನೋ, ಒಂದು ಕ್ಷಣ ಸೂರ್ಯಮಂಡಲಾಧಿ ಪತಿಯಾದ ಸೂರ್ಯ ನಾನೇನೋ ಏನೋ ಎಂದು ಹೆಮ್ಮೆ ಪಟ್ಟೆ ಏನಿದು? ಇದೂ ನನಗೆ ಬೀಳುವ ನೂರಾರು ಕನಸುಗಳಲ್ಲೊಂದು ಅನಿಸಿ ಪುನಃ ಮುಸುಕ ಎಳದೇ ಬಿಟ್ಟೆ! ಅರ್ಧ ಗಂಟೆಯಷ್ಟು ಮಲಗಿರಬಹುದು, ಮತ್ತೆ ಎದ್ದೆ. ಮತ್ತೆ ಅದೇ ಅನುಭವ! ಎಲ್ಲೋ ಭೂಮಿ ನಡಗ್ತಾ ಇದೆ ಅಂದು ಕೊಂಡು ಮನೆಯ ಹೊರಗೋಡುವ ಯತ್ನದಲ್ಲಿ ತೊಡಗಿದೆ. ಧೊಪ್ಪನೆ ನೆಲದ ಮೇಲೆ ಅನಾಮತ್ತು ಕುಸಿದಾಗ ಮನೆಮಂದಿಯೆಲ್ಲಾ ಓಡಿ ಬಂದು ಮಾಡಿದ ಶೈತ್ಯೋಪಚಾರದಿಂದ ಎಚ್ಚೆತ್ತಾಗ ತಿರುಗುತ್ತಿದ್ದುದು ನನ್ನ ತಲೆ ಎಂದು ಖಚಿತವಾಯಿತು. ಎಷ್ಟು ಹೊತ್ತಾದರೂ ಸುಧಾರಿಸಲಾಗದೆ ವೈದ್ಯರ ಮೊರೆ ಹೊಕ್ಕಬೇಕಾಗಿ ಬಂತು. ಸರಿ, ಶುರು ಆಯಿತು, ಟೆಸ್ಟು ಈ ಎಕ್ಸ್‌ರೆ ಇತ್ಯಾದಿ. ಕೊನೆಯದಾಗಿ ಡಾಕ್ಟರ್ ಉವಾಚ:- "ಎಲ್ಲಾ ಚೆನ್ನಾಗೇ ಇದೆ, ಆದರೆ... ಎಲ್ಲಾ ಜಾಣ ತುಸು ಕೋಣ ಎನ್ನೋ ಹಾಗೇ ನಿನ್ನ ತಲೇನ ನಿನ್ನ ಕತ್ತು ಹೊರಲಾರದು." "ಇದೇನೀ ಮಾತು. ಹೊಸದಾಗಿ ಏನಾದ್ರೂ ಕಚಡಾ ತುಂಬಿಕೊಂಡು ಬಂದೆ ಅನ್ನೋ ಹಾಗಂತೀರಿ? ನನ್ನ ತಲೆ ಹೊತ್ತೂ ಹೊತ್ತೂ ಅಭ್ಯಾಸ ಆಗ್ಲಿಲ್ವಾ ಇನ್ನೂ ನನ್ನ ಕತ್ತಿಗೆ? ಆದಾಗ್ಯೂ ನಾನು ಬೇಕಂತ ಅಷ್ಟು ಗೊತ್ತಿಲ್ಲದೆ ಬೇಕಾದಷ್ಟನ್ನೂ ಮರೀತಾ ಇದೀನಿ. ಹೊಸಾದೇನೂ ಕಲೆಯೋಂಥಾ ಕರ್ಮದ ಗೋಜಿಗೆ ಎಂದೂ ಹೋದವಳಲ್ಲ. ಮತ್ತೂನೂ ಗಂಟಲು ದೊಡ್ಡದಾಗೇ ಇದೆಯಲ್ಲಾ" ಎಂದು ರಾಂಗ್ ಹೊಡೆದೆ. 'ಉಹುಂ' ಆಯಪ್ಪ ಕೇಳೋ ಮೂಡಲ್ಲೇ ಇರಲಿಲ್ಲ. ಗಂಟಲು - ಕುತ್ತಿಗೆ ಮೇಲೆ ಬೇಜಾನ್ ಖಬರು-ಕಥೆ ಹೇಳಿ, ವ್ಯಾಯಾಮ ಮಾಡಲೇ ಬೇಕೆಂದೂ, ಹಾಗೂ ಕುತ್ತಿಗೆಗೆ ಕಾಲರನ್ನೂ ಪ್ರಸಾದಿಸಿದರು.

ಅಂದಿನಿಂದ ಈ ಹೊಸ ಶೈಲಿಗೆ ಹೊಂದಿಕೊಳ್ಳ ಬೇಕಾಗಿ ಬಂತು. ಗುಣವಾಗದ್ದನ್ನು ಅನುಭವಿಸಲೇಬೇಕೆನ್ನುವ ಸಿದ್ಧಾಂತಕ್ಕೆ ಒಗ್ಗಿಕೊಂಡೆ. ಇದೆಲ್ಲಾ ನಡೆದು ಬೇಕಾದಷ್ಟು ಸಮಯವಾದರೂ ಇನ್ನೂ ಮೋಜಿನ ಸಂಗತಿಗಳು ನನ್ನ ಹಾದಿಯಲ್ಲಿ ಬರುತ್ತಲೇ ಇವೆ. ಇದರ ಹೊಸತರಲ್ಲಿ ನಮ್ಮ ಶಂಕ್ರು ಬಂದ. "ಇದೇನೇ, ನಿನ್ನ ಅವಸ್ಥೆ? ಯಾರೇ ಅವನು, ನಿನ್ನ ಡಾಕ್ಟರು? ಇದೆಲ್ಲಾ Out dated ಉ ಕಣೇ, ಪಾಪ, ಅವನಿಗೆ ಇನ್ನೂ ಗೊತ್ತಿಲ್ಲವೇನೊ? ಮೊದಲು ಇದನ್ನ ಎತ್ತಿಬಿಸಾಕು. ಇಲ್ಲದಿದ್ರೆ, ಎಲ್ಲಿಲ್ಲದ ನೋವುಗಳು ಹುಟ್ಟಿಕೊಳ್ಳುತ್ತವೆ ಇದರಿಂದ." ಅಂತ ಡಿಕ್ಲೇರ್ ಮಾಡ್ಬಿಟ್ಟ ಅವನ್ಹೆಂಡ್ತಿ ಶ್ರೀದೇವಿ, 'ಇವರ ಮಾತನ್ನ ಕೇಳ್ಬೇಡಿ. ಅತ್ತಿಗೆ, ಇವರೇನು ಮಹಾ ದೊಡ್ಡ ಆರ್ಥೋಪೆಡಿಶಿಯನ್ನಾ? ಹೋಗ್ಲಿ ಅಂದ್ರೆ ಫಿಸಿಯೋಥೆರಪಿಸ್ಟಾ? ಕಂಡಿಲ್ವಾ ಇವರ ವೈದ್ಯ ಪ್ರಜ್ಞೇನಾ? ನಿಮ್ಮ ಡಾಕ್ಟರ್ ಹೇಳಿದ್ಹಂಗೆ ಕೇಳಿ' ಅಂತ ಅವನ ಡಿಕ್ಲರೇಶನ್‌ನ ಜಬ್ ಸೇ ಜಬ್ ವಿಟೋ ಮಾಡೇಬಿಟ್ಲು, ಕಾಲೇಜಿಗೆ ಹೊರಟೆ.

ಬಸ್ ಸ್ಟಾಪ್‌ನಲ್ಲಿ ಸಿಕ್ಕ ಮಯೂರ, "ಏನ್ರೀ, ನಿಮ್ಗೂ ಬಂತಾ ಇದು? ನಮ್ಮ ಯಜಮಾನ್ರು ಯಾವಾಗ್ಲಿಂದ್ಲೋ ಹಾಕ್ಕೋಬೇಕಿತ್ತು. ಅಷ್ಟೆ ಕೇಳ್ಬೇಕಲ್ಲಾ, ಅವರು. ಇವತ್ತು ನಿಮ್ಗೂ ಬಂತು ಅಂತ ಹೇಳ್ತೀನಿ. ಅಂದ್ಮೇಲೆ ಅವರು ಹಾಕ್ಕೊಂಡೇ ಹಾಕ್ಕೋತಾರೆ!" ಅಂದ್ಲು. ಇದೆಂಥಾ ಸ್ಪರ್ಧೆನೋ ನಾನು ಹಾಕ್ಕೊಂಡಿದಕ್ಕೂ ಅವರ ಹಾಕ್ಕೊಳೊಕ್ಕೂ, ನನಗೆ ಅರ್ಥ ಆಗದೆ ಕಣ್ಣು ಕಣ್ಣು ಬಿಟ್ಟೆ.

ಬಸ್ಸು ಹತ್ತಿದೆ. ವಯೋ ವೃದ್ಧರಿಗೆಂದು ಎರಡು ಸೀಟುಗಳು ಮೀಸಲು ನಮ್ಮ ಸಿಟಿ ಬಸ್ಸುಗಳಲ್ಲಿ. ಅವುಗಳಲ್ಲಿದ್ದ ಒಬ್ಬರು ಬಿಳೀಕೂದಲುಳ್ಳವರು, ಇನ್ನೊಬ್ಬ ಧಾಂಡಿಗ ಯುವಕ ನನ್ನನ್ನು (ಕಾಲರ್ ಇದ್ದ ನನ್ನನ್ನು!) ಕಂಡು "ಬನ್ನಿ, ಅಜ್ಜಿ ನಿಮ್ಮ ಸೀಟು ನಿಮಗೇ ಕೊಡ್ತೀನಿ" ಅಂತ ಎದ್ದ. ಇದೊಂದು ಥರ ಕಸಿವಿಸಿ ಅನ್ನಿಸಿತು. ನಾನೇನು ಸೀನಿಯರ್ ಸಿಟಿಸೆನ್ ಹಾಗೆ ಕಾಣ್ತೀನಾ ಎಂದು ಕೊಂಡು. ನನ್ನ ಅಹಂಗೆ ಸ್ವಲ್ಪ ಪೆಟ್ಟಾದರೂ 'ಥಾಂಕ್ಯೂ ಬೇಟಾ' ಎಂದು ಸೀಟು ಸಿಕ್ಕಿದ ಸಂತೋಷ ವ್ಯಕ್ತ ಪಡಿಸಿದೆ. ಸ್ವಲ್ಪ ಹೊತ್ತು ಕಳೆಯಿತು. ಪಕ್ಕದಲ್ಲಿ ಕುಳಿತಿದ್ದ ಹಿರಿಯರು, "ಏನಮ್ಮಾ ನಿನ್ನ ಪ್ರಾಬ್ಲಮ್ಮೂ ಯಾಕೆ ಕತ್ತಿನ ಪಟ್ಟಿ ಧರಿಸಿದ್ದೀಯಾ? ಸ್ಪಾಂಡಿಲೈಟಿಸ್ಸಾ? ನೀನೇನೂ ಅಂದ್ಕೊಳ್ಳಿದ್ರೇ..." ಅಂದು ನನ್ನ ಬಲಗೈ ತೋರಿಸಲು ಕೇಳಿ ಅಲ್ಲಿನ ಹೆಬ್ಬೆಟ್ಟಿನ ಗೆಣ್ಣನ್ನು ಒತ್ತೀ ಒತ್ತೀ ನನ್ನ ಪ್ರಾಣ ತೆಗೆದರು. "ಹೀಗೆ ಪ್ರೆಶರ್ ಹಾಕ್ತಿದ್ರೆ ದಿನಕ್ಕೆ ಒಂದ್ಹತ್ತು ಹನ್ನೆರಡು ಬಾರಿ ನೋಡ್ತಿರು, ನಿನ್ನ ಸ್ಪಾಂಡಿಲೈಟಿಸ್ ಹುಟ್ಟಿಲ್ಲಾ ಅಂತ ಆಗ್ಹೋಗತ್ತೆ ಒಂದೆರಡು ದಿನಗಳಲ್ಲಿ" ಎಂದರು. ಅಷ್ಟೂ ಅಲ್ಲದೆ, ಅವರು ತಮ್ಮ ವಿಸಿಟಿಂಗ್ ಕಾರ್ಡನ್ನು ಕೊಟ್ಟು 'ನನ್ನ ಮನೆಗೆ ಬಾ, ತಾಯಿ. ನಾನು ಅಕ್ಯುಪ್ರೆಶರ್‌ನ ಎಲ್ಲರಿಗೂ ಫ್ರೀಯಾಗಿ ಹೇಳಿಕೊಡ್ತೀನಿ. ಮನುಷ್ಯನಾಗಿ ಹುಟ್ಟಿದ್ದಕ್ಕೆ ಏನಾದರೂ ಒಂದು ಒಳ್ಳೆಯ ಕೆಲಸ ಮಾಡಬೇಕು" ಎಂದು ಉಪದೇಶವಿತ್ತರು.

"ಆಯಿತು, ಸರ್, ಮತ್ತೆ ಭೇಟಿ ಮಾಡೋಣ" ಎಂದು ಕಳಚಿಕೊಂಡೆ. ಆ ಕ್ಷಣದಲ್ಲಿ ಮಾತ್ರ, "ನಾನೋ ಅಥವಾ ನನ್ನ ಸ್ಪಾಂಡಿಲೈಟಿಸ್ಸೋ, ಯಾರು ಹುಟ್ಟಿಲ್ಲಾ ಅನ್ನಿಸ್ಬಿಡತ್ತೆ ಈ ಟೆಕ್ನಿಕ್ಕೂ..." ಅಂದು ಕೊಂಡೆ.

ಹೀಗೇ ದಿನಕ್ಕೊಂದೊ ಎರಡೋ ಪ್ರಸಂಗಗಳು ನಡೆಯುತ್ತಿದೆ.

ಮೊನ್ನೆ ರಂಗತ್ತೆ ಯಾರಿಗೋ ಸೀಟು ಬೇಕು ಅಂತ ನನ್ನನ್ನ ಕಾಲೇಜಿಗೇ ಬಂದು ಭೇಟಿಯಾದರು. ಅದೆಲ್ಲಾ ಮರೆತು. "ಇದೇನು ಬಂತೇ, ನಿನಗೇ? ಅದೂ... ಇಷ್ಟು ಚಿಕ್ಕ ವಯಸ್ಸಿಗೇನೇ ಈ ಅವತಾರ? ನಿಮ್ಮ ಮಾವನಿಗೆ 75ವರ್ಷಕ್ಕೆ ಬಂತು ಅಂತ ನಾವೆಲ್ಲಾ ಪೇಚಾಡ್ತಿದ್ವಿ. ನಿನಗೆ ಈಗ್ಲೇ ಯಾಕೀ ಅರ್ಜೆನ್ಸಿ?" ಅಂದಾಗ ಈ ವಯಸ್ಸು ಎನ್ನುವುದು ಎಷ್ಟು Relative factor ಊ ಅನ್ನಿಸಿತ್ತು.

ಕಾಲೇಜಿಗೆ ಹೋಗುವಾಗ ಕಾಲರ್ ಹಾಕ್ಕೊಂಡ್ರೂ ಕ್ಲಾಸಿಗೆ ಹೋಗುವಾಗ ಅದನ್ನು ತಪ್ಪದೆ ಬಿಚ್ಚಿಡ್ತೇನೆ. ನನ್ನ ವಿದ್ಯಾರ್ಥಿಗಳು (ನನ್ನ ರೋಡಾವತಾರ ಕಂಡಿದ್ದರೋ ಏನೋ) ತರಗತಿಯಲ್ಲಿ ನನ್ನ ಬಗ್ಗೆ ಬಹಳ ಕಳಕಳಿ ತೋರಿಸಿದರು, "ನೀವು ಕೂತ್ಕೊಂಡೇ ಪಾಠ ಹೇಳಿ, ಮೇಮ್ ಪರವಾಗಿಲ್ಲ, ಬಹಳ ಸುಸ್ತು ಮಾಡ್ಕೋಬೇಡಿ" ಎಂದರು ಕಾಲರ್ ಹಾಕೊಂಡ

ಹೊಸತರಲ್ಲಿ "ಕೂತ್ರೆ ಬೋರ್ಡಿನ ಮೇಲೆ ಬರೆಯುವುದಕ್ಕಾಗಿ ಏಳಲೇ ಬೇಕಲ್ಲಾ. ಚಿತ್ರ ಬಿಡಿಸುವುದಾಗಲೀ, ಗ್ರಾಫ್/ಈ ಕ್ವೇಷನ್ ಆಗಲಿ ಕಡೇಗೆ ನಿಮಗಾಗಿ ಸ್ಪೆಲ್ಲಿಂಗ್ ಗೋಸ್ಕರ ವಾದರೂ ನಾನು ನಿಲ್ಲಲೇ ಬೇಕಲ್ಲಾ ಬೋರ್ಡಿನ ಹತ್ತಿರ? ಎದ್ದು-ಕೂತು ಮಾಡೋದಕ್ಕಿಂತ ನಿಂತಿರೋದ್ರಲ್ಲಿ ಕಡಿಮೆ ತ್ರಾಸು" ಅಂದೆ "ಹಾಗಾದ್ರೆ ತುಂಬಾ ಹುಷಾರಾಗಿರಿ ಮೇಮ್, ತಲೆತಿರಿಗಿದ್ರೆ ಹೇಳಿ. ಸಂಕೋಚ ಬೇಡ ನೋಡ್ಕೋತೀವಿ ನಿಮ್ಮನ್ನ!" (Perhaps ಇರಲಿ ಒಂದು ಕೈಯಿ ಅನ್ನೋಧಾಟೀಲಿ!) ಅದರ ಗುಪ್ತಾರ್ಥ, ಗೂಢಾರ್ಥ ಎಲ್ಲಾರಿಗೂ ಗೊತ್ತು-ಇವತ್ತು ಕ್ಲಾಸ್ ಬಿಡಬಾರದೆ ಎಂಬುದು! ಥಾಂಕ್ಯೂ ಫಾರ್ ಯುವರ್ ಕೈಂಡ್ ಕನ್ಸರ್ನ್ ಎಂದು ಪಾಠ ಶುರು ಮಾಡಿದಾಗ ಹ್ಯಾಪಿ ಮೋರೆಗಳು ಹೋಗಿ ಹಾಪ್ ಮೋರೆಗಳು ತೋರಿದವು ತರಗತಿಯ ತುಂಬ!

ಎದ್ದರೆ - ಕೂತರೆ ಹೆಡ್ಸ್ ಮೀಟಿಂಗ್‌ಗಳು ಕರೆಯಲ್ಪಡುತ್ತವೆ. ಅಂಥಾದ್ದೊಂದು ಮೀಟಿಂಗ್ ಪ್ರಾರಂಭವಾದಾಗ. ಫಿಸಿಕ್ಸ್ ಮುಖ್ಯಸ್ಥರು ಇನ್ಹೇಲರ್ ಧಾರಿಗಳಾಗಿಳಿದರು. ಮಾತ್ಸ್ ಹೆಡ್ ಸ್ಕೂಟರ್ ಆಕ್ಸಿಡೆಂಟ್‌ನಿಂದ ಚೇತರಿಸಿಕೊಳ್ಳುತ್ತಾ ಇದ್ದವರು ಚತುಷ್ಪಾದಿ ಕೋಲಿನ ಸಹಾಯದಿಂದ ಬಂದರು. ಪ್ರಾಣಿಶಾಸ್ತ್ರದ ಪ್ರೊಫೆಸರ್‌ರು ಕಣ್ಣಿನ ಆಪರೇಶನ್‌ನಿಂದ ಚೇತರಿಸಿಕೊಳ್ಳುತ್ತಿದ್ದುದರಿಂದ ದಪ್ಪ ಕಪ್ಪಿನ ಕನ್ನಡಕ ಧಾರಿಗಳಾಗಿದ್ದರು. ಕಡೆಯದಾಗಿ ನಾನು ಹೋದಾಗ, ನಮ್ಮ Principal Could not take it any more! "ಇದೇನಾಗಿದೆ, ನಮ್ಮ ಕಾಲೇಜಿಗೆ? ನೀವೆಲ್ಲ ಸೇರಿ ನಾನೇ ಚಿಕ್ಕವನೆಂದೂ ಆರೋಗ್ಯವಂತನೆಂದೂ ಆರೋಪಿಸಲು ಈ ಉಪಾಯ ಹೂಡಿರುವ ಹಾಗಿದೆಯಲ್ಲಾ" ಎಂದು ಹಲುಬಿದರು.

ರಾಜಮಾರ್ಗವಾದ ಅಬಿಡ್ಸ್ ರಸ್ತೆಯಲ್ಲಿ 'ನಮೋ ನಾರಾಯಣಾ' ಎಂದು ನಡೆಯುತ್ತಾ ಇದ್ದೆ, ಗಕ್ಕನೆ ರಾಂಗ್ ಸೈಡ್‌ನಿಂದ ಬಂದು ನಿಂತ ಬೈಕಿನ ಶಬ್ದದಿಂದ ಎಚ್ಚೆತ್ತು, ಮೊದಲು ನನ್ನ ಸರ ಭದ್ರ ಪಡಿಸಿಕೊಳ್ಳುವ ಯತ್ನದಲ್ಲಿ ಕತ್ತು ಮುಟ್ಟಿಕೊಂಡೆ. ಬೈಕಿನ ಸವಾರ ತೀರ ನನ್ನ ಹತ್ತಿರಕ್ಕೆ ಬಂದು "ಕೂತ್ಕೊಳ್ಳಿ ನನ್ನ ಪಿಲಿಯನ್ ಮೇಲೆ, ಈ ಕ್ಷಣ ನಿಮ್ಮನ್ನ ನಮ್ಮ ಡಾಕ್ಟರ್ ಹತ್ರ ಕರಕೊಂಡು ಹೋಗ್ತೀನಿ. ಅವರು ಸ್ಪಾಂಡಿಲೈಟಿಸ್ ಸ್ಪೆಷಲಿಸ್ಟು, ನಾಳೆಯಿಂದಲೇ ನೀವು ಫ್ರೀಯಾಗಿ ಓಡಾಡಬಹುದು ಈ ದರಿದ್ರನ ಕಿತ್ತೆಸೆದು..." ಅಂದ. "ಇದೆಲ್ಲಿನ ಗ್ರಾಚಾರ, ಅಂದು ಕೊಂಡು" ನಿಮ್ಮ ಡಾಕ್ಟರ್ ಹೆಸರು, ಟೆಲಿಫೋನ್ ನಂಬರು ಕೊಡಿ ಅಂತಿಸ್ಕೊಂಡೆ. 'ಥ್ಯಾಂಕ್ಸ್ ಫಾರ್ ಯುವರ್ ಆಫರ್ ಅಂದು ಗಾಡಿ ಬಿಟ್ಟೆ

ನನ್ನನ್ನೇ ನೋಡುತ್ತಾ ಬರುತ್ತಿದ್ದ ಇಬ್ಬರು ಪುಟ್ಟ ಹುಡುಗರು ತಂತಮ್ಮಲ್ಲೇ ಮಾತಾಡ್ತಿದ್ದುದು ಕೇಳಿಸಿತು. "ನಮ್ಮಮ್ಮ ಹೇಳ್ತಿದ್ರು ರೋಡು ತುಂಬ ಬೀದಿ ನಾಯಿಗಳು ಜಾಸ್ತಿ ಆಗ್ತಿವೆ, ಹುಷಾರಾಗಿರು ಅಂತ. ಅಂಥದೊಂದು ನಾಯಿ ಪಾಪ ಈ ಆಂಟೀ ಕಚ್ಚಿರಬೇಕು. ನೋಡು, ಎಷ್ಟು ದೊಡ್ಡ ಬ್ಯಾಂಡ್ ಏಡ್ (Band-aid) ಹಾಕ್ಕೊಂಡಿದ್ದಾರೆ!" ಎಂದ ಒಬ್ಬ ಚಿಲ್ಟು


ಇನ್ನೊಬ್ಬ "ನಾಯಿ ಸಾಮಾನ್ಯವಾಗಿ ಕಾಲನ್ನೇ ಕಚ್ಚತ್ತಲ್ಲೋ, ಕತ್ತು ಅದಕ್ಕೆ ಎಟುಕೋಲ್ಲ,

ಏನಾಯ್ತೋ ಏನೋ. ಅಂತೂ, ಪಾಪ-ತುಂಬಾ ನೋಯ್ತಿರಬೇಕು! ಎನ್ನುತ್ತಾ ಹೋಗ್ತಾ ಇದ್ರು!

ನನ್ನ ಸಹೋದ್ಯೋಗಿ ಡಾ|| ಕೃಷ್ಣರವರಿಗೆ ಒಂದು ಉಪಾಯ ಹೊಳೆಯಿತು. 100 ರೂ. ಕೊಟ್ಟು ಒಂದು ಕಾಲರ್ ಕೊಂಡು ಕತ್ತಿಗೆ (ಅವರ ಶ್ರೀಮತಿಯ ಕುತ್ತಿಗೆಗೆ) ಏರಿಸಿದರೆ ನೆಕ್‌ಲೇಸ್ ಕೊಂಡ್ಕೊಡ ಬೇಕಿಲ್ಲ. ಹಾಗೆ ಮದುವೆ ಸಮಾರಂಭಗಳಿಗೆ ಹೋದರೆ ಮೊದಲನೆಯ ಪಂಕ್ತಿಯಲ್ಲಿ ಊಟಕ್ಕೆ ಸೀಟು ಗ್ಯಾರಂಟಿ. ಹೂವಿನಿಂದ ನಾರೂ ಸ್ವರ್ಗಕ್ಕೆ ಏರಿದಂತೆ ತನಗೂ ಬೇಗ ಊಟಕ್ಕೆ ಛಾನ್ಸು ಸಿಕ್ಕತ್ತೆ. ಬಫೆ ಆದರೆ ತುಂಬಿದ ತಟ್ಟೆ ಅವಳ ಕೈಗೆ ಯಾರಾದರೂ ತಂದು ಕೊಡ್ತಾರೆ. ಇತ್ಯಾದಿ ಫ್ರಿಂಜ್ ಬೆನಿಫಿಟ್ಸ್! ಅಂತಯೋಚಿಸಿದರು. ನಾನು prompt ಆಗಿ ಅವರ ಶ್ರೀಮತಿಯವರಿಗೆ ಈ ಉಪಾಯ ಹಾಗೂ Fringe benefits ನ ಕಥೆ ದೂರುವಾಣಿಸಿದೆ. ಆಕೆ, "ನಾನೂ ನೋಡ್ತೇನೆ, ಯಾರು ಕಾಲರ್ ಹಾಕ್ಕೊಳ್ತಾರೋ ಅನ್ನೋದನ್ನೇ ಸುಮ್ನೆ ನೆಕ್‌ಲೆಸ್ ಗೆ ಖರ್ಚು ಮಾಡೋಕೆ ಹಿಂದು-ಮುಂದು ನೋಡ್ತಿದ್ರೆ, ನನಗೆ Double benfit ಅಂತ ತಿಳಿಸಿ. ನಾನು ನೆಕ್‌ಲೆಸ್ ಹಾಕ್ಕೊಂಡು, ಇವರು ನಾಯಿ ಹಾಗೆ ಬೆಲ್ಟ್ ಹಾಕ್ಕೊಂಡು ಹೋದ್ರೆ, ನನಗೆ ಆಭರಣದ ಜೊತೆಗೆ Quick turn in the dining hall! ಇವರಿಗೆ 100ರೂ. ಹೆಚ್ಚು ಖರ್ಚು!" ಎಂದು ಮನದಲ್ಲೇ ಮಂಡಿಗೆ ಮೆದ್ದರು!

"ಕಾಲರ್ ಇರಲಿ, ಮಾರಾಯ್ತಿ! ಮಸ್ತು ತಮಾಷೆ ತರತ್ತೆ. ಯಾರೊಬ್ಬರಾದ್ರೂ ಹಾಕ್ಕೊಳ್ಳಿ, ಒಟ್ಟಿನಲ್ಲಿ ಮನೋರಂಜನೆ ಗ್ಯಾರಂಟಿ" ಅಂದೆ ನಾನು, ಏನೋ ಕಾಲರ್ ಫ್ಯಾಕ್ಟರಿ ನನಗೆ ಕಮೀಷನ್ ಕೊಡೋ ಹಾಗೆ! ಅಂತೂ 'ಕಾಲರ್ ಆಯ ತಸ್ಮೈ ನಮಃ' ಅಂದೆ.

ಮುಂದೆ ಕಿಷ್ಕಿಂಧೆ ಚುನಾವಣೇಲಿ ನೀಲನಿಗೆ
ಟಿಕೆಟ್ ಕೊಡಲೇಬೇಕು ಕಣಣ್ಣಾ




Mailing Date
5th of every month
Mailed at: Rajajinagar - PO

CPMG/KA/BGW-544/2006-200
RNI-KAR-KAN / 2005 / 15457

MALLIGE

PERSONALISED COMPLETE MEDICAL CARE



Mallige Medical Centre

31/32, Crescent Road,

Bangalore – 560001

Phone: 22203333, Fax: 22265298

E-mail: info@mallige.com

Mahabodhi Mallige Hospital

T. Mariappa Road, 1st Block, Jayanagar,

Bangalore – 560011

Phone: 26565678, Fax: 26571516

Web: http://www.mallige.com

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR